ಸಾಹಿತ್ಯ ದಾಸೋಹ – 239

ಸಂಚಿಕೆ 63 – ಆಗಸ್ಟ್ 2025
12.07.2025ರ ದಾಸೋಹದ ಬರಹಗಳ ಸಂಕಲನ



ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಪುಟ ತೆರೆಯುವ ಮುನ್ನ...

ನಮ್ಮ ಮಾತು

ಆತ್ಮೀಯರೆ,

ಪ್ರತಿ ವರ್ಷ ಆಗಸ್ಟ್ ತಿಂಗಳು ನಮ್ಮ ವೇದಿಕೆಗೆ ಬಹಳ ಚಟುವಟಿಕೆಯ ಮಾಸ. ಈ ಬಾರಿಯೂ ಅಷ್ಟೆ, ಎಂದಿನಂತೆ ಸಾಹಿತ್ಯ ದಾಸೋಹ, ತಿಂಗಳ ಬೆಳಕು ಕಾರ್ಯಕ್ರಮಗಳು ಮಾತ್ರವಲ್ಲದೆ, ಶ್ರಾವಣ ಮಾಸದ ಮಕ್ಕಳ ಕಥಾ ಅಭಿಯಾನ, ಎಚ್ಚೆಸ್ಕೆ ದತ್ತಿ ಉಪನ್ಯಾಸ ಮತ್ತು ವಿಶೇಷವಾಗಿ ಗಾನಕಲಾಭೂಷಣ ವಿದ್ವಾನ್ ಆರ್.ಕೆ. ಪದ್ಮನಾಭರ ಐದು ಕಾದಂಬರಿಗಳ ಮರುಮುದ್ರಣ ಕೃತಿ ಬಿಡುಗಡೆ ಮತ್ತು ಈ ಕೃತಿಗಳ ಬಗ್ಗೆ ಐವರು ಸಾಹಿತಿಗಳಿಂದ "ಆರ್.ಕೆ. ಪದ್ಮನಾಭರ ಕಾದಂಬರಿಗಳಲ್ಲಿ ಕರ್ನಾಟಕ ಸಂಗೀತದ ಅನುರಣನ" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ವೇದಿಕೆ ಆಯೋಜಿಸಿತ್ತು.

ಈ ಎಲ್ಲ ಕಾರ್ಯಕ್ರಮಗಳ ವರದಿಗಳು, ಚಿತ್ರಗಳು, 'ಕವಿಮನ' ಅಂಕಣದ ಕವನಗಳು, ದಾಸೋಹದಲ್ಲಿ ಪ್ರಸ್ತುತಿಪಡಿಸಲಾದ ಎಲ್ಲ ಬರಹಗಳನ್ನೂ ಈ ಸಂಚಿಕೆ ಒಳಗೊಂಡಿದೆ. 'ಶ್ರಾವಣ ಮಕ್ಕಳ ಕಥಾ ಅಭಿಯಾನ'ದಲ್ಲಿ ವೇದಿಕೆಯ ಸದಸ್ಯರು 29 ದಿನಗಳಲ್ಲಿ 900ಕ್ಕೂ ಹೆಚ್ಚು ಹೊಸ ಕತೆಗಳನ್ನು ಬರೆದು ಮಕ್ಕಳ ಕಥಾಲೋಕಕ್ಕೆ ತಮ್ಮದೇ ಆದ ಸಾಹಿತ್ಯಕ ಕೊಡುಗೆ ನೀಡಿದ್ದಾರೆ. ಈ ಕುರಿತ ಹೆಚ್ಚಿನ ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ನೀಡಲಾಗುವುದು.

ಸಾಹಿತ್ಯ ದಾಸೋಹ 239ರ ಅಧ್ಯಕ್ಷತೆ ವಹಿಸಿ ಎಲ್ಲ ಪ್ರಸ್ತುತಿಗಳನ್ನೂ ವಿಶ್ಲೇಷಿಸಿದ ಶ್ರೀಮತಿ ಸಿ.ಆರ್. ಕಮಲಾಕ್ಷಿಯವರಿಗೂ, ಪ್ರಸ್ತುತಿಕಾರರಿಗೂ, ಇತರ ಎಲ್ಲಾ ಕಾರ್ಯಕ್ರಮಗಳಲ್ಲೂ ಪಾಲ್ಗೊಂಡು ಪ್ರೋತ್ಸಾಹಿಸಿದ ಸಭಿಕರು ಮತ್ತು ತಾಂತ್ರಿಕ ನೆರವು ನೀಡಿದವರು ಹಾಗೂ ಈ ಸಂಚಿಕೆ ರೂಪಿಸುವಲ್ಲಿ ಸಹಕರಿಸಿದ ಎಲ್ಲರಿಗೂ ನಮ್ಮ ಧನ್ಯವಾದಗಳು.

ಈ ಸಂಚಿಕೆಯ ಬಗೆಗಿನ ತಮ್ಮ ಅನಿಸಿಕೆಗಳಿಗೆ ಸ್ವಾಗತ.

ವಂದನೆಗಳೊಂದಿಗೆ,

ಸಂಚಾಲಕ ಸಮಿತಿ

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ 31.08.2025

ದಾಸೋಹದ ಪುಟಗಳಲ್ಲಿ...

ಮುಖಚಿತ್ರ – 'ಮಧುರಾಂತರಂಗ' (ವರ್ಣಚಿತ್ರ – ಕೆ.ಆರ್.ಎಸ್. ಮೂರ್ತಿ)
ನೋಡಿ: ಮುಖಚಿತ್ರ ಕವನ – ಪುಟ 56)

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ – 239

ಕಾರ್ಯಕ್ರಮ ವರದಿ: ರಾಧಿಕಾ ಗುಜ್ಜರ್

12ನೆಯ ಜುಲೈ 20205ರ ಶನಿವಾರದಂದು ಇಳಿ ಮಧ್ಯಾಹ್ನ 3.30ಕ್ಕೆ ಜುಲೈ ತಿಂಗಳ ನೋಡಿಯೋ ಸಾಹಿತ್ಯ ದಾಸೋಹವು ಗೂಗಲ್ ಮೀಟ್ ಅಂತರಜಾಲ ಮುಖೇನ ಆರಂಭವಾಯಿತು. ಶ್ರೀ ಕೆ.ಎನ್. ಮಹಾಬಲ ಅವರು ಸಭೆಯ ಸಾರಥ್ಯ ವಹಿಸಿದ್ದು, ಎಲ್ಲರನ್ನೂ ಔಪಚಾರಿಕವಾಗಿ ಸ್ವಾಗತಿಸುವುದರೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಶ್ರೀಮತಿ ಸ್ನೇಹ ಶಶಿಧರ್ ಅವರು 239ನೆಯ ಸಾಹಿತ್ಯ ದಾಸೋಹದ ಅಧ್ಯಕ್ಷತೆ ವಹಿಸಿದ ಶ್ರೀಮತಿ ಸಿ.ಆರ್. ಕಮಲಾಕ್ಷಿಯವರನ್ನು ಪರಿಚಯಿಸಿ ಸಭಾಧ್ಯಕ್ಷರು ಮತ್ತು ಎಲ್ಲ ಸಭಿಕರನ್ನೂ ಸ್ವಾಗತಿಸಿದರು.

ಸಂಚಾಲಕ ಸಮಿತಿಯ ಪರವಾಗಿ ಶ್ರೀ ಬೆಂ.ಶ್ರೀ. ರವೀಂದ್ರ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿ,

- ಮತ್ತೆ ಶ್ರಾವಣ ಬಂದಿದೆ. 25.07.2025ರಿಂದ 23.08.2025ರವರೆಗೆ 29 ದಿನಗಳ ಕಾಲ ಶ್ರಾವಣ ಮಾಸ ನಡೆಯಲಿದೆ. ಕಳೆದ ಎರಡು ವರ್ಷಗಳಿಂದ "ಶ್ರಾವಣ ಸಾಹಿತ್ಯ ಪರ್ವ" ನಡೆಸುತ್ತಿದ್ದೇವೆ. ಈ ಬಾರಿ ಮಕ್ಕಳ ಸಾಹಿತ್ಯದ ಕೃಷಿಯನ್ನು ಕೈಗೊಳ್ಳೋಣ. ಮಕ್ಕಳ ಕತೆಗಳ ಸಾಹಿತ್ಯ ಪರ್ವ ಇರುವುದನ್ನು ಗಮನಿಸಿ, ನಿಯಮಾವಳಿಗಳ ಅನುಸಾರ ಮಕ್ಕಳಿಗಾಗಿ 300 ಪದಗಳ ಮಿತಿಯಲ್ಲಿ ಕತೆಗಳನ್ನು ಬರೆಯಿರಿ" ಎಂದು ಕರೆ ನೀಡಿದರು. ಕಳೆದ ವರ್ಷದ ಶ್ರಾವಣ ಸಣ್ಣ ಕಥಾ ಅಭಿಯಾನದಲ್ಲಿ 1072 ಸಣ್ಣ ಕಥೆಗಳು ವೇದಿಕೆಯಲ್ಲಿ ಪ್ರಕಟಗೊಂಡವು. ಈ ಬಾರಿ ಇನ್ನೂ ದೊಡ್ಡ ಗುರಿಯನ್ನು ಸಾಧಿಸೋಣ. ಕನಿಷ್ಠ 3000 ಕತೆಗಳು ಬರಲಿ ಎಂದು ಆಶಿಸಿದರು;

- ಶ್ರೀ ಕೆ.ಎನ್.ಮಹಾಬಲ ಅವರು, ಶಿಶು ಸಾಹಿತ್ಯಕ್ಕೆ ಕೊಡುಗೆ ನೀಡಿದ ಸಾಹಿತಿಗಳ ಪುಟ್ಟ ಪರಿಚಯದ ವಿಶೇಷ ಮಾಲಿಕೆ ಬರೆಯುತ್ತಿದ್ದು, ಅವರ ಈ ಮೌಲಿಕ ಕೊಡುಗೆಗೆ ವಂದನೆ ಹಾಗೂ ಅಭಿನಂದನೆಗಳನ್ನು ತಿಳಿಸಿದರು;

- ಪ್ರಾಚಾರ್ಯ ಎಚ್ಚೆಸ್ಕೆ ದತ್ತಿ ಉಪನ್ಯಾಸ ಸರಣಿಯ ಅಡಿಯಲ್ಲಿ "ಬ್ಯಾಂಕಿಂಗ್ ವಲಯದಲ್ಲಿ ಕನ್ನಡದ ಬಳಕೆ" ವಿಷಯದ ಕುರಿತು ಈ ಬಾರಿ ಏಳನೆಯ ಉಪನ್ಯಾಸವನ್ನು 07.05.2025 ರಂದು ನಾನೇ ನೀಡಲಿದ್ದೇನೆ. ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ನಡೆಯಲಿರುವ ಕಾರ್ಯಕ್ರಮಕ್ಕೆ ಎಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪ್ರಾಚಾರ್ಯರಿಗೆ ಗೌರವ ಸಲ್ಲಿಸಿ ಎಂದು ಕೋರಿದರು;

- ದಿನಾಂಕ 10.08.2025ರಂದು ಐದು ಕಾದಂಬರಿಗಳನ್ನು ಬರೆದಿರುವ ಗಾನಕಲಾಭೂಷಣ ವಿದ್ವಾನ್ ಆರ್.ಕೆ. ಪದ್ಮನಾಭ



ಅವರ ಐದು ಕೃತಿಗಳ ವಿಶ್ಲೇಷಣೆಯನ್ನು ಸಮನ್ವಯ ಸಮಿತಿಯ ಐದು ಜನ ಸದಸ್ಯರು ಮಾಡುತ್ತಿದ್ದಾರೆ. ಅವರ ಈ ಐದೂ ಕೃತಿಗಳು ಮರುಮುದ್ರಣಗೊಂಡಿರುವ ಸಂತಸವನ್ನು ಆಚರಿಸೋಣ. ಇದು ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಕಾರ್ಯಕ್ರಮವಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಒಂದು ಅಭೂತಪೂರ್ವ ಕಾರ್ಯಕ್ರಮಕ್ಕೆ ಸಾಕ್ಷಿಯಾಗಿ ಎಂದು ಕರೆ ನೀಡಿದರು;

○ ಶ್ರೀ ಶೃಂಗೇಶ್ವರ ಶರ್ಮ ಅವರು ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಸಾಹಿತ್ಯ ದಾಸೋಹ ಮತ್ತಿತರ ಕಾರ್ಯಕ್ರಮಗಳ ಪಿಡಿಎಫ್ ಸಂಚಿಕೆಯನ್ನು ಬಹಳ ವೈವಿಧ್ಯಮಯವಾಗಿ, ವರ್ಣಮಯವಾಗಿ, ಅಚ್ಚುಕಟ್ಟಾಗಿ ವಿನ್ಯಾಸಗೊಳಿಸುತ್ತಿದ್ದು, ಅವರಿಗೂ, ಅವರೊಂದಿಗೆ ಸಹಕರಿಸುತ್ತಿರುವ ಎಲ್ಲರಿಗೂ ಅಭಿನಂದನೆಗಳು ಹಾಗೂ ಧನ್ಯವಾದಗಳನ್ನು ಸಲ್ಲಿಸಿದರು.

ನಂತರ ದಾಸೋಹದಲ್ಲಿ ಲೇಖನಗಳನ್ನು ಪ್ರಸ್ತುತಪಡಿಸಲು ನೋಂದಾಯಿಸಿದ್ದ ವೇದಿಕೆಯ ಸದಸ್ಯರಿಂದ ಸ್ವರಚಿತ ಲೇಖನಗಳ ವಾಚನವು ಆರಂಭವಾಯಿತು. ಇಪ್ಪತ್ತೊಂದು ಸದಸ್ಯರು ಪ್ರಸ್ತುತಿಗಾಗಿ ನೋಂದಾಯಿಸಿದ್ದು, ಹದಿನೆಂಟು ಲೇಖಕರು ವಾಚಿಸಿದರು.

ಪ್ರಸ್ತುತಿಗಳು ಮುಗಿದ ನಂತರ ಅಧ್ಯಕ್ಷರಾದ ಶ್ರೀಮತಿ ಕಮಲಾಕ್ಷಿ. ಸಿ.ಆರ್. ಅವರು ತಮ್ಮ ಅನಿಸಿಕೆಯನ್ನು ದಾಖಲಿಸಿದರು. ಶ್ರೀ ಜನಾರ್ದನ ತುಂಗ ಅವರು ಹೇಳಿದಂತೆ, "ಈ ಬಾರಿಯ ದಾಸೋಹದಲ್ಲಿ ಸುಮಾರು ಕಾಲ ಭಾಗವಹಿಸಿದೆ. ಅಧ್ಯಕ್ಷೀಯ ಮಾತುಗಳನ್ನು ಪ್ರಸ್ತುತಪಡಿಸಿದ ರೀತಿ ಆಕರ್ಷಕವಾಗಿತ್ತು. ನುರಿತ ನಿರೂಪಕಿಯಂತೆ ಸ್ಪಷ್ಟವಾಗಿ ಮಾತನಾಡಿದರು. ಅಭಿನಂದನೆಗಳು".

ತುಂಗ ಅವರದು ಅತ್ಯಂತ ಪ್ರಾಮಾಣಿಕವಾದ ಮಾತು. ಅಧ್ಯಕ್ಷರು ತನ್ಮಯತೆಯಿಂದ, ನಗುಮೊಗದಿಂದ ವಿನಮ್ರರಾಗಿ ಪ್ರತಿಯೊಂದು ಪ್ರಸ್ತುತಿಯ ಒಳನೋಟವನ್ನು ತೆರೆದಿಟ್ಟರು.

ಶ್ರೀ ಕೆ.ಎನ್.ಮಹಾಬಲ ಅವರು ವಂದನಾರ್ಪಣೆಯನ್ನು ಸಲ್ಲಿಸುವುದರೊಂದಿಗೆ ಜುಲೈ ತಿಂಗಳ ನೋಡಿಯೋ ಸಾಹಿತ್ಯ ದಾಸೋಹವು ಸಮಾಪ್ತಿಯಾಯಿತು.

ಸಾಹಿತ್ಯ ದಾಸೋಹದ ಸಾರಥ್ಯ : ಶ್ರೀ ಕೆ.ಎನ್.ಮಹಾಬಲ
ಜಿ ಮೀಟ್ ಆತಿಥ್ಯ : ಶ್ರೀಮತಿ ರಾಧಿಕಾ ವಿ. ಗುಜ್ಜರ್

ಸಾಹಿತ್ಯ ದಾಸೋಹದ ಸಂಪೂರ್ಣ ಕಾರ್ಯಕ್ರಮವನ್ನು ನಮ್ಮ ವೇದಿಕೆಯ ಯುಟ್ಯೂಬ್‌ನಲ್ಲಿಯೂ ಲಭ್ಯವಿದೆ.

.

***

ತಿಂಗಳ ಬೆಳಕು - 17

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಕವಿ, ಚಿಂತಕ, ವ್ಯಾಖ್ಯಾನಕಾರ
ಶ್ರೀ ಬಿ.ಎಸ್. ಚಂದ್ರಶೇಖರ್ ಅವರ ಕೃತಿಗಳ ಒಂದು ಪಕ್ಷಿನೋಟ

ವರದಿ: ಶೃಂಗೇಶ್ವರ ಶರ್ಮ ಎಸ್.

ದಿನಾಂಕ ೨೬-೦೭-೨೦೨೫ರಂದು ಶನಿವಾರ ಸಂಜೆ ೫.೩೦ಕ್ಕೆ 'ತಿಂಗಳ ಬೆಳಕು' ಕಾರ್ಯಕ್ರಮದಲ್ಲಿ ಶ್ರೀ ಹು.ವಾ. ಶ್ರೀಪ್ರಕಾಶ್ ಅವರು ಶ್ರೀ ಬಿ.ಎಸ್.ಚಂದ್ರಶೇಖರ್‌ರವರ ವಿವಿಧ ಸಾಹಿತ್ಯಿಕ ಕೃತಿಗಳ ಬಗ್ಗೆ ಗೂಗಲ್ ಮೀಟ್ ಅಂತರಜಾಲ ವೇದಿಕೆಯಲ್ಲಿ ಮಾತನಾಡಿದರು.

ಆರಂಭದಲ್ಲಿ ತಿಂಗಳ ಬೆಳಕು ಸಂಚಾಲಕರಾದ ಶ್ರೀ ರವಿ ಕುಸಬಿಯವರು ಪ್ರಸ್ತಾವಿಕ ಮಾತುಗಳನ್ನಾಡಿದರು. ಶ್ರೀಮತಿ ನಾಗರತ್ನ ಚಂದ್ರಶೇಖರ್‌ರವರು ಶ್ರೀ ಬಿ.ಎಸ್.ಚಂದ್ರಶೇಖರ್ ಹಾಗೂ ಶ್ರೀ ಹು.ವಾ.ಶ್ರೀಪ್ರಕಾಶ್‌ರವರನ್ನು ಪರಿಚಯಿಸಿ ಎಲ್ಲರನ್ನೂ ಸ್ವಾಗತಿಸಿದರು.



ಸುಮಾರು ಒಂದು ಗಂಟೆ ಕಾಲ ನಡೆದ ಉಪನ್ಯಾಸದಲ್ಲಿ ಶ್ರೀ ಶ್ರೀಪ್ರಕಾಶ್ ಅವರು, ಶ್ರೀ ಬಿ.ಎಸ್.ಚಂದ್ರಶೇಖರ್ ರಚಿಸಿದ ಕವನ ಬರೆವೆಯಾ ಕಂಪ್ಯೂಟರ್, ಕಾಣುತಿಹುದೀಗಿಷ್ಟೆ, ಪುಟ್ಟಿಯ ಕನಸು, ಹಕ್ಕಿಗಳ ಕಾಗುಣಿತ ಕವನ ಸಂಕಲನಗಳಲ್ಲಿರುವ ಕವನಗಳನ್ನು ಪ್ರಸ್ತಾಪಿಸಿದರು. 'ಇಚ್ಛಾಶಕ್ತಿ' ಪ್ರಬಂಧ ಸಂಕಲನದ ಕೆಲವು ಪ್ರಮುಖ ಲೇಖನಗಳ ಪಕ್ಷಿನೋಟ ನೀಡಿದರು. ಅವರ ಇತರ ಕೃತಿಗಳಾದ ಭಾರತದಲ್ಲಿ ಬ್ಯಾಂಕಿಂಗ್ ಕೆಲವು ಚಿಂತನೆಗಳು, ಸವಿಗನ್ನಡ ಸ್ತೋತ್ರಚಂದ್ರಿಕೆ, ಮಹಾನಾರಾಯಣ ಉಪನಿಷತ್ತು ಕುರಿತು ಸಂಕ್ಷಿಪ್ತವಾಗಿ ಪರಿಚಯಿಸಿ, ಸಮಯದ ಅಭಾವದಿಂದಾಗಿ ಸಂಗೀತದ ಗಂಧ, ಲಲಿತಾನಂದ ಲಹರಿ, ಜಿ.ಪಿ. ರಾಜರತ್ನಂ, ವಿ.ಸೀತಾರಾಮಯ್ಯ, ಮುಂತಾದ ಕೃತಿಗಳ ಬಗ್ಗೆ ಸವಿಸ್ತಾರವಾಗಿ ಮಾತನಾಡಲು ಅಸಾಧ್ಯವಾದುದಕ್ಕೆ ಶ್ರೀಪ್ರಕಾಶ್ ವಿಷಾದ ವ್ಯಕ್ತಪಡಿಸಿದರು.

ಕೊನೆಯಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಹಲವರು ತಮ್ಮ ಅನಿಸಿಕೆಗಳನ್ನು ತಿಳಿಸಿದರು. ಸಭೆಯಲ್ಲಿ ಪಾಲ್ಗೊಂಡಿದ್ದ ಶ್ರೀ ಬಿ.ಎಸ್. ಚಂದ್ರಶೇಖರ್ ಸಹ ಕೆಲವರ ಪ್ರಶ್ನೆಗಳಿಗೆ ಸೂಕ್ತವಾಗಿ ಉತ್ತರಿಸಿದರು.

ಶ್ರೀಮತಿ ರೇಣುಕಾ ದೇಸಾಯಿಯವರಿಂದ ವಂದನಾರ್ಪಣೆ ಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಶ್ರೀ ಹು.ವಾ.ಶ್ರೀಪ್ರಕಾಶ್ ಅವರ ಪೂರ್ಣ ಉಪನ್ಯಾಸವನ್ನು ವೇದಿಕೆಯ ಯೂಟ್ಯೂಬ್‌ನಲ್ಲಿ ವೀಕ್ಷಿಸಬಹುದು.

***



ಪ್ರಾ. ಎಚ್ಚೆಸ್ಕೆ

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ಡಾ. ಎಚ್ಚೆಸ್ಕೆ ಸ್ಮಾರಕ ದತ್ತಿ ಉಪನ್ಯಾಸ ~ 7


"ಬ್ಯಾಂಕಿಂಗ್ ವಲಯದಲ್ಲಿ ಕನ್ನಡದ ಬಳಕೆ"

ಉಪನ್ಯಾಸಕರು : ಬೆಂ.ಶ್ರೀ. ರವೀಂದ್ರ

ಕಾರ್ಯಕ್ರಮ ವರದಿ: ಹು.ವಾ. ಶ್ರೀಪ್ರಕಾಶ್

ಬೆಂಗಳೂರಿನ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ 7ನೆಯ ಆಗಸ್ಟ್ 2025ರಂದು ಗುರುವಾರ ಸಂಜೆ ಡಾ. ಎಚ್.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ ದತ್ತಿ ಉಪನ್ಯಾಸದ ಅಂಗವಾಗಿ ಶ್ರೀ ಬೆಂ.ಶ್ರೀ. ರವೀಂದ್ರರವರಿಂದ 'ಬ್ಯಾಂಕಿಂಗ್ ವಲಯದಲ್ಲಿ ಕನ್ನಡದ ಬಳಕೆ' ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.

ಸಮನ್ವಯ ಸಮಿತಿಯ ಎಲ್ಲ ಚಟುವಟಿಕೆಗಳಿಗೆ ಪ್ರೇರಕ ಶಕ್ತಿಯಾಗಿದ್ದ ಪ್ರಾ. ಎಚ್ಚೆಸ್ಕೆಯವರ ಸ್ಮರಣಾರ್ಥ ದತ್ತಿ ನಿಧಿಯನ್ನು ಸಮನ್ವಯ ಸಮಿತಿಯು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ಸ್ಥಾಪಿಸಿದ್ದು, ಅದರ ಅಂಗವಾಗಿ ಪ್ರತಿವರ್ಷ ಪ್ರಾ.ಎಚ್ಚೆಸ್ಕೆಯವರ ಜನ್ಮ ಮಾಸವಾದ ಆಗಸ್ಟ್ ತಿಂಗಳಿನಲ್ಲಿ ಬ್ಯಾಂಕಿಂಗ್ ಅಥವಾ ಆರ್ಥಿಕ ವಿಷಯಗಳನ್ನು ಕುರಿತಂತೆ ತಜ್ಞರಿಂದ ಉಪನ್ಯಾಸವನ್ನು ಏರ್ಪಡಿಸಲಾಗುತ್ತಿದೆ. 2018ರಲ್ಲಿ ಆರಂಭವಾದ ಈ ಉಪನ್ಯಾಸ ಮಾಲಿಕೆಯಲ್ಲಿ ಈವರೆಗೆ ಒಟ್ಟು ಆರು ಉಪನ್ಯಾಸಗಳಾಗಿದ್ದು, ಇದು ಏಳನೆಯ ಉಪನ್ಯಾಸವಾಗಿದೆ. ಕೊರೋನಾ ಕಾರಣದಿಂದ 2020ರಲ್ಲಿ ಯಾವುದೇ ಉಪನ್ಯಾಸ ಆಯೋಜಿಸಿರಲಿಲ್ಲ.



ಆರಂಭದಲ್ಲಿ ಶ್ರೀ ಜಿ.ಎನ್. ನರಸಿಂಹಮೂರ್ತಿ ಅವರು ಪ್ರಾ. ಎಚ್ಚೆಸ್ಕೆಯವರ ಬಗ್ಗೆ, ಸಮನ್ವಯ ಸಮಿತಿ ಮತ್ತು ದತ್ತಿ ಉಪನ್ಯಾಸ ಮಾಲಿಕೆಯ ಬಗ್ಗೆ ಪ್ರಾಸ್ತಾವಿಕ ಮಾತುಗಳನ್ನಾಡಿ ಉಪನ್ಯಾಸಕರು ಮತ್ತು ಎಲ್ಲರನ್ನೂ ಸ್ವಾಗತಿಸಿದರು.

ನಂತರ ತಮ್ಮ ಉಪನ್ಯಾಸವನ್ನು ಆರಂಭಿಸಿದ ಶ್ರೀ ಬೆಂ.ಶ್ರೀ.ರವೀಂದ್ರರವರು ಕನ್ನಡಕ್ಕೆ ಮಂಕುತಿಮ್ಮನ ಕಗ್ಗವೆಂಬ ಭಗವದ್ಗೀತೆಯನ್ನು ಕೊಟ್ಟ ಡಿವಿಜಿಯವರು ತಮ್ಮ ಗುರುಗಳ ಹೆಸರಿನಲ್ಲಿ ಸ್ಥಾಪಿಸಿದ ಪರಮಪವಿತ್ರವಾದ ಈ ಗೋಖಲೆ ಸಾರ್ವಜನಿಕ ಸಂಸ್ಥೆಯ ವೇದಿಕೆಯಲ್ಲಿ ಉಪನ್ಯಾಸ ನೀಡಲು ಬಹಳ ಸಂತೋಷವೆನಿಸುತ್ತಿದೆ ಎಂದು ಹೇಳಿ, ಪ್ರಾಚಾರ್ಯ ಎಚ್ಚೆಸ್ಕೆಯವರ ಬದುಕು, ಬರಹ ಮತ್ತು ಸಮನ್ವಯ ಸಮಿತಿಯೊಂದಿಗೆ ಅವರ ನಿಕಟ ಬಾಂಧವ್ಯದ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದರು. ಶ್ರೀ ರವೀಂದ್ರರ ಉಪನ್ಯಾಸದ ಮುಖ್ಯಾಂಶಗಳು ಇಲ್ಲಿವೆ:

'ಬ್ಯಾಂಕಿಂಗ್ ವಲಯದಲ್ಲಿ ಕನ್ನಡದ ಬಳಕೆ' ಎಂಬ ವಿಷಯ ಈಗ ಮತ್ತೆ ಮುನ್ನೆಲೆಗೆ ಬಂದಿದೆ. ರಾಜ್ಯ ಸರ್ಕಾರದ ಯಾವುದೇ ಕಛೇರಿಗೆ ಹೋದರೂ ಕನ್ನಡದ ಬಳಕೆ ಇದೆ. ಆದರೆ ಖಾಸಗಿ ಮತ್ತು ವಾಣಿಜ್ಯ ಬ್ಯಾಂಕುಗಳಲ್ಲಿ ಕನ್ನಡದ ಬಳಕೆ ಕಾಣಿಸುತ್ತಿಲ್ಲ. ಎಚ್ಚೆಸ್ಕೆಯವರು 1982ನೇ ಇಸವಿಯಲ್ಲಿಯೇ ಬ್ಯಾಂಕುಗಳಲ್ಲಿ ಕನ್ನಡದ ಬಳಕೆಯ ಬಗ್ಗೆ ಮಾತನಾಡಿದ್ದಾರೆ. ಅವರೇ ಬರೆದ 'ಕನ್ನಡದಲ್ಲಿ ಬ್ಯಾಂಕಿಂಗ್' ಕೃತಿಯನ್ನು ಭಾರತೀಯ ಸ್ಟೇಟ್ ಬ್ಯಾಂಕಿನ ನಗರ ಶಾಖೆ ಹೊರತಂದಿದೆ. ಈಗ ಬ್ಯಾಂಕುಗಳಲ್ಲಿ ಕನ್ನಡ ಇಲ್ಲ ಎಂಬ ಪರಿಸ್ಥಿತಿ ಮೂಡಿರುವುದು ವಿಷಾದನೀಯ.

ಬ್ಯಾಂಕುಗಳಲ್ಲಿ ಕನ್ನಡದ ಬಳಕೆಯನ್ನು ಮೂರು ಮಗ್ಗಲುಗಳಲ್ಲಿ ನೋಡಬಹುದು. ಅವೆಂದರೆ ಗ್ರಾಹಕರೊಡನೆ ವ್ಯವಹಾರ, ಶಾಖಾ ಮಟ್ಟದಲ್ಲಿ ವ್ಯವಹಾರ ಮತ್ತು ಸಂಭಾಷಣೆ ಹಾಗೂ ಆಂತರಿಕ ವ್ಯವಹಾರಗಳಲ್ಲಿ ಕನ್ನಡದ ಬಳಕೆ ಯಾವ ಪ್ರಮಾಣದಲ್ಲಿದೆ ಎಂಬುದು.

ಕರ್ನಾಟಕದ ಅಸ್ಮಿತೆ ಕನ್ನಡ. ಕರ್ನಾಟಕ ರಾಜ್ಯದ ಒಳಗೆ ಬ್ಯಾಂಕುಗಳೂ ಸೇರಿದಂತೆ ಎಲ್ಲೆಡೆಯೂ ಕನ್ನಡವನ್ನೇ ಬಳಸಬೇಕು. ಈಗ ಕರ್ನಾಟಕದ ಬಹುತೇಕ ಎಲ್ಲಾ ಬ್ಯಾಂಕ್ ಶಾಖೆಗಳಲ್ಲೂ ಕನ್ನಡೇತರರು ಬಹಳಷ್ಟು ಸಂಖ್ಯೆಯಲ್ಲಿ ನೌಕರರಾಗಿ ಸೇರಿಕೊಂಡಿದ್ದಾರೆ. ಹೀಗಾಗಿ ಭದ್ರತಾ ಕಾವಲುಗಾರನಿಂದ ಹಿಡಿದು ವ್ಯವಸ್ಥಾಪಕರವರೆಗೆ ಎಲ್ಲರೊಂದಿಗೂ ನಾವು ಹಿಂದಿಯಲ್ಲಿ ಮಾತನಾಡುತ್ತೇವೆ. ವ್ಯಾಪಾರ ನಡೆಸುವವರು ತಮ್ಮ ವ್ಯಾಪಾರಾಭಿವೃದ್ಧಿಯ ದೃಷ್ಟಿಯಿಂದ ಸ್ಥಳೀಯ ಭಾಷೆಯಲ್ಲಿ ಮಾತನಾಡುವುದು, ವ್ಯವಹರಿಸುವುದು ಅತ್ಯಗತ್ಯ. ಒಂದು ಮೊಬೈಲ್ ಸಿಮ್ ತೆಗೆದುಕೊಂಡರೆ ಅದರಲ್ಲಿ ಕನ್ನಡದಲ್ಲಿ ಸಂದೇಶ ಬರುತ್ತದೆ. ಕಾರಣ ಅವರಿಗೆ ವ್ಯಾಪಾರಿ ಮನೋಭಾವ ಇದೆ. ಆದರೆ ಬ್ಯಾಂಕುಗಳಿಗೆ ಸಂಬಂಧಪಟ್ಟ ಸಂದೇಶಗಳು ಕನ್ನಡದಲ್ಲಿ ಬರುವುದಿಲ್ಲ. ಎಲ್ಲ ಕೇಂದ್ರ ಸರ್ಕಾರದ ಅಧೀನ ಸಂಸ್ಥೆಗಳಲ್ಲಿಯೂ ಈ ಸಮಸ್ಯೆ ಇದೆ. ಇಲ್ಲೆಲ್ಲ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ವ್ಯವಹಾರ ನಡೆಯುತ್ತದೆ. ಇದರ ಮೇಲೆ ರಾಜ್ಯ ಸರ್ಕಾರದ ಹಿಡಿತವಿಲ್ಲ. ರಾಜ್ಯದಲ್ಲಿ ಅಲ್ಲಲ್ಲಿ ಹೇಗೆ ಕನ್ನಡ ಬಾರದ ದ್ವೀಪಗಳು ಸೃಷ್ಟಿಯಾದವು? ಇದು ದೇಶಾದ್ಯಂತ 'ಸಿ' ವಲಯದ ರಾಜ್ಯಗಳಲ್ಲಿ ಇರುವ ಸಮಸ್ಯೆ.

ನಾನು ಒಮ್ಮೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ತಂಡದಲ್ಲಿ ಬ್ಯಾಂಕೊಂದರಲ್ಲಿ ಸ್ಥಳೀಯ ಭಾಷೆ ಅನುಷ್ಠಾನ ಕುರಿತ ಪರಿಶೀಲನೆಗೆ ಹೋದಾಗ ಬ್ಯಾಂಕಿನ ದಾಖಲೆ, ದಸ್ತಾವೇಜುಗಳು ಕನ್ನಡದಲ್ಲಿ ಇರದ ಬಗ್ಗೆ ವಿಚಾರಿಸಿದ್ದೆವು. ಕಾನೂನಿನ ದೃಷ್ಟಿಯಿಂದಲೂ ಇದು ಅಗತ್ಯ. ಆದರೆ ವಸ್ತುಸ್ಥಿತಿ ಬೇರೆಯೇ ಇದೆ. ರಾಜ್ಯ ಸರ್ಕಾರ ಈ ದೃಷ್ಟಿಯಲ್ಲಿ ನಿರ್ದೇಶನ ಕೊಡುವುದು ಅಸಾಧ್ಯ. ಈ ಸಮಸ್ಯೆಗೆ ಭಾರತದ ಸಂವಿಧಾನದಲ್ಲಿ ಪರಿಹಾರ ಆಗದ ಹೊರತು ಏನೂ ಮಾಡಲಾಗದು. ಜನರ ಚಳುವಳಿ ಮಹತ್ತರವಾಗಿ ಬೆಳೆದರೆ ಮಾತ್ರ ಪರಿಹಾರ ಸಿಕ್ಕೀತು.




1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂತು. ಆಗ ಭಾಷಾವಾರು ಪ್ರಾಂತ್ಯಗಳ ರಚನೆ ಆಗಿರಲಿಲ್ಲ. ದೇಶಾದ್ಯಂತ ಸುಮಾರು 550 ಸಂಸ್ಥಾನಗಳು ಇದ್ದವು. ಸಂವಿಧಾನದ ಸಭೆಯಲ್ಲಿ ನಡೆದ ಚರ್ಚೆಯಲ್ಲಿ ಕೇವಲ ಒಂದು ಬಹುಮತದಿಂದ ಹಿಂದಿಯನ್ನು ಇಂಗ್ಲೀಷಿನ ಸ್ಥಾನದಲ್ಲಿರಿಸಬೇಕೆಂದು ತೀರ್ಮಾನಿಸಲಾಯಿತು. ಸಂವಿಧಾನದ 120ನೇ ವಿಧಿಯಂತೆ ಪಾರ್ಲಿಮೆಂಟಿನಲ್ಲಿ ಉಪಯೋಗಿಸುವ ಭಾಷೆ ಹಿಂದಿ ಮತ್ತು ಇಂಗ್ಲಿಷ್. ಸಭಾಧ್ಯಕ್ಷರ ಅನುಮತಿಯೊಂದಿಗೆ ಬೇರೆ ಭಾಷೆ ಮಾತನಾಡಬಹುದು. ಇನ್ನು 210ನೇ ವಿಧಿಯ ಪ್ರಕಾರ ರಾಜ್ಯದ ವಿಧಾನಸಭೆಗಳಲ್ಲಿ ಹಿಂದಿ, ಇಂಗ್ಲಿಷ್ ಮತ್ತು ರಾಜ್ಯದ ಭಾಷೆಯನ್ನು ಬಳಸಬಹುದು.

ಸಂವಿಧಾನದ 343ನೇ ಪರಿಚ್ಛೇದವು ನಾವು ಬರೆಯುವ ಎಲ್ಲಾ ಅಧಿನಿಯಮಗಳ ಮೂಲ ಇಂಗ್ಲಿಷಿನಲ್ಲಿರಬೇಕು ಎನ್ನುತ್ತದೆ. ಮಾತೃಭಾಷೆಯಲ್ಲಿ ಶಿಕ್ಷಣ ಆಗದೇ ಇರುವುದು ಭಾಷೆಯ ಬಳಕೆ ಮತ್ತು ಬೆಳವಣಿಗೆ ದೃಷ್ಟಿಯಿಂದ ದೊಡ್ಡ ಅಡಚಣೆಯಾಗಿದೆ.

1950ರಲ್ಲೇ ನಮ್ಮ ಸಂವಿಧಾನವು ದೇವನಾಗರಿ ಅಧಿಕೃತ ಭಾಷೆಯಾಗಬೇಕು ಎನ್ನುತ್ತದೆ. 1965ರ ಕಾಲಘಟ್ಟದಲ್ಲಿ ಇಂಗ್ಲಿಷ್ ಜಾಗಕ್ಕೆ ಹಿಂದಿ ತರಬೇಕು ಎಂಬ ಕೂಗು ಏಳುತ್ತದೆ. ಈ ಬಗ್ಗೆ ಒಂದು ಅಧಿಕೃತ ಭಾಷಾ ಆಯೋಗವನ್ನೂ ರಚಿಸಲಾಗಿತ್ತು. 1963ರಲ್ಲಿ ಮದರಾಸಿನಲ್ಲಿ ಬಹು ದೊಡ್ಡ ಪ್ರಮಾಣದಲ್ಲಿ ಹಿಂದಿ ವಿರೋಧದ ಅಲೆ ಎದ್ದಿತು. ಆಗಿನ ಪ್ರಧಾನಿ ಜವಾಹರಲಾಲ್ ನೆಹರು ಅವರು ದಕ್ಷಿಣ ರಾಜ್ಯಗಳು ಮತ್ತು ಹಿಂದಿಯೇತರ ರಾಜ್ಯಗಳು ಎಷ್ಟು ಸಮಯ ಇಂಗ್ಲಿಷ್ ಇರಬೇಕೆಂದು ಬಯಸುತ್ತವೆಯೋ ಅಲ್ಲಿಯವರೆಗೂ ಇಂಗ್ಲಿಷ್ ಸಹ ಅಧಿಕೃತ ಭಾಷೆಯಾಗಿ ಇರಲಿ ಎಂದು ಹೇಳಿದರು. ಹೀಗಿದ್ದರೂ ದಕ್ಷಿಣದ ರಾಜ್ಯಗಳಲ್ಲಿ ಇಂದು ಹಿಂದಿಯನ್ನು ಪರೋಕ್ಷವಾಗಿ ಹೇರುತ್ತಿರುವುದರಲ್ಲಿ ಅನುಮಾನವೇ ಇಲ್ಲ. ಅಧಿಕೃತ ಭಾಷಾ ಅಧಿನಿಯಮದಲ್ಲಿ ವಿವಿಧ ರಾಜ್ಯಗಳನ್ನು ಎ, ಬಿ ಮತ್ತು ಸಿ ವರ್ಗದ ರಾಜ್ಯಗಳೆಂದು ವಿಂಗಡಿಸಲಾಗಿದೆ. 'ಎ' ವರ್ಗದಲ್ಲಿ ಸಂಪೂರ್ಣ ಹಿಂದಿ ರಾಜ್ಯಗಳು, 'ಬಿ' ವರ್ಗದಲ್ಲಿ ಅರೆ ಹಿಂದಿ (ಮಹಾರಾಷ್ಟ್ರ, ರಾಜಸ್ಥಾನ ಇತ್ಯಾದಿ) ಮತ್ತು 'ಸಿ' ವರ್ಗದಲ್ಲಿ ಹಿಂದಿಯೇತರ ರಾಜ್ಯಗಳು (ದಕ್ಷಿಣ ಭಾರತ, ಪಂಜಾಬ್ ಮತ್ತು ಪಶ್ಚಿಮ ಬಂಗಾಳ) ಬರುತ್ತವೆ.

'ಸಿ' ವರ್ಗದ ರಾಜ್ಯಗಳೂ ಹಿಂದಿಗೆ ಉತ್ತೇಜನ ಕೊಡಬೇಕು. ನೌಕರರಲ್ಲಿ ಹಿಂದಿಯ ಕಾರ್ಯನಿರ್ವಹಣೆ ಜ್ಞಾನ (ವರ್ಕಿಂಗ್ ನಾಲೆಜ್) ಇರಬೇಕು ಎನ್ನುತ್ತಾ, ಹಿಂದಿಯೇತರ ರಾಜ್ಯಗಳಲ್ಲೂ ಹಿಂದಿ ಜಾರಿಗೊಳಿಸುವ ಪ್ರಯತ್ನದಲ್ಲಿ ಉಳಿದ ಪ್ರಾಂತೀಯ ಭಾಷೆಗಳನ್ನು ಕಡೆಗಣಿಸಲಾಗುತ್ತಿದೆ. ಇದಕ್ಕೆ ಪೂರಕವಾಗಿ ಸ್ಥಳೀಯ ಭಾಷೆಗಳು ಆಡಳಿತದಲ್ಲಿ ಬಳಕೆಗೆ ಸಿದ್ಧವಾಗಿಲ್ಲ, ಅಲ್ಲಿ ಪಾರಿಭಾಷಿಕ ಶಬ್ದಗಳಿಲ್ಲ ಎಂದು ವಾದಿಸುವುದು ಹಾಸ್ಯಾಸ್ಪದವಾಗಿದೆ.



ಹಿಂದಿ ರಾಷ್ಟ್ರಭಾಷೆಯಲ್ಲ, ಅದೊಂದು ಅಧಿಕೃತ ಭಾಷೆ ಅಷ್ಟೆ. ಆಯಾ ರಾಜ್ಯಗಳಲ್ಲಿ ಅಲ್ಲಿಯ ಪ್ರಾದೇಶಿಕ ಭಾಷೆಯೇ ಅಧಿಕೃತ ಭಾಷೆ. ಕರ್ನಾಟಕದಲ್ಲಿ ಕನ್ನಡ ಅಧಿಕೃತ ಭಾಷೆ. ಅದನ್ನು ಉಪಯೋಗಿಸಬೇಕು. ಎಲ್ಲ ಭಾಷೆಗಳೂ ರಾಷ್ಟ್ರಭಾಷೆಗಳು. ಹಿಂದಿ ಬಳಕೆಗೆ ಅಪಾರ ಉತ್ತೇಜನ ನೀಡಿ ಸ್ಥಳೀಯ ಪ್ರಾದೇಶಿಕ ಭಾಷೆಗಳನ್ನು ಕಡೆಗಣಿಸುವುದು ಸರಿಯಲ್ಲ.

ಹಿಂದಿ ಮತ್ತು ಇಂಗ್ಲಿಷ್ ಭಾಷೆಗೆ ಹೋಲಿಸಿದರೆ ಕನ್ನಡ ಬಹಳ ಪ್ರಬುದ್ಧ ಭಾಷೆ. 16ನೇ ಶತಮಾನದಲ್ಲಿ ಇಂಗ್ಲಿಷ್ ಕರಾರು ಒಪ್ಪಂದವು ಲ್ಯಾಟಿನ್ ಭಾಷೆಯಲ್ಲಿ ಆಗುತ್ತಿತ್ತು. ಮಕಾಲೆಯ ಇಂಗ್ಲಿಷ್ ಶಿಕ್ಷಣ ನಮ್ಮಲ್ಲಿ ಗುಲಾಮತನವನ್ನು ಹುಟ್ಟುಹಾಕಿತು. ಇತ್ತೀಚೆಗೆ ಒಂದು ಬೇಸಿಗೆ ಶಿಬಿರಕ್ಕೆ ಹೋದಾಗ ಸರಕಾರಿ ಶಾಲೆಯ ಮಕ್ಕಳು ಖಾಸಗಿ ಶಾಲೆಯ ಮಕ್ಕಳಿಗಿಂತ ಹೆಚ್ಚು ಉತ್ಸಾಹದಿಂದ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದರು. ಮಾತೃಭಾಷೆಯ ಶಿಕ್ಷಣ ತಂದ ಮನೋಸ್ಥೈರ್ಯವೇ ಇದಕ್ಕೆ ಕಾರಣ.

ಕರ್ನಾಟಕ ಮತ್ತು ಕನ್ನಡಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ನೇಮಿಸಿದ್ದ ವಿ.ಕೃ.ಗೋಕಾಕ್ ನೇತೃತ್ವದ ಸಮಿತಿಯು ಶಿಕ್ಷಣದಲ್ಲಿ ಕನ್ನಡಕ್ಕೆ ಆದ್ಯತೆ ಇರಬೇಕೆಂದು ಶಿಫಾರಸು ಮಾಡಿ 1983ರಲ್ಲಿ ರಾಜ್ಯ ಸರ್ಕಾರಕ್ಕೆ ತನ್ನ ವರದಿ ಸಲ್ಲಿಸಿತು. ಈ ವರದಿಗೆ ಕನ್ನಡ ವಿರೋಧಿಗಳಿಂದ ಸಾಕಷ್ಟು ಕಡೆ ವಿರೋಧ ವ್ಯಕ್ತವಾಯಿತು. ಆಗ ಕನ್ನಡಿಗರಲ್ಲಿ ಕನ್ನಡದ ಅಸ್ಮಿತೆಯನ್ನು ಬಡಿದೆಬ್ಬಿಸಿದ 'ಗೋಕಾಕ್ ವರದಿ ಜಾರಿಗೆ ಬರಲಿ' ಚಳುವಳಿ ಇಡೀ ರಾಜ್ಯವನ್ನೇ ವ್ಯಾಪಿಸಿ ಮಾತೃಭಾಷೆಯಲ್ಲಿ ಶಿಕ್ಷಣ ನೀಡುವಂತೆ ಒತ್ತಾಯಿಸಿತು. ಇದೇ ಸಮಯದಲ್ಲಿ ಕರ್ನಾಟಕದ ಬ್ಯಾಂಕುಗಳಲ್ಲಿ ಕನ್ನಡಿಗ ಉದ್ಯೋಗಿಗಳ ನೇಮಕಾತಿಗಾಗಿ ಆಗ್ರಹಿಸಿ ನಡೆದ ಚಳವಳಿಯೂ ಆರಂಭವಾಗಿತ್ತು.

ಬ್ಯಾಂಕಿಂಗ್ ವಲಯದಲ್ಲಿ ಕನ್ನಡದ ಬಳಕೆ ಹೆಚ್ಚಾಗಬೇಕಾದರೆ ಕರ್ನಾಟಕಕ್ಕೇ ಪ್ರತ್ಯೇಕ ಸ್ಟೇಟ್ ಬ್ಯಾಂಕ್ ಸಮೂಹದ ಪ್ರಾದೇಶಿಕ ನೇಮಕಾತಿ ಮಂಡಳಿ ಆಗಬೇಕು, ಭಾರತೀಯ ಸ್ಟೇಟ್ ಬ್ಯಾಂಕಿನ ಕರ್ನಾಟಕ ವೃತ್ತ ರಚನೆಯಾಗಬೇಕು ಎಂದು ಆಗ್ರಹಿಸಿ ಬಹಳ ದೊಡ್ಡ ಹೋರಾಟವೇ ನಡೆಯಿತು. ನಂತರ 1983ರಲ್ಲಿ ಕೇಂದ್ರ ಹಣಕಾಸು ರಾಜ್ಯ ಸಚಿವ ಶ್ರೀ ಜನಾರ್ದನ ಪೂಜಾರಿ ಅವರು ಪ್ರತ್ಯೇಕ ನೇಮಕಾತಿ ಮಂಡಳಿ ಸ್ಥಾಪಿಸುವ ಆಶ್ವಾಸನೆ ಕೊಟ್ಟು ಅದನ್ನು ಈಡೇರಿಸಿದರು. ಆದರೆ 1985ರ ವೇಳೆಗೆ ದೇಶಾದ್ಯಂತ ಎಲ್ಲಾ ಬ್ಯಾಂಕಿಂಗ್ ಸೇವಾ ಪ್ರಾದೇಶಿಕ ನೇಮಕಾತಿ ಮಂಡಳಿಗಳು ರದ್ದಾದುವು. ಬಳಿಕ ರಾಷ್ಟ್ರ ಮಟ್ಟದಲ್ಲಿ ಬ್ಯಾಂಕಿಂಗ್ ಸಿಬ್ಬಂದಿ ಆಯ್ಕೆ ಸಂಸ್ಥೆ ಜಾರಿಗೆ ಬಂದು ಈಗಲೂ ಈ ಸಂಸ್ಥೆಯ ಮೂಲಕವೇ ದೇಶದ ಎಲ್ಲ ಸರ್ಕಾರಿ ಹಾಗೂ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ನೇಮಕಾತಿ ನಡೆಯುತ್ತಿದೆ. ಈಗ ನೇಮಕಾತಿ ಮಂಡಳಿಗಳಿಗೆ ಪ್ರಾದೇಶಿಕ ಭಾಷೆಗಳ ಹಂಗಿಲ್ಲ. ನಾಲ್ಕನೆಯ ದರ್ಜೆ ಹುದ್ದೆಗಳನ್ನೂ ಹೊರಗುತ್ತಿಗೆ ನೀಡಿರುವ ಪರಿಣಾಮವಾಗಿ ಭದ್ರತಾ ಸಿಬ್ಬಂದಿಯ ಹುದ್ದೆಯನ್ನೂ ಕನ್ನಡೇತರರೇ ನಿರ್ವಹಿಸುತ್ತಿರುವುದು ವಿಪರ್ಯಾಸ.

ಇತ್ತೀಚೆಗಿನ ಸ್ವಲ್ಪ ಸಮಾಧಾನಕರ ಬೆಳವಣಿಗೆಯೆಂದರೆ, ಬಹುಶಃ ಕೆಲವು ಬ್ಯಾಂಕುಗಳಿಗೆ ಸ್ಥಳೀಯ ಭಾಷಾ ಜ್ಞಾನದ ಅಗತ್ಯತೆ ಮನದಟ್ಟಾದ ಕಾರಣ, ಈಗಿನ ನೇಮಕಾತಿಗಳಲ್ಲಿ ಬ್ಯಾಂಕ್ ನೌಕರಿ ಬಯಸುವ ಅಭ್ಯರ್ಥಿಗಳಿಗೆ ಸ್ಥಳೀಯ ಭಾಷಾ ಜ್ಞಾನ ಪರೀಕ್ಷೆಯನ್ನು ಕಡ್ಡಾಯಗೊಳಿಸಲಾಗಿದೆ.

2017ರಲ್ಲಿ ಬ್ಯಾಂಕುಗಳಲ್ಲಿ ಪ್ರಾದೇಶಿಕ ಭಾಷೆ ಬಳಕೆಯ ಬಗೆಗಿನ ಒಂದು ನಿಯೋಗದಲ್ಲಿ ಅಂದಿನ ಕೇಂದ್ರ ಸಚಿವ ಅನಂತ್ ಕುಮಾರ್ ಅವರೊಂದಿಗೆ ಆಗಿನ ವಿತ್ತ ಸಚಿವ ಅರುಣ್ ಜೇಟ್ಲಿ ಅವರನ್ನು ಭೇಟಿ ಮಾಡುವ ಅವಕಾಶ ನನಗೆ ದೊರೆತಿತ್ತು. ಬ್ಯಾಂಕುಗಳಲ್ಲಿ ಪ್ರಾದೇಶಿಕ ಭಾಷೆಯ ಬಳಕೆಯ ಅಗತ್ಯತೆ ಮತ್ತು ಇದರಿಂದ ಬ್ಯಾಂಕಿಗೆ ಹಾಗೂ ಗ್ರಾಹಕರಿಗೆ ಆಗುವ





ಪ್ರಯೋಜನಗಳ ಬಗೆಗಿನ ಎಲ್ಲ ಮಾಹಿತಿಗಳನ್ನೂ ಅವರಿಗೆ ಸವಿಸ್ತಾರವಾಗಿ ತಿಳಿಸಿ ಪ್ರಾದೇಶಿಕ ನೇಮಕಾತಿ ಮಂಡಳಿಯ ಮರುಸ್ಥಾಪನೆ ಮತ್ತು ಕರ್ನಾಟಕದ ಬ್ಯಾಂಕುಗಳಲ್ಲಿ ಕನ್ನಡ ಬಲ್ಲ ಉದ್ಯೋಗಿಗಳನ್ನು ನೇಮಿಸಿದರೆ ಮಾತ್ರ ಪರಿಸ್ಥಿತಿ ಸುಧಾರಿಸೀತು ಎಂದು ಮನದಟ್ಟು ಮಾಡಿದ್ದೆವು.

ಬ್ಯಾಂಕುಗಳಲ್ಲಿ ಕನ್ನಡ ಭಾಷೆಯ ಬಳಕೆಗೆ ಸೂಕ್ತ ತಳಹದಿಯೇ ಇಲ್ಲ, ಬ್ಯಾಂಕಿಂಗ್ ಕ್ಷೇತ್ರಕ್ಕೆ ಅನ್ವಯವಾಗುವ ಸೂಕ್ತ ಪಾರಿಭಾಷಿಕ ಪದಗಳೇ ಇಲ್ಲ ಎನ್ನುವುದರಲ್ಲಿ ಯಾವುದೇ ಹುರುಳಿಲ್ಲ. ನಮ್ಮ ಸಮನ್ವಯ ಸಮಿತಿಯು 1980ರ ದಶಕದಲ್ಲಿಯೇ ಪ್ರಾ. ಎಚ್ಚೆಸ್ಕೆ ಅವರ ಸಂಪಾದಕತ್ವದಲ್ಲಿ ಹಣ ಮತ್ತು ಬ್ಯಾಂಕಿಂಗ್‌ಗೆ ಮೀಸಲಾದ 'ಬ್ಯಾಂಕಿಂಗ್ ಪ್ರಪಂಚ' ಎಂಬ ನಿಯತಕಾಲಿಕವನ್ನು ಪ್ರಕಟಿಸುತ್ತಿತ್ತು. ಈ ಪತ್ರಿಕೆ 22 ವರ್ಷಗಳ ಕಾಲ ಅಂದರೆ 2003ರವರೆಗೂ ಮುನ್ನಡೆಯಿತು. ಬ್ಯಾಂಕ್ ಉದ್ಯೋಗಿಗಳೇ ಲೇಖನ ಬರೆಯಬೇಕು ಎಂಬ ಎಚ್ಚೆಸ್ಕೆಯವರ ಸಲಹೆ ಮೇರೆಗೆ ಬ್ಯಾಂಕಿಂಗ್ ಕಮ್ಮಟಗಳು ಆರಂಭವಾದವು. ಈ ಕಮ್ಮಟಗಳಲ್ಲಿ ವಾಣಿಜ್ಯ ಮತ್ತು ಬ್ಯಾಂಕಿಂಗ್ ಲೇಖನ ಬರವಣಿಗೆ ತರಬೇತಿ, ಇಂಗ್ಲಿಷ್ ಲೇಖನಗಳ ಅನುವಾದ ಮತ್ತು ಹೊಸ ಪಾರಿಭಾಷಿಕ ಶಬ್ದಗಳ ಸೃಷ್ಟಿಗೆ ಆದ್ಯತೆ ನೀಡಲಾಯಿತು. ಕಮ್ಮಟಗಳಲ್ಲಿ ಭಾಗವಹಿಸಿದ ಅನೇಕ ಕಮ್ಮಟಿಗರು ಬರೆದ ವಾಣಿಜ್ಯ ವಿಷಯಕ್ಕೆ ಸಂಬಂಧಿಸಿದ ಲೇಖನಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವುದು ಹೆಮ್ಮೆಯ ವಿಷಯ.

ಸಮನ್ವಯ ಸಮಿತಿ ಪ್ರಕಟಿಸಿದ 'ಇಂಗ್ಲಿಷ್–ಕನ್ನಡ ಬ್ಯಾಂಕಿಂಗ್ ನಿಘಂಟು' 1985ರಲ್ಲಿ ಹೊರಬಂತು. 'ಪರಸ್ಪರ ನಿಧಿ' ಪದಕೋಶ ಈಗಾಗಲೇ ಪ್ರಕಟವಾಗಿದೆ. 'ಷೇರು ಮಾರುಕಟ್ಟೆ ಪದಕೋಶ' ಸಿದ್ಧವಾಗುತ್ತಿದೆ. ಇವುಗಳಿಂದ ಏನು ಉಪಯೋಗ ಎಂದು ಕೇಳುವವರಿದ್ದಾರೆ. ಕನ್ನಡದಲ್ಲಿ ವಾಣಿಜ್ಯ ಮತ್ತು ಬ್ಯಾಂಕಿಂಗ್ ವ್ಯವಹಾರಕ್ಕೆ ಸಂಬಂಧಿಸಿದ ಪಾರಿಭಾಷಿಕ ಪದಗಳಿಲ್ಲ ಎಂದು ಹೇಳುವಂತಿರಬಾರದು ಎಂಬ ದೃಷ್ಟಿಯಿಂದ ಸಮನ್ವಯ ಸಮಿತಿ ಸಾಕಷ್ಟು ಕೆಲಸಗಳನ್ನು ಮಾಡಿದೆ. ಭಾರತೀಯ ಸ್ಟೇಟ್ ಬ್ಯಾಂಕು, ಇಂಗ್ಲಿಷ್–ಕನ್ನಡ–ಹಿಂದಿ ತ್ರಿಭಾಷಾ ಬ್ಯಾಂಕಿಂಗ್ ಪದಕೋಶವನ್ನು ಹೊರತಂದಿದೆ. ಈಗ ತಂತ್ರಜ್ಞಾನ ಅತಿವೇಗದಿಂದ ಬೆಳೆಯುತ್ತಿದೆ. ಸವಾಲುಗಳು ಹೆಚ್ಚಿವೆ. ಇವನ್ನೆಲ್ಲ ಸ್ಥಳೀಯ ಭಾಷೆಗಳು ಅರಗಿಸಿಕೊಳ್ಳಲು ಸಾಧ್ಯವೇ ಎಂಬ ಪ್ರಶ್ನೆ ಮೂಡುವುದು ಸಹಜ. ಈ ದಿಸೆಯಲ್ಲಿ ಕನ್ನಡ ಗಣಕ ಪ್ರತಿಷ್ಠಾನವು ಸಾಕಷ್ಟು ಕೆಲಸ ಮಾಡಿದೆ. ರಾಜ್ಯದ ಅನೇಕ ಕಡೆಗಳಲ್ಲಿ, ಸರ್ಕಾರಿ ಕಚೇರಿಗಳಲ್ಲಿ ಗಣಕ ಪ್ರತಿಷ್ಠಾನವು ವಿನ್ಯಾಸಗೊಳಿಸಿದ 'ನುಡಿ' ತಂತ್ರಾಂಶವನ್ನೇ ಬಳಸಲಾಗುತ್ತಿದೆ. ಈಗ 'ನುಡಿ ಬರವಣಿಗೆ' ಎಂಬ ಹೊಸ ಹಾಗೂ ವಿಸ್ತೃತ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಆದುದರಿಂದ ರಾಜ್ಯದ ಬ್ಯಾಂಕುಗಳಲ್ಲಿ ಕನ್ನಡ ಭಾಷೆಯ ಬಳಕೆಗೆ ಅಗತ್ಯವಾದ ಭವಸಾಮರ್ಥ್ಯ ಈಗಾಗಲೇ ಸಿದ್ಧವಾಗಿದೆ. 'ಆಡಳಿತದಲ್ಲಿ ಕನ್ನಡ' ಎಂಬುದರ ಕುರಿತೂ ಹಲವಾರು ಪುಸ್ತಕಗಳು ಪ್ರಕಟವಾಗಿವೆ.

ಹೊಸ ಶಿಕ್ಷಣ ನೀತಿಯಲ್ಲಿ ಪ್ರಾದೇಶಿಕ ಭಾಷೆಯ ಶಿಕ್ಷಣಕ್ಕೆ ಒತ್ತು ಕೊಟ್ಟಿದ್ದಾರೆ. ಆದರೆ ಬಹಳ ದುಃಖದ ವಿಷಯವೆಂದರೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳ ನಂತರವೂ ಪ್ರಾದೇಶಿಕ ಭಾಷೆಗಳನ್ನು ಜಾರಿಗೆ ತರುವಲ್ಲಿ ಹಿಮ್ಮುಖ ಚಲನೆ ಯಾಗಿರುವುದು. ವ್ಯಕ್ತಿಯು ಸಮರ್ಥನಾಗಿರಬೇಕಾದರೆ ಆತನ ಎಲ್ಲಾ ಅಂಗಗಳೂ ಆರೋಗ್ಯಕರವಾಗಿ, ಸದೃಢವಾಗಿ ಇರಬೇಕು. ಹಾಗೆಯೇ ದೇಶವು ಬಲಿಷ್ಠವಾಗಬೇಕಾದರೆ ಎಲ್ಲ ಪ್ರಾದೇಶಿಕ ಭಾಷೆಗಳಿಗೂ ಶಕ್ತಿ ತುಂಬಬೇಕು.

ಶ್ರೀ ರವೀಂದ್ರ ಅವರು ಸುಮಾರು ಒಂದೂವರೆ ಗಂಟೆಗಳ ಕಾಲದ ತಮ್ಮ ಉಪನ್ಯಾಸದಲ್ಲಿ ಬ್ಯಾಂಕುಗಳು, ಬ್ಯಾಂಕುಗಳಲ್ಲಿ ಕನ್ನಡದ ಬಳಕೆಯ ಅವಶ್ಯಕತೆ, ಸವಾಲುಗಳು, ನೇಮಕಾತಿ ಸಮಸ್ಯೆ, ಅಧಿಕೃತ ಭಾಷೆಗಳ ಅನುಷ್ಠಾನದಲ್ಲಿನ ತೊಡಕುಗಳು, ಪ್ರಸಕ್ತ ವಾತಾವರಣ ಮುಂತಾದುವುಗಳ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು.

ನಂತರ ಸಭಿಕರೊಂದಿಗೆ ಸಂವಾದ ಕಾರ್ಯಕ್ರಮ ನಡೆಯಿತು. ಕೊನೆಯಲ್ಲಿ ಶ್ರೀ ರವಿ ಕುಸುಬಿ ಅವರು ವಂದನಾರ್ಪಣೆ ಮಾಡಿದರು.

ಶ್ರೀ ರವೀಂದ್ರರ ಸಂಪೂರ್ಣ ಉಪನ್ಯಾಸವನ್ನು ಗೋಖಲೆ ಸಾರ್ವಜನಿಕ ಸಂಸ್ಥೆಯ ಯುಟ್ಯೂಬ್‌ನಲ್ಲಿ ವೀಕ್ಷಿಸಬಹುದು.

***

ಡಾ. ಎಚ್ಚೆಸ್ಕೆ ಸ್ಮಾರಕ ದತ್ತಿ ಉಪನ್ಯಾಸ

ಹಿರಿಯ ಸಾಹಿತಿ, ಅಂಕಣಕಾರರು ಹಾಗೂ ವಾಣಿಜ್ಯ ಹಾಗೂ ಬ್ಯಾಂಕಿಂಗ್ ವಿಷಯಗಳಲ್ಲಿ ಪರಿಣಿತರೂ ಆಗಿದ್ದ ಪ್ರಾ. ಎಚ್ಚೆಸ್ಕೆಯವರಿಗೂ, ಸಮನ್ವಯ ಸಮಿತಿಗೂ ಬಹಳ ಹತ್ತಿರದ ನಂಟು. ಸಮನ್ವಯ ಸಮಿತಿಯ ಬಹತೇಕ ಎಲ್ಲ ಚಟುವಟಿಕೆಗಳಿಗೂ ಎಚ್ಚೆಸ್ಕೆಯವರೇ ಪ್ರೇರಕ ಶಕ್ತಿಯಾಗಿದ್ದವರು. 1980ರಿಂದ 2008ರವರೆಗೆ ಸುಮಾರು 28 ವರ್ಷಗಳ ಕಾಲ ನಮ್ಮ ಒಡನಾಡಿಯಾಗಿ "ಬ್ಯಾಂಕಿಂಗ್‌ನಲ್ಲಿ ಕನ್ನಡ, ಕನ್ನಡದಲ್ಲಿ ಬ್ಯಾಂಕಿಂಗ್" ಎಂಬ ಧ್ಯೇಯವಾಕ್ಯದೊಂದಿಗೆ ಒಟ್ಟ 27 ಬ್ಯಾಂಕಿಂಗ್ ಕಮ್ಮಟಗಳನ್ನು ನಿರ್ದೇಶಿಸಿ ವಾಣಿಜ್ಯ ಮತ್ತು ಬ್ಯಾಂಕಿಂಗ್ ಕುರಿತಂತೆ ಹಲವು ಬರಹಗಾರರನ್ನು ಸೃಷ್ಟಿ ಮಾಡಿದ, ಸಮನ್ವಯ ಸಮಿತಿಯು ಪ್ರಕಟಿಸುತ್ತಿದ್ದ "ಬ್ಯಾಂಕಿಂಗ್ ಪ್ರಪಂಚ" ತ್ರೈಮಾಸಿಕ ಪತ್ರಿಕೆಯನ್ನು ಸಂಪಾದಿಸಿದ, ಹಲವಾರು ಬ್ಯಾಂಕಿಂಗ್ ವಿಚಾರ ಸಂಕಿರಣಗಳು, ಚರ್ಚೆಗಳಲ್ಲಿ ಭಾಗವಹಿಸಿದ, "ಇಂಗ್ಲಿಷ್-ಕನ್ನಡ ಬ್ಯಾಂಕಿಂಗ್ ನಿಘಂಟು", "ಬ್ಯಾಂಕಿಂಗ್ ಹೆಜ್ಜೆ ಗುರುತುಗಳು" ಮುಂತಾಗಿ ಬ್ಯಾಂಕಿಂಗ್ ಸಾಹಿತ್ಯವನ್ನು ಕನ್ನಡದಲ್ಲಿ ಬೆಳೆಸಿದ ಕೀರ್ತಿ ಎಚ್ಚೆಸ್ಕೆಯವರಿಗೇ ಸಲ್ಲುತ್ತದೆ.

ಹೀಗೆ ನಮ್ಮೆಲ್ಲ ಚಟುವಟಿಕೆಗಳಿಗೆ ನೀರೆರೆದು ನಮ್ಮನ್ನು ಬೆಳೆಸಿದ ಪ್ರಾ. ಎಚ್ಚೆಸ್ಕೆಯವರ ನೆನಪಿನಲ್ಲಿ ನಿರಂತರವಾಗಿ ಬ್ಯಾಂಕಿಂಗ್, ವಾಣಿಜ್ಯ ಮತ್ತು ಆರ್ಥಿಕತೆಯಂತಹ ವಿಷಯಗಳನ್ನು ಕುರಿತಂತೆ ವರ್ಷಕ್ಕೊಮ್ಮೆಯಾದರೂ ದತ್ತಿ ಉಪನ್ಯಾಸಗಳನ್ನು ಏರ್ಪಡಿಸಬೇಕೆಂಬ ಸಲಹೆಗೆ ತಕ್ಷಣವೇ ಸಕಾರಾತ್ಮಕವಾಗಿ ಸ್ಪಂದಿಸಿದ ನಮ್ಮ ಸದಸ್ಯರು 31.01.2018ರಂದು ಒಂದೇ ದಿನದಲ್ಲಿ ರೂ. 1.00 ಲಕ್ಷಕ್ಕೂ ಮೀರಿ, ದತ್ತಿ ನಿಧಿಗೆ ತಮ್ಮ ವೈಯಕ್ತಿಕ ದೇಣಿಗೆ ನೀಡಿದರು.

ನಮ್ಮ ಕೋರಿಕೆಯನ್ನು ಮುಕ್ತವಾಗಿ ಸ್ವಾಗತಿಸಿದ "ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ"ಯವರು ತಮ್ಮ ಸಭಾಂಗಣದಲ್ಲಿ "ಡಾ. ಎಚ್ಚೆಸ್ಕೆ ದತ್ತಿ ಉಪನ್ಯಾಸ ಮಾಲಿಕೆ"ಯನ್ನು ಆರಂಭಿಸಲು ಒಪ್ಪಿಕೊಂಡರು.


ಡಾ. ಎಚ್.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ (ಎಚ್ಚೆಸ್ಕೆ) ಜನಿಸಿದ್ದು 26ನೆಯ ಆಗಸ್ಟ್ 1920ರಂದು. ಮರಣ ಹೊಂದಿದ್ದು ತಮ್ಮ 88ನೆಯ ವಯಸ್ಸಿನಲ್ಲಿ ಅಂದರೆ 29ನೆಯ ಆಗಸ್ಟ್ 2008ರಂದು. ಆದುದರಿಂದ ಸಾಮಾನ್ಯವಾಗಿ ಈ ದತ್ತಿ ಉಪನ್ಯಾಸವನ್ನು ಪ್ರತಿ ವರ್ಷ ಆಗಸ್ಟ್ ತಿಂಗಳಿನಲ್ಲಿಯೇ ನಡೆಸಲಾಗುತ್ತಿದೆ. 2018ರಲ್ಲಿ ಆರಂಭವಾದ ಈ ಉಪನ್ಯಾಸ ಮಾಲಿಕೆಯಲ್ಲಿ ಈವರೆಗೆ ಒಟ್ಟು ಏಳು ದತ್ತಿ ಉಪನ್ಯಾಸಗಳು ನಡೆದಿದ್ದು ಅವುಗಳ ವಿವರ ಹೀಗಿದೆ.

ಕ್ರ.ಸಂ.	ದಿನಾಂಕ	ವಿಷಯ	ಉಪನ್ಯಾಸಕರ ಹೆಸರು
01	11.09.2018	ಭಾರತದ ಪ್ರಸಕ್ತ ಆರ್ಥಿಕ ಪರಿಸ್ಥಿತಿ ಹಾಗೂ ಬ್ಯಾಂಕಿಂಗ್	ಡಾ. ಕೆ.ಲಕ್ಷ್ಮೀಶ
02	07.08.2019	ಅಭಿವೃದ್ಧಿಯ ವಿವಿಧ ಆಯಾಮಗಳು	ಡಾ. ಬಿ.ಆರ್. ಚಂದ್ರಶೇಖರ್
03	16.08.2021	ಜಾಗತಿಕ ಸಾಂಕ್ರಾಮಿಕ ಪಿಡುಗುಗಳು ಮತ್ತು ಆರ್ಥಿಕತೆ	ಎಸ್. ಶೃಂಗೇಶ್ವರ ಶರ್ಮ
04	12.08.2022	ರಷ್ಯಾ-ಉಕ್ರೇನ್ ಯುದ್ಧ – ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕ ವ್ಯವಸ್ಥೆಯ ಮೇಲಿನ ಪರಿಣಾಮಗಳು	ಟಿ.ಕೆ. ರಂಗನಾಥ
05	07.08.2023	ಕರ್ನಾಟಕದಲ್ಲಿ ಸೌಹಾರ್ದ ಸಹಕಾರ ಸಂಘಗಳು	ಬಿ.ಎಸ್. ಚಂದ್ರಶೇಖರ್
06	07.08.2024	ಬ್ಯಾಂಕುಗಳಲ್ಲಿ ಖಜಾನೆಯ ವ್ಯವಸ್ಥಾಪನ	ಡಾ. ಜೆ.ಎನ್. ಜಗನ್ನಾಥ್
07	07.08.2025	ಬ್ಯಾಂಕಿಂಗ್ ವಲಯದಲ್ಲಿ ಕನ್ನಡದ ಬಳಕೆ	ಬೆಂ.ಶ್ರೀ. ರವೀಂದ್ರ

2020ರಲ್ಲಿ ಕರೋನಾ ಪಿಡುಗಿಗೆ ಸಂಬಂಧಿಸಿದ ನಿರ್ಬಂಧಗಳಿಗಾಗಿ ಯಾವುದೇ ಉಪನ್ಯಾಸ ನಡೆಯಲಿಲ್ಲ.


ಸಂಗೀತ ಸಾಹಿತ್ಯ ಸಮ್ಮೋಹನ





ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

"ಆರ್.ಕೆ.ಪದ್ಮನಾಭರ ಕಾದಂಬರಿಗಳಲ್ಲಿ ಕರ್ನಾಟಕ ಸಂಗೀತದ ಅನುರಣನ"



ಕಾರ್ಯಕ್ರಮ ವರದಿ: ಹು.ವಾ.ಶ್ರೀಪ್ರಕಾಶ್

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ ಮತ್ತು ಶ್ರೀ ಮದ್ವಾದಿರಾಜ ಆರಾಧನಾ ಟ್ರಸ್ಟ್ (ಶಾರದಾ ಕಲಾ ಕೇಂದ್ರ) ಇವರ ಸಂಯುಕ್ತ ಆಶ್ರಯದಲ್ಲಿ, ಗಾಯಕ, ವಾಗ್ಗೇಯಕಾರ, ಸಂಗೀತ ಸಂಯೋಜಕ, ಕವಿ, ಕಾದಂಬರಿಕಾರ, ನಾಟಕಕಾರ, ಹಲವು ಸಂಗೀತ ಶಾಸ್ತ್ರ ಗ್ರಂಥಗಳ ಲೇಖಕ, ಗಾನಕಲಾ ಭೂಷಣ ವಿದ್ವಾನ್ ಡಾ॥ ಆರ್.ಕೆ.ಪದ್ಮನಾಭ ಅವರು ರಚಿಸಿದ ಐದು ಕಾದಂಬರಿಗಳನ್ನು ಕುರಿತ "ಆರ್.ಕೆ.ಪದ್ಮನಾಭರ ಕಾದಂಬರಿಗಳಲ್ಲಿ ಕರ್ನಾಟಕ ಸಂಗೀತದ ಅನುರಣನ" ಎಂಬ ವಿಚಾರ ಸಂಕಿರಣವು ದಿನಾಂಕ 10ನೆಯ ಆಗಸ್ಟ್ 2025ರಂದು ಭಾನುವಾರ ಬೆಂಗಳೂರಿನ ಪತ್ತಿ ಸಭಾಂಗಣದಲ್ಲಿ ನಡೆಯಿತು.



ವಿದ್ವಾನ್ ಶ್ರೀ ಆರ್.ಕೆ.ಪದ್ಮನಾಭ ಅವರು, ಮಂತ್ರಾಲಯದ ಗುರು ರಾಘವೇಂದ್ರರ ಬಗ್ಗೆ ತಾವೇ ರಚಿಸಿದ ಪ್ರಾರ್ಥನಾ ಗೀತೆಯ ಗಾಯನದೊಂದಿಗೆ ಸಭೆಗೆ ಚಾಲನೆ ನೀಡಿದರು. ಶ್ರೀ ರವಿ ಕುಸುಬಿಯವರು ವೇದಿಕೆಯಲ್ಲಿ ಆಸೀನರಾದ ಗಣ್ಯರನ್ನು ಪರಿಚಯಿಸಿ ಎಲ್ಲರನ್ನೂ ಸ್ವಾಗತಿಸಿದರು.

ವೇದಿಕೆಯಲ್ಲಿನ ಗಣ್ಯರು ದೀಪ ಬೆಳಗುವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಿ, ನಂತರ ವಿದ್ವಾನ್ ಆರ್.ಕೆ. ಪದ್ಮನಾಭರವರ ಮರುಮುದ್ರಿತ ಕಾದಂಬರಿಗಳನ್ನು ಬಿಡುಗಡೆ ಮಾಡಿದರು.





ಮುಖ್ಯ ಅತಿಥಿಗಳಾಗಿದ್ದ ಶ್ರೀ ಎನ್.ಎಸ್.ಶ್ರೀಧರ ಮೂರ್ತಿಯವರು ಮಾತನಾಡಿ, ಸಂಗೀತಗಾರರೊಬ್ಬರು ಐದು ಕಾದಂಬರಿಗಳನ್ನು ರಚಿಸಿರುವುದು ಕನ್ನಡ ಸಾಹಿತ್ಯದಲ್ಲಿ ಹೊಸ ದಾಖಲೆ ಎಂದು ತಿಳಿಸಿ, ಕರ್ನಾಟಕ ಸಾಹಿತ್ಯ ಪರಂಪರೆಯಲ್ಲಿ ಸಂಗೀತ ಮತ್ತು ಸಾಹಿತ್ಯದ ಸಂಬಂಧ ಹಾಗೂ ಆರ್.ಕೆ. ಪದ್ಮನಾಭರ ಕೊಡುಗೆಯ ಬಗ್ಗೆ ವಿಶಿಷ್ಟ ಮಾಹಿತಿಗಳನ್ನು ನೀಡಿದರು.

ಸಂಗೀತಕ್ಕೆ ಸುಮಾರು 5000 ವರ್ಷಗಳ ಇತಿಹಾಸವಿದ್ದರೆ ಕಾದಂಬರಿಗೆ ಇರುವುದು ಕೇವಲ 100 ವರ್ಷದ ಇತಿಹಾಸ. 70 ವರ್ಷಗಳ ಹಿಂದೆ 'ಸಂಧ್ಯಾರಾಗ' ಕೃತಿ ಬಂದಾಗ ಶಾಸ್ತ್ರೀಯ ಸಂಗೀತದ ಬಗ್ಗೆ ಜನರ ಆಸಕ್ತಿ ಕಮ್ಮಿಯಾಗುತ್ತಿದೆ ಎಂದು ಆ ಕೃತಿಯಲ್ಲಿ ಹೇಳಲಾಗಿತ್ತು. 70 ವರ್ಷದ ನಂತರವೂ ಇದೇ ಅನಿಸಿಕೆಯಿದೆ. ಕಡಿಮೆ ಜನ ಕೇಳುತ್ತಿರುವುದರಿಂದಲೇ ಶಾಸ್ತ್ರೀಯ ಸಂಗೀತವು ಕ್ಲಾಸಿಕ್ ಎನಿಸಿಕೊಂಡಿದೆ. ಎಲ್ಲರೂ ಕೇಳುವುದಾಗಿದ್ದರೆ ಇದು ಕ್ಲಾಸಿಕ್ ಆಗುತ್ತಲೇ ಇರಲಿಲ್ಲ. ಶಾಸ್ತ್ರೀಯ ಸಂಗೀತದ ಲಕ್ಷಣವನ್ನು ಉಳಿಸಿಕೊಳ್ಳಲು ಪ್ರತಿ ಕಾಲದಲ್ಲೂ ಒಬ್ಬ ಅಧ್ವರ್ಯು, ನೇತಾರರು ಬೇಕಾಗುತ್ತಾರೆ. ಈ ಕಾರ್ಯವನ್ನು ಆರ್.ಕೆ. ಪದ್ಮನಾಭ ಅವರು ಸಮರ್ಥವಾಗಿ ಮಾಡುತ್ತಿದ್ದಾರೆ.

ನಾನು ಚಿತ್ರಗೀತೆಯ ಮುಖಾಂತರ ಸಂಗೀತಕ್ಕೆ ಬಂದವನು. ಒಬ್ಬರು ನನಗೆ ಮಾಯಾಮಾಳವ ಗೌಳದಲ್ಲಿ ಒಂದು ಹಾಡು ಹೇಳಿ ಅಂದಾಗ ನಾನು 'ಬಾ ಬಾರೋ ರಣಧೀರ' ಎಂಬ ಹಾಡನ್ನು ಹೇಳಿದೆ. 'ತಿರುಪತಿ ಗಿರಿವಾಸ' ಎಂಬ ಹಾಡನ್ನಾದರೂ ಹೇಳಬಹುದಾಗಿತ್ತು. 'ಬಾ ಬಾರೋ ರಣಧೀರ' ಹಾಡಿನಲ್ಲಿ ನಿಶಾದವಿದೆ, ರಾಗವನ್ನು ಆಚೆ ಈಚೆ ಎಳೆದಿದ್ದಾರೆ, "ನಾವು ಚಿತ್ರಗೀತೆಯವರಿಗೆ ಸ ಮತ್ತು ರಿ ಮಧ್ಯೆ ಹತ್ತು ಸ್ವರ ಸಿಗುತ್ತದೆ" ಎನ್ನುತ್ತಿದ್ದರು ಜಿ.ಕೆ. ವೆಂಕಟೇಶ್.

ವೀಣೆ ನುಡಿಸುತ್ತಾ ಹಾಡುವುದನ್ನು "ಮೈಸೂರು ಬಾಲಿ" ಎನ್ನುತ್ತಿದ್ದರು. ಸಂಗೀತ ಅಮೂರ್ತ ಸ್ಥಿತಿಯಲ್ಲಿ ಸಾಹಿತ್ಯದ ಮೂಲಕ ತಲುಪುವ ಸಾಧ್ಯತೆ ಈ ಪ್ರಕಾರದಲ್ಲಿ ಇತ್ತು. ಆರ್.ಕೆ.ಪದ್ಮನಾಭರ ಸಾಹಿತ್ಯ ಈ ಕೆಲಸವನ್ನು ಮಾಡುತ್ತಿದೆ ಈಗ ಮೂರ್ತ ಸ್ವರೂಪದ ವಾಸ್ತವಿಕ ಮಾರ್ಗದ ಕಾದಂಬರಿಗಳೇ ಹೆಚ್ಚು ಆರ್.ಕೆ. ಪದ್ಮನಾಭರ ಕಾದಂಬರಿಗಳಲ್ಲಿ ಅಮೂರ್ತತೆ ಇದೆ. ಬಹಳ



ಸೊಗಸಾದ ಸಂಗೀತ ಕೇಳಿದ ನಂತರ ಸಾವು ಸಂಭವಿಸುತ್ತದೆ. ವಾಸ್ತವಿಕ ನೆಲೆಯಲ್ಲಿ ಇದನ್ನು ನೋಡಬೇಕಾಗಿಲ್ಲ. ಅಮೂರ್ತ ಸ್ಥಿತಿಯ ಆತ್ಯಂತಿಕ ನೆಲೆಯಲ್ಲಿ ಭೌತಿಕ ಶರೀರ ಇದನ್ನು ದಾಟುತ್ತದೆ. ಹಾಗೆಯೇ ಸಾವಿನಿಂದ ಬದುಕಿಗೂ ಒಂದು ರಾಗ ಕರೆದುಕೊಂಡು ಬರುತ್ತದೆ ಸಂಗೀತದ ಅಮೂರ್ತ ಪರಂಪರೆಯನ್ನು ಲೌಕಿಕಕ್ಕೆ ಎಳೆದು ತರಬಾರದು.

ಪದ್ಮನಾಭರವರ 'ವಿಪ್ರ ವಿಕ್ರಮ' ಮತ್ತು 'ಬೇವು ಬೆಲ್ಲ' ಎರಡೂ ಸಾಮಾಜಿಕ ಕಾದಂಬರಿಗಳು. 'ನಾದ ಬಿಂದು' ಅರ್ಧ ಸಾಮಾಜಿಕ, ಅರ್ಧ ಆಧ್ಯಾತ್ಮಿಕ ಎನಿಸಿದರೆ 'ಅನಂತನಾದ' ಮತ್ತು 'ಸುವರ್ಣಗಾನ' ಕಾದಂಬರಿಗಳು ಸಂಪೂರ್ಣ ಆಧ್ಯಾತ್ಮಿಕ ಕಾದಂಬರಿಗಳು. ನನ್ನ ದೃಷ್ಟಿಯಲ್ಲಿ 'ಸುವರ್ಣಗಾನ' ಶ್ರೇಷ್ಠ ಕಾದಂಬರಿ. ಇದರಲ್ಲಿ ಬೇರೆ ಬೇರೆ ನೆಲೆ ಮತ್ತು ಬದಲಾವಣೆಗಳಿವೆ. ಅಂತ್ಯವಂತೂ ಅದ್ಭುತವಾಗಿದೆ. ಇದು ಓದಲೇಬೇಕಾದ ಕಾದಂಬರಿ.

ಕೆ.ಎಸ್.ಎಲ್. ಸ್ವಾಮಿಯವರು 'ಅನಂತನಾದ' ಕಾದಂಬರಿಯನ್ನು ಸಿನಿಮಾ ಮಾಡಲು ಬಯಸಿದ್ದರು. ನಾನು ಸ್ಕ್ರಿಪ್ಟ್ ಮಾಡಿದ್ದೆ. ಆದೇಕೋ ಮುಂದೆ ಸಿನಿಮಾವಾಗಲಿಲ್ಲ. 'ಸುವರ್ಣ ಗಾನ' ಅದ್ಭುತವಾದ ಸಿನಿಮಾ ಆಗಬಹುದು. ಯಾರಾದರೂ ಸಿನಿಮಾ ಮಾಡುವುದಾದಲ್ಲಿ ನಾನೇ ಸ್ಕ್ರಿಪ್ಟ್ ಬರೆಯುತ್ತೇನೆ.

ಆರ್.ಕೆ.ಪದ್ಮನಾಭ ಅವರು ಗಾಯಕರೂ ವಿದ್ವಾಂಸರೂ ಆಗಿರುವುದರಿಂದ ಅವರ ಕಾದಂಬರಿಗಳಲ್ಲಿ ರಾಗಗಳ ಬಗ್ಗೆ ಬಹಳ ಅದ್ಭುತವಾಗಿ ವಿಶ್ಲೇಷಣೆ ಮಾಡುತ್ತಾರೆ. ಸೌರಾಷ್ಟ್ರ, ಶ್ರೀರಾಗ, ಮೋಹನ ಮೊದಲಾದ ರಾಗಗಳ ಸ್ವರೂಪ ತಿಳಿದುಕೊಳ್ಳಲು ಸಂಗೀತಾಭ್ಯಾಸಿಗಳು ಇವರ ಕಾದಂಬರಿ ಓದಬೇಕು.

'ನಾನಾಡುವ ನುಡಿಯೇ ಕನ್ನಡ ನುಡಿ' ಎಂಬ ಹಾಡಿನಲ್ಲಿ 'ಸೌಂದರ್ಯ ಸರಸ್ವತಿ ಧರೆಗಿಳಿದು' ಎಂಬುದು ನನಗೆ ಬಹಳ ಪ್ರೀತಿಯ ಸಾಲು. ಇದನ್ನು ಅಣ್ಣಾವ್ರ ತರಹ ಯಾರೂ ಹಾಡಲಾರರು. ಮೋಹನ ರಾಗವನ್ನು ಅದ್ದಿ ತೆಗೆದಿದ್ದಾರೆ. ಹೀಗೆ ರಾಗ ಶುದ್ಧಿ ಅಂದರೆ ನನಗೆ ನೆನಪಾಗುವುದು ಆರ್.ಕೆ.ಪದ್ಮನಾಭರವರು. ಯಾವ ರಾಗವೋ ಅದೇ ರಾಗದಲ್ಲಿ ಹಾಡುತ್ತಾ ಹೋಗುತ್ತಾರೆ. ಇತ್ತೀಚಿನ ಹಾಡುಗಳಲ್ಲಿ ರಾಗ ಶುದ್ಧಿ ಕಂಡುಬರುವುದಿಲ್ಲ.

ಸಂಧ್ಯಾರಾಗ, ಹಂಸಗೀತೆ, ಮನೆಯಮಗ, ಸುಬ್ಬಣ್ಣ, ಹೇಮಾವತಿ ಮುಂತಾದ ಸಂಗೀತ ಆಧಾರಿತ ಕಾದಂಬರಿಗಳು ಬಂದಿವೆ. ಹೇಮಾವತಿಯಲ್ಲಿ ಎತ್ತಿರುವಂತೆ ಪದ್ಮನಾಭರವರು ವಿಪ್ರ ವಿಕ್ರಮದಲ್ಲಿ ಸಾಮಾಜಿಕ ಪ್ರಶ್ನೆ ಎತ್ತಿದ್ದಾರೆ. ಸುವರ್ಣಗಾನದಲ್ಲೂ ಕರಿಯ ಎಂಬ ಪಾತ್ರವನ್ನು ಕರಿಯ ಭಾಗವತ ಎಂದಿದ್ದಾರೆ. ನಾದಬಿಂದು ಕಾದಂಬರಿಯಲ್ಲಿ ವಿತ್ತೀಯ ಪ್ರಶ್ನೆ ಎತ್ತಿದ್ದಾರೆ. ಇವರ ಕಾದಂಬರಿಗಳ ಬಗ್ಗೆ ಪ್ರತ್ಯೇಕವಾಗಿ ಮಾತನಾಡುವವರು ಇರುವುದರಿಂದ ನಾನು ಹೆಚ್ಚು ಹೇಳುವುದಿಲ್ಲ.




ರವೀಂದ್ರ ಸಂಗೀತ್ ಎಂಬುದು ಪೇಟೆಂಟ್ ಆದ ಸಂಗೀತ ಪದ್ಧತಿ, ಇದರ ಬಗ್ಗೆ 67 ಪಿಎಚ್ ಡಿ ಬಂದಿವೆ. ಕನ್ನಡದಲ್ಲಿ ಸಾಹಿತ್ಯ ಸಂಗೀತದ ಸಂಸರ್ಗದ ಬಗ್ಗೆ ಬಹಳ ಗಂಭೀರ ಅಧ್ಯಯನ ಮಾಡಲು ವೇದಿಕೆಗಳಿಲ್ಲ. ಸಂಗೀತ ಲಕ್ಷಣಶಾಸ್ತ್ರಗಳ ಬಗ್ಗೆ, ರಾಗಗಳ ಸ್ವರೂಪಗಳ ಬಗ್ಗೆ ಚರ್ಚೆ ನಡೆಯುತ್ತಿದೆಯೇ ಹೊರತು ಬೇರೆ ಶಿಸ್ತುಗಳ

ಜೊತೆಗಿನ ಸಂಬಂಧಗಳ ಕುರಿತು ಚರ್ಚೆಯಾಗುತ್ತಿಲ್ಲ. ಸಂಗೀತ ಮತ್ತು ಅನ್ಯಶಿಸ್ತು ಅಂದರೆ ವಿಜ್ಞಾನ, ಗಣಿತ ಈ ತರಹದ ಸಾಹಿತ್ಯದ ಅಂತಃಶಕ್ತಿ ಅಧ್ಯಯನಕ್ಕೆ ತೊಡಗಿಕೊಳ್ಳುವುದು ಅಗತ್ಯವಾಗಿದೆ ಎಂದ ಶ್ರೀಧರಮೂರ್ತಿಯವರ ಮಾತುಗಳು ಸಭಿಕರಿಗೆ ಬಹಳ ವಿಚಾರಪೂರ್ಣ ವಾಗಿದ್ದವು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶ್ರೀ ಬೆಂ.ಶ್ರೀ.ರವೀಂದ್ರ ಅವರು ಮಾತನಾಡಿ, "ಆರ್.ಕೆ.ಪಿ. ಅವರ ವ್ಯಕ್ತಿತ್ವವನ್ನು ಸಾಕಷ್ಟು ಜನ ಇನ್ನೂ ಸರಿಯಾಗಿ ಗ್ರಹಿಸಿಲ್ಲ. ಕರ್ನಾಟಕ ಸಂಗೀತದ ಮೇರುಗಾಯಕರಾದ ಅವರು ಹೊಸ ಅನ್ವೇಷಣೆ ಪ್ರಯೋಗಗಳನ್ನು ಮಾಡಿದ್ದಾರೆ. ಲಕ್ಷಾಂತರ ಶಿಷ್ಯರನ್ನು ಸಂಪಾದಿಸಿದ್ದಾರೆ. ಸಂಗೀತಕ್ಕೆ ಮಹಾ ಬಲ ಒದಗಿಸಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಆದರೆ ಪದ್ಮನಾಭರ ಇನ್ನೂ ಹಲವಾರು ಮುಖಗಳನ್ನು ಕರ್ನಾಟಕದ ಜನತೆ ಅರಿಯಬೇಕಾಗಿದೆ. ಹಾಗಾಗಿ ಅವರ ಕಾದಂಬರಿಗಳ ವಿಚಾರ ಸಂಕಿರಣವನ್ನು ಹಮ್ಮಿಕೊಂಡೆವು. ಪದ್ಮನಾಭರವರು ಸುಮಾರು 750 ಸಂಗೀತ ಕೃತಿಗಳನ್ನು ಬರೆದಿದ್ದಾರೆ. 80ಕ್ಕೂ ಹೆಚ್ಚು ಸಂಗೀತಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಇವರು ಪ್ರಕಟಿಸಿದ್ದಾರೆ. ಇನ್ನು ಇವರ ಕ್ಯಾಸೆಟ್‌ಗಳಿಗೆ ಲೆಕ್ಕವೇ ಇಲ್ಲ. ಅವರೂ ಲೆಕ್ಕ ಇಟ್ಟಿಲ್ಲ. ಐದು ಕಾದಂಬರಿಗಳು ಪುನರ್ ಮುದ್ರಣವಾಗಿ ಬಂದಿರುವುದು ನಮಗೆ ಸಂತಸ ತಂದಿದೆ. ಇವರು ನಾಲ್ಕು ನಾಟಕಗಳನ್ನೂ ಬರೆದಿದ್ದಾರೆ. ಅವರೇ ಪುರಂದರದಾಸರಾಗಿ, ತ್ಯಾಗರಾಜರಾಗಿ, ಮುತ್ತುಸ್ವಾಮಿ ದೀಕ್ಷಿತರಾಗಿ ಪಾತ್ರ ನಿರ್ವಹಿಸಿದ್ದಾರೆ" ಎಂದರು.

ಅವರು ಮುಂದುವರಿದು, "ಕರ್ನಾಟಕ ಸಂಗೀತದ ಪಿತಾಮಹರು ಯಾರೆಂಬ ಚರ್ಚೆ ಹುಟ್ಟಿಕೊಂಡಾಗ ಪದ್ಮನಾಭರು "ಕರ್ನಾಟಕ ಸಂಗೀತದ ಪಿತಾಮಹ ಪುರಂದರದಾಸರೇ" ಎಂಬ ಕೃತಿಯನ್ನು ಬರೆದರು. ಶೀರ್ಷಿಕೆಯಲ್ಲೇ ಪ್ರಶ್ನೆ, ಉತ್ತರ ಎರಡೂ ಅಡಗಿವೆ. ಪುರಂದರದಾಸರ ಹುಟ್ಟೂರು ಶಿವಮೊಗ್ಗ ಜಿಲ್ಲೆಯಲ್ಲಿದೆ ಎಂಬುದನ್ನು ಪ್ರಚುರಪಡಿಸಿದರು. ಶ್ರೀಮದ್ವಾದಿರಾಜ ಆರಾಧನಾ ಟ್ರಸ್ಟ್, ಶಾರದಾ ಕಲಾ ಕೇಂದ್ರದ ಜೊತೆಗೂಡಿ ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯು ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಇಂದು ಕಾದಂಬರಿಯ ಕುರಿತಂತೆ ಮಾಡುವ ಉಪನ್ಯಾಸಗಳನ್ನು ಪುಸ್ತಕರೂಪದಲ್ಲಿ ತರುವ ಆಲೋಚನೆಯಿದೆ. ಸಂಕಿರಣದ ವ್ಯಾಪ್ತಿ ಹೆಚ್ಚು ಬೆಳೆಯಲಿ" ಎಂದು ಹಾರೈಸಿದರ.




'ಅನಂತನಾದ': ಖ್ಯಾತ ಗಮಕಿ ಶ್ರೀಮತಿ ಶಾಂತಾ ನಾಗಮಂಗಲ ಅವರು ಶ್ರೀ ಆರ್.ಕೆ.ಪದ್ಮನಾಭರ 'ಅನಂತನಾದ' ಕೃತಿಯ ಬಗ್ಗೆ ಮಾತನಾಡಿದರು. 'ಆರ್ ಕೆ ಪಿ' ಎಂಬ ಮಾಂತ್ರಿಕತೆಯ ಮೂರಕ್ಷರದಿಂದಲೇ ಲೆಜೆಂಡ್ ಆದ ಪದ್ಮನಾಭರು ಸಾಹಿತ್ಯ ಮತ್ತು ಸಂಗೀತ ಈ ಎರಡು ಕ್ಷೇತ್ರಗಳಲ್ಲಿಯೂ ತಮ್ಮ ಛಾಪು ಮೂಡಿಸಿದ್ದಾರೆ. ಇವರು ತಮ್ಮ 'ಅನಂತನಾದ' ಕಾದಂಬರಿಯಲ್ಲಿ ಅಧ್ಯಾತ್ಮದ ಅನಂತ ನಾದದ ಅನ್ವೇಷಣೆ ಯನ್ನು ಮಾಡಿದ್ದಾರೆ. ಸಂಗೀತಗಾರನು ಪರಿಪಕ್ವವಾದಾಗ ಅವನ ನಾದೋಪಾಸನೆ, ನಾದದ ಅನ್ವೇಷಣೆ ಅಧ್ಯಾತ್ಮದ ತುದಿಯನ್ನು ಮುಟ್ಟಿದಾಗ ಬರುವಂತಹದು ಅನಾಹತ ನಾದ. ನಾನು ಕೇವಲ ಸಾಮಾನ್ಯ ಶ್ರೋತೃವಿನ ದೃಷ್ಟಿಕೋನದಿಂದ ಕಾದಂಬರಿಯನ್ನು ನೋಡಿದ್ದೇನೆ. ಕನ್ನಡದಲ್ಲಿ ಇರುವ ಕೆಲವೇ ಸಂಗೀತ ಪ್ರಧಾನ ಕಾದಂಬರಿಗಳಿಗೆ ಆರ್. ಕೆ.ಪಿ.ಅವರ ಕಾದಂಬರಿಗಳು ಹೊಸದಾಗಿ ಸೇರ್ಪಡೆಯಾಗಿದೆ. ಮೈಲ್ಯಾಂಗ್‌ನಲ್ಲಿಯೂ ಆಡಿಯೋ ಬುಕ್ ಸಿಗುತ್ತದೆ.

ಸಂಗೀತವೇ ಜೀವಾಳವಾಗಿರುವ ಕಾದಂಬರಿ ಇದು. ಸಾಮಾನ್ಯರನ್ನು ರಂಜಿಸುವ ಪ್ರೀತಿ ಪ್ರೇಮ ದ್ವೇಷ ಇತ್ಯಾದಿ ಇದರಲ್ಲಿಲ್ಲ. ಉದಾತ್ತ ಮನೋಹರವಾದ ವಸ್ತುವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಕಥಾನಾಯಕನಾದ ಅನಂತ ಶಾಸ್ತ್ರಿ ಬ್ರಹ್ಮಚಾರಿಯಾಗಿಯೇ ಉಳಿಯುತ್ತಾನೆ. ನಾಯಕಿಯ ಪ್ರವೇಶವೇ ಇಲ್ಲವಾದ್ದರಿಂದ ಶೃಂಗಾರ ರಸವೂ ಇಲ್ಲ. ಸಂಗೀತ ರಸದ ಜೊತೆಯಲ್ಲಿ ಉತ್ತುಂಗಕ್ಕೆ ಕರೆದೊಯ್ಯಬಹುದಾದ ಅನುಭವವನ್ನು ಕಾಣುತ್ತೇವೆ. ಸಂಗೀತಗಾರನ ಸಾಧನಯಾತ್ರೆ ಇದು. ಅನಂತ ಎನ್ನುವ ಸಂಗೀತ ಸಾಧಕನ ವ್ಯಕ್ತಿತ್ವವು ಸಂಗೀತ, ಆಧ್ಯಾತ್ಮಿಕ ಕ್ಷೇತ್ರದಲ್ಲಿ ಅರಳಿ ಘಮಘಮಿಸಿ ನಾಲ್ಕು ದಿಕ್ಕಿಗೂ ಪರಿಮಳ ಬೀರಿ ದೊಡ್ಡ ಶಿಷ್ಯವೃಂದವನ್ನು ಕಟ್ಟಿ ಸಂಗೀತದಿಂದಲೇ ತನ್ನ ಸುತ್ತಲಿನ ಸಮಾಜದಲ್ಲೂ ಸಾತ್ವಿಕ ಸಂಗೀತ ಮಾರ್ಗದಿಂದ ಸುಧಾರಣೆ ತರುವ ಉತ್ತಮ ಮೌಲ್ಯಗಳನ್ನು ನೆಲೆಗೊಳಿಸಿ, ಕೊನೆಗೆ ನಾದಬ್ರಹ್ಮದ ನಿರ್ಗುಣ ರೂಪವಾದ ಅನಾಹತನಾದ ದರ್ಶನದಲ್ಲಿ ಸಾರ್ಥಕ್ಯವನ್ನು ಕಂಡುಕೊಳ್ಳುವ ಸಂಗೀತಕ್ಕೆ ತೆತ್ತುಕೊಂಡಂತಹ ಯುವಕನೊಬ್ಬನ ಜೀವನದ ಚಿತ್ರಣ ಈ ಕಾದಂಬರಿಯ ವಸ್ತುವಾಗಿದೆ. ಪಲ್ಲವಿಪುರ ಮುಂತಾದ ಸ್ಥಳ ಮತ್ತು ಪಾತ್ರಗಳ ಹೆಸರು ಸಂಗೀತಕ್ಕೆ ಜೋಡಿಸಿಕೊಂಡೇ ಬರುತ್ತವೆ. ಸಾವಿಗೂ ದೊಡ್ಡ ಸ್ಥಾನ ಕೊಟ್ಟಿದ್ದಾರೆ. ಭಾವಪೂರ್ಣ, ಕಣ್ಣಲ್ಲಿ ನೀರು ತರುವಂತಹ ಘಟನೆಗಳಿವೆ. ಸಂಗೀತ ಕಚೇರಿಗಳು ಕಾದಂಬರಿಯ ಮುಖ್ಯ ಭಾಗವಾಗಿವೆ. ಗಾಯಕರು ಸ್ವರದಲ್ಲಿ ನಿಂತು ರಂಜಿಸುವ ವಿಶೇಷ ಸಾಮರ್ಥ್ಯ ತೋರಿಸುತ್ತಾರೆ. ಕಾದಂಬರಿಯಲ್ಲಿ ಸಂಗೀತ ಮತ್ತು ಸಾಹಿತ್ಯ ಬೆಸೆದ ಸೌಂದರ್ಯವಿದೆ. ಪಾರಿಭಾಷಿಕ ಶಬ್ದಗಳು ಬಹಳ ಇವೆ. ಪ್ರಸಂಗಾನುಭವವಾಗಿ ಭಾಷೆ ಸಾಗಿದೆ. ಅವರ ಅನುಭವಸಿದ್ಧವಾದ ವಾಕ್ಯಗಳು ಇಲ್ಲಿ ಬಂದಿವೆ. ಅಸ್ಪೃಶ್ಯ ಸಮಾಜವನ್ನು ಸಂಗೀತ ಸಮಾಜದೆಡೆಗೆ ಕರೆದೊಯ್ದಿದ್ದಾರೆ.





ಈ ಕೃತಿಗೆ ಗೇಯಕಾದಂಬರಿ ಎಂಬ ಉಪಶೀರ್ಷಿಕೆ ಕೊಟ್ಟಿದ್ದಾರೆ. ಆರ್ಕೆಪಿಯವರು ಶಿಷ್ಯವೃಂದದ ಜೊತೆ ಲೆಕ್ಚರ್ ಡೆಮೋ ರೀತಿ ಮಾಡಿದರೆ ನಿಜಕ್ಕೂ ಕೀರ್ತನಳ ಗಾಯನಕ್ರಮದಲ್ಲಿರುವ ಯಮನ್, ಶಾಂತಕಲ್ಯಾಣಿ ಮುಂತಾದ ಸಂಗೀತ ಅಭ್ಯಾಸಗಳಿಗೆ ಅದ್ಭುತವಾದಂತಹ ಪಾಠಕ್ರಮ ಆಗುತ್ತದೆ. ಇದು ಆಗಲಿ ಎಂಬುದು ನನ್ನ ಆಶಯ ಎಂದು ಶ್ರೀಮತಿ ಶಾಂತಾ ನಾಗಮಂಗಲ ಅವರು 'ಅನಂತ ನಾದ' ಕೃತಿಯ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.



'ನಾದ ಬಿಂದು': "ನಾದ ಬಿಂದು" ಕಾದಂಬರಿಯ ಬಗ್ಗೆ ಮಾತನಾಡಿದ ಕತೆಗಾರ್ತಿ ಶ್ರೀಮತಿ ಗಿರಿಜಾ ರಾಜ್ ಅವರು ಪದ್ಮನಾಭರ ಎರಡನೇ ಕಾದಂಬರಿ 'ನಾದ ಬಿಂದು' ಹೃದಯವನ್ನು ಆರ್ದ್ರತೆಗೆಳೆಯುವ ಭಾವನಾತ್ಮಕ ವಸ್ತುವನ್ನು ಹೊಂದಿದೆ. ನಾದಲೀಲೆ ಅನಂತವಾದದು. ಸಂಗೀತದ ಮುಂದೆ ಎಲ್ಲರೂ ತಲೆದೂಗಲೇಬೇಕು. ಬದುಕಿನಲ್ಲಿ ಕಂಡ ಆಘಾತಕಾರಿ ಪ್ರಸಂಗದ ಹೂರಣ ಈ ಕಾದಂಬರಿಗೆ ಕಾರಣವಾಗಿದೆ ಎಂದು ಲೇಖಕರೇ ತಿಳಿಸಿದ್ದಾರೆ. ಹಣಕ್ಕಾಗಿ ನಾವು ನಮ್ಮ ಬದುಕಿನ ಕ್ಷೇತ್ರದ ಬದ್ಧತೆಯಲ್ಲಿ, ನೈತಿಕತೆಯಲ್ಲಿ ರಾಜಿ ಮಾಡಿಕೊಳ್ಳಬಾರದು. ವಿತ್ತಾಪೇಕ್ಷೆಯ ಬಯಕೆ ತಪ್ಪಲ್ಲ, ಆದರೆ ಅದಕ್ಕಾಗಿಯೇ ಬದುಕುವುದು ತಪ್ಪು.


ಯಾವ ಲೇಖಕನೇ ಆದರೂ ಕಾದಂಬರಿಯ ಪುಟಪುಟಗಳಲ್ಲಿ ತನ್ನ ಅಭಿಪ್ರಾಯ, ಚಿಂತನೆ, ತಾನು ಕಂಡ ಜೀವನ ದರ್ಶನ ನೀಡಿಯೇ ಇರುತ್ತಾನೆ. ಇಲ್ಲಿಯ ನಾಯಕ



ವಿದ್ವಾನ್ ವಾದಿರಾಜ ಆಚಾರ್ಯರು ವೈಚಾರಿಕ ಪ್ರಜ್ಞೆಯುಳ್ಳವರು. ಒಂದು ಕೃತಿಗೆ ಯಾವ ರಾಗದಲ್ಲಿ ಯಾವ ಶೃತಿಯಲ್ಲಿ ಹಾಡಿದರೆ ಅದು ಜೀವಂತವಾದೀತು, ಭಾವ ಸೌಂದರ್ಯ ಹೆಚ್ಚಿ ಪ್ರೇಕ್ಷಕರನ್ನು ತನ್ನೆಡೆಗೆ ಸೆಳೆದೀತು ಎಂಬ ಹೃದಯಂಗಮ ವಿವರಣೆಯನ್ನು ಪುಟ ಪುಟಗಳಲ್ಲಿ ಕರತಲಾಮಲಕವಾಗಿ ಕಥಾನಾಯಕರು ಹೇಳುತ್ತಿದ್ದರೆ ನಮಗೆ ಅದರ ಹಿನ್ನೆಲೆಯಲ್ಲಿ ಗಾನಕಲಾಭೂಷಣ ಪದ್ಮನಾಭ ಆಚಾರ್ಯರೇ ಕಾಣಿಸಿದರೆ ಅತಿಶಯೋಕ್ತಿಯಲ್ಲ. ಮೊದಲ ಪುಟದಿಂದ ಕೊನೆಯ ಪುಟದವರೆಗೆ ಶ್ರುತಿಬದ್ಧವಾದ ತಂಬುರಿಯ ನಾದ ಅನುರಣಿಸುತ್ತಾ ಕಿವಿಗಳಿಗೆ ಇಂಪಾಗಿ ಹಿತ ನೀಡುತ್ತಿರುವ ಅನುಭವವಾಗುತ್ತದೆ. ಸಮಗ್ರ ಕಾದಂಬರಿಯ ರಚನಾ ಸೌಂದರ್ಯವನ್ನು, ನಾದದ ಮಹಾ ಸೌಗಂಧವನ್ನು ಸಭಿಕರಿಗೆ ಮನನ ಮಾಡಿಕೊಡುವುದು ನನಗಿರುವ ಅಲ್ಪ ಸಮಯದಲ್ಲಿ ಸಾಧ್ಯವಾಗದು ಎಂದು ಹೇಳಿದ ಗಿರಿಜಾರಾಜ್, ಕಥಾಸಾರವನ್ನು ಸಂಕ್ಷಿಪ್ತವಾಗಿ ತಿಳಿಸಿದರು.

ಸಾಧನೆಯ ಹಾದಿಯಲ್ಲಿ ತೊಡಗಿದವನನ್ನು ವಿತ್ತಾಪೇಕ್ಷೆಯಿಂದ ತಾಯಿ ಹಾದಿ ತಪ್ಪಿಸುತ್ತಾಳೆ. ಅಹಂಕಾರ ನಾಶ, ಗುರು ಶಿಷ್ಯರ ಸಂಬಂಧಗಳ ಚಿತ್ರಣ ಸೊಗಸಾಗಿದೆ. ಕೆಲವು ಸಮಸ್ಯೆಗಳಿಗೆ ಸಂಗೀತ ರಾಗಗಳಲ್ಲೇ ಪರಿಹಾರ ಹುಡುಕುವ ಆಚಾರ್ಯರು ಮಾನಸಿಕ ಖಾಯಿಲೆಗೊಳಗಾದ ಶಿಷ್ಯನಿಗೆ ಕಾಂಬೋಜಿ, ಅಠಾಣ, ಬೇಗಡೆ ಮುಂತಾದ ರಾಗಗಳಲ್ಲೇ ಪರಿಹಾರ ನೀಡುತ್ತಾರೆ. ಕಚೇರಿಗಳಲ್ಲಿ ನಡೆಯುವ ಪರಸ್ಪರ ಚರ್ಚೆಗಳು ಮತ್ತು ಸಂಗೀತ ಕಚೇರಿ ಕಣ್ಣಮುಂದೆ ನಡೆಯುತ್ತಿದೆಯೇನೋ ಎಂಬಂತೆ ಜೀವಂತವಾಗಿ ಲೇಖಕರು ಕಟ್ಟಿಕೊಡುತ್ತಾರೆ. 'ನಾದ ಬಿಂದು' ಸುಂದರವಾದ ಎಲ್ಲರೂ ಓದಲೇಬೇಕಾದ ಕೃತಿ ಎಂದೂ ಶ್ರೀಮತಿ ಗಿರಿಜಾ ರಾಜ್ 'ನಾದ ಬಿಂದು' ಕಾದಂಬರಿಯನ್ನು ವಿಶ್ಲೇಷಿಸಿದರು.





'ವಿಪ್ರ ವಿಕ್ರಮ': 'ವಿಪ್ರವಿಕ್ರಮ' ಕಾದಂಬರಿಯ ಕುರಿತಂತೆ ಕವಿ, ಸಾಹಿತಿ, ಚಿಂತಕ ಶ್ರೀ ಬಿ.ಎಸ್. ಚಂದ್ರಶೇಖರ್ ಮಾತನಾಡಿ, ಕಥೆಯ ಸಾರವನ್ನು ಸಂಕ್ಷಿಪ್ತವಾಗಿ ತಿಳಿಸಿದರು.

ಕಾದಂಬರಿಯು ಕರ್ತೃವಿನ ವ್ಯಕ್ತಿತ್ವದ ಹಲವು ಮುಖಗಳನ್ನು ತೋರುವಂತಿರುವ ವಿಕ್ರಮ ಇಲ್ಲಿ ಕೇವಲ ಸಂಗೀತಗಾರನಾಗಿ ಉಳಿದಿಲ್ಲ. ಒಂದು ಕ್ಷೇತ್ರದ ಮಹಾನ್ ಸಾಧಕನೊಬ್ಬ ಇನ್ನೊಂದು ಕ್ಷೇತ್ರದಲ್ಲಿ ಕ್ರಿಯಾಶೀಲನಾಗುವುದು ಕುತೂಹಲಕರವೂ ಮೆಚ್ಚುಗೆಗೆ ಪಾತ್ರವೂ ಆಗುವುದು ಸಹಜ. ವಿವಿಧ ಕ್ಷೇತ್ರಗಳಲ್ಲಿ ಸಾಧನೆಯ ಮಟ್ಟಗಳು ಬೇರೆಯಾಗಿರಬಹುದು. ಆ ದೃಷ್ಟಿಯಿಂದ ನೋಡಿದಾಗ ವಿಕ್ರಮನು ವಿಪ್ರಶ್ರೇಷ್ಠನೂ, ಕುಸ್ತಿಪಟುವೂ, ಸಮುದಾಯ ನಾಯಕನೂ, ಸಮಾಜ ಪರಿವರ್ತಕನೂ, ಸಂಗೀತ ಆಸಕ್ತನೂ ಆಗಿದ್ದಾನೆ. ಇಲ್ಲಿ ವಿಕ್ರಮನ ಔದಾರ್ಯ, ಉದಾತ್ತ ಗುಣಗಳು ಅವನೊಬ್ಬ ಅವತಾರ ಪುರುಷ ಎನಿಸಿದರೂ ಆಶ್ಚರ್ಯವಿಲ್ಲ. ಸ್ವಸ್ಥ ಸಮಾಜದ ಆಧಾರ ಸ್ತಂಭದಂತೆ ಇರುವ ನಾಯಕನಿಗೆ ಸಂಗಾತಿ ಒಬ್ಬಳು ಬೇಕೆನಿಸದೆ ಇದ್ದದ್ದು ಆಶ್ಚರ್ಯವೇ ಸರಿ. ಇಲ್ಲಿ ನಾಯಕಿಯ ಪಾತ್ರವಿಲ್ಲ. ದಲಿತನಾದ ತಮಟೆಯ ದ್ಯಾವ, ತಮಟೆ ವಾದ್ಯದ ಸಾಧ್ಯತೆಗಳನ್ನು ಅರಿತ ಒಬ್ಬ ಸಂಗೀತರಾಧಕ. ನದಿಯಲ್ಲಿ ಸ್ನಾನ ಮಾಡಿ ನದಿಯನ್ನು ಅಪವಿತ್ರಗೊಳಿಸಿದ ಎಂದು ಶಾನುಭೋಗರ ಮಗ




ನರಸಿಂಹನಿಂದ ಥಳಿತಕ್ಕೊಳಗಾದ ದ್ಯಾವನ ಪರವಾಗಿ ನಿಲ್ಲುವ ವಿಕ್ರಮನು ನರಸಿಂಹನನ್ನು ತದಕುತ್ತಾನೆ. ಚೆಲುವನು ಬ್ರಾಹ್ಮಣ ಕನ್ಯೆ ಗೌರಿಯನ್ನು ಕೆಣಕಿ ತೊಂದರೆಕೊಟ್ಟಾಗ ಗೆಳೆಯರ ನೆರವಿನಿಂದ ಬುದ್ಧಿ ಕಲಿಸಿದ ಪ್ರಸಂಗದಲ್ಲಿ ನಾಟಕೀಯತೆ ಕಳೆಗಟ್ಟಿದೆ. ಕೃತಿಕಾರರ ಕಲ್ಪನಾಶಕ್ತಿಗೆ ತಲೆದೂಗುವಂತಿರುವ ಈ ಸನ್ನಿವೇಶವನ್ನು ಪುಸ್ತಕದಲ್ಲಿ ಓದಿ ಆನಂದಿಸಬೇಕು. ಕೆಟ್ಟವರು ಸಮಾಜ ಮುಖಿಗಳಾಗಿ ಪರಿವರ್ತಿತವಾಗುವುದು ಕಾದಂಬರಿಯ ಮುಖ್ಯ ಅಂಶ. ನಾಯಕ ಸಂಗೀತಾಸಕ್ತ. ಸಂಗೀತಗಾರನಲ್ಲ. ವಿಪ್ರತ್ವಕ್ಕೆ ಇಲ್ಲಿ ಸಿಂಹಾಸನ. ಇಲ್ಲಿರುವುದು ಸಮಾನತೆಯ ನಾದ, ಸಾರ್ಥಕತೆಯ ಶ್ರುತಿ. ಸಾಮಾಜಿಕ ಪರಿವರ್ತನೆಯ ತಾಳ, ವಿಪ್ರಶಕ್ತಿಯ ಝೇಂಕಾರ. ಆದರೂ ಇಲ್ಲಿ ಸಂಗೀತದ ಅನುರಣನ ಮಂದಸ್ಥಾಯಿಯಲ್ಲಾದರೂ ಇರುವುದನ್ನು ಗಮನಿಸಬಹುದು.

ಬ್ರಾಹ್ಮಣನು ಹೇಗಿರಬೇಕೆಂಬ ಚಿಂತನೆ ಈ ಕೃತಿಯಲ್ಲಿ ಹಾಸುಹೊಕ್ಕಾಗಿ ಬಂದಿದೆ. ಬ್ರಾಹ್ಮಣ ಎಂಬುದು ಒಂದು ಜಾತಿಯಲ್ಲ. ಗೀತೆಯಲ್ಲಿ ಹೇಳಿದಂತೆ ಅದೊಂದು ವರ್ಣ. ಅಧ್ಯಯನ, ಪ್ರವಚನಗಳು ಅವನ ಮೂಲ ಸತ್ವ. ಕೃಷಿ ವ್ಯವಹಾರ ಮೊದಲಾದ ಏನನ್ನು ಮಾಡಿದರೂ ಅದು ಉಪವೃತ್ತಿಯಾಗಿರಬೇಕು. ಇತರರಿಗೆ ಮಾರ್ಗದರ್ಶನ ಮಾಡಿ ಬೇರೆಬಗೆಯ ಕೆಲಸ ಕಾರ್ಯಗಳನ್ನು ಅವರಿಂದ ಮಾಡಿಸಬೇಕು. ದಲಿತನಾದ ಚೆಲುವನಿಗೆ ರಾಜಕೀಯ ಮುಖಂಡತ್ವ ದೊರಕಿಸಿ ತಾನು ಮಾರ್ಗದರ್ಶಕನಾಗಿ ನಿಲ್ಲುವ ವಿಕ್ರಮನು ವಿಪ್ರತ್ವದ ಶ್ರೇಷ್ಠ ಮಾದರಿಯಾಗಿ ಕಾಣುತ್ತಾನೆ. ಬ್ರಾಹ್ಮಣನು ದುರ್ಬಲನಾಗಿರದೆ ಕ್ಷಾತ್ರ ಬಲವನ್ನು ಮೈಗೂಡಿಸಿಕೊಳ್ಳಬೇಕು ಎಂಬುದು ಒಂದು ಮುಖ್ಯ ಸಂದೇಶ. ಜಾತಿ ವೈಷಮ್ಯ ಹೋಗಬೇಕು. ವಿಷ್ಣುಪಾದ, ಶಿವಲಿಂಗ, ಸಾಲಿಗ್ರಾಮಗಳು ಒಟ್ಟಿಗೆ ಸೇರುವಂತಾಗಬೇಕು. ಎಲ್ಲ ಜಾತಿಗಳು ಸೇರಿದ ಸಂಗೀತ ಜಾತಿ ಎಂಬ ಒಂದೇ ಜಾತಿ ಸೃಷ್ಟಿಸಬೇಕು. ಭಾರತದ ಧರ್ಮ ಸಂಸ್ಕೃತಿಗೆ ಸಂಗೀತವು ಹೊದಿಕೆಯಾಗಿ ರಕ್ಷಿಸಲಿ. ವಿಕ್ರಮನ ಕಲ್ಪನೆ ಸಮಾಜದ ಪರಿವರ್ತನೆ. ಆ ಕುರಿತ ಚಿಂತನೆಗಳಿಗೆ ಆಸ್ಪದ, ಮಹತ್ವಗಳಿರುವುದನ್ನು ಅಲ್ಲಗೆಳೆಯುವ ಹಾಗಿಲ್ಲ. ಜಾತಿ ಪದ್ಧತಿಯ ಅನಿಷ್ಟ ಅಡಗಿ ಮಹಿಳೆಯರಿಗೆ ರಕ್ಷಣೆ, ಶೋಷಿತರಿಗೆ ನ್ಯಾಯ ದೊರೆಯಬೇಕು ಎಂಬ ನಿಟ್ಟಿನಲ್ಲಿ ಕಥಾನಾಯಕನಾದ ವಿಕ್ರಮನು ದಿಟ್ಟ ಹೆಜ್ಜೆಗಳನ್ನು ಇಟ್ಟಿರುವುದು ಮೆಚ್ಚುವಂತಿದೆ.

ಇಲ್ಲಿನ ದುಷ್ಟ ಪಾತ್ರಗಳಿಗೆ ಸೋಲು ಎಂಬುದಿಲ್ಲ. ಚೆಲುವನ ಪಾತ್ರದ ಬೆಳವಣಿಗೆಯಲ್ಲಿ ಕೃತಿಕಾರರ ಚಿಂತನೆ ನಿಚ್ಚಳವಾಗುತ್ತದೆ ರಾಮಾಯಣ ದರ್ಶನ ಮಹಾಕಾವ್ಯದಲ್ಲಿ ಕೆಟ್ಟದ್ದೆಲ್ಲವೂ ಒಳಿತಿನತ್ತಲೇ ಸಾಗುವಂತೆ ಈ ಪರಿವರ್ತನೆ ಒಟ್ಟಾರೆ ಸಾಮಾಜಿಕ ಮತ್ತು ಅಧ್ಯಾತ್ಮಿಕದೆಡೆಗೆ ಎಲ್ಲರೂ ಮುನ್ನಡೆಯಬೇಕಾದ ಅನಿವಾರ್ಯತೆಯನ್ನು ಕೃತಿಯಲ್ಲಿ ಸ್ಪಷ್ಟವಾಗಿ ನಿರೂಪಿಸಲಾಗಿದೆ. ತಮಸೋಮಾ ಜ್ಯೋತಿರ್ಗಮಯ ಎಂಬ ಆರ್ಷೇಯ ಮಂತ್ರದ ದರ್ಶನವೇ ಇಲ್ಲಿ ಮೈದಾಳಿದೆ.



ಆಧುನಿಕ ಕಥೆಗಾರರು ಬಳಸುವ ಕಥನ ನಿರೂಪಣಾ ತಂತ್ರಗಳನ್ನು ಬಳಸಲು ಹೋಗದೆ ಓದುಗರಿಗೆ ಭಾರವಾಗ ದಂತಹ ನೇರ ನಿವೇದನೆ ಈ ಕಾದಂಬರಿಯ ಬಹುಮುಖ್ಯ ಗುಣ. ಕಾದಂಬರಿ ಓದುವಾಗ ದೇವುಡು ಅವರ ಮಹಾಬ್ರಾಹ್ಮಣ ನೆನಪಾದರೆ ಆಶ್ಚರ್ಯವಿಲ್ಲ. ಅಲ್ಲಿಯ ಪರಿಸರ ವೇದಕಾಲೀನ, ಇಲ್ಲಿಯದು ಸಮಕಾಲೀನ. ಭಾಷೆ ಹಾಗೂ ನಿರೂಪಣಾ ಶೈಲಿಯಲ್ಲಿ ವಿಭಿನ್ನತೆ ಇದೆ. ಕೃತಿಯ ಉದ್ದೇಶದಲ್ಲಿ ಸಾಮ್ಯತೆ ಕಾಣದಿರುವುದಿಲ್ಲ. ಪದ್ಮನಾಭರ ಈ ಕೃತಿಗೆ ಮಲ್ಲೇಪುರಂ ವೆಂಕಟೇಶ್ ರವರ ಸಮರ್ಥವಾದ ಮುನ್ನುಡಿ ಇದೆ. ಪುಸ್ತಕವನ್ನು ಹೆಚ್ಚು ಜನರು ಓದಿ ಆನಂದಿಸಲಿ ಎಂದು ಆಶಿಸುವೆ ಎಂದು ಹೇಳಿ ಶುಭ ಕೋರಿದರು.




'ಸುವರ್ಣಗಾನ': ಗಾಯಕಿ, ಕವಿ, ಕಾದಂಬರಿಗಾರ್ತಿ, ವಿದುಷಿ ಶ್ರೀಮತಿ ರಂಜನಿ ಕೀರ್ತಿಯವರು 'ಸುವರ್ಣಗಾನ' ಕಾದಂಬರಿ ಆರಂಭವಾಗುವ ತೃತೀಯ ಪ್ರಸ್ತಾಪದೊಂದಿಗೆ ತಮ್ಮ ಮಾತು ಆರಂಭಿಸಿದರು. ನಾನು ಎಲ್ಲ ಶಿಷ್ಯರ ಪರವಾಗಿ ಗುರುಗಳನ್ನು ಅಭಿನಂದಿಸಿ ಮಾತನಾಡುತ್ತಿರುವೆ ಎಂದ ಅವರು, ಸುವರ್ಣಗಾನ ಕಾದಂಬರಿಯನ್ನು ಏಕೆ ಓದಬೇಕು ಎಂಬ ಪ್ರಶ್ನೆ ಹಾಕಿಕೊಂಡು ಕೆಲವು ಪರಿಚಯಾತ್ಮಕ ಮಾತುಗಳನ್ನು ಹೇಳಬಯಸುವೆ ಎಂದರು. ಈ ಕೃತಿಯ ವೈಶಿಷ್ಟ್ಯ ಕೃತಿಕಾರ ಒಬ್ಬ ಮಹಾನ್ ಸಂಗೀತಗಾರರು. ಸಂಗೀತವನ್ನೇ ಜೀವಿಸಿದರೇ ಬರೆದಿರುವ ಕೃತಿ ಎನ್ನುವುದೇ ಇದರ ವಿಶಿಷ್ಟತೆ. ಪಾರಿಭಾಷಿಕ ಶಬ್ದಗಳ ನೆರವಿನೊಂದಿಗೆ ಸಂಗೀತವನ್ನು ಬರೆದು ತೋರಿಸುವುದು ಸಾಧ್ಯ ಎಂಬಂತೆ ಸಂಗೀತವನ್ನೇ ಕೇಂದ್ರವಾಗಿಟ್ಟುಕೊಂಡು ಈ ಕಾದಂಬರಿಯನ್ನು ಬರೆದಿದ್ದಾರೆ. ಇಲ್ಲಿ ಊರ ಹೆಸರು ಆರೋಹಣಪುರ. ಅವರ ನಂಬಿಕೆಗಳನ್ನು ಕೃತಿಯ ಉದ್ದಕ್ಕೂ ಹೇಳಿರುವ ರೀತಿ ಶಿಷ್ಯರಾದ ನಮಗೆ ಹೆಚ್ಚು ಮನನವಾಗುತ್ತದೆ. ಶೃತಿ, ಶಾರೀರ ಎರಡು ಒಂದೇ ಆದರೆ ಅದು ಅದ್ವೈತ ಎಂಬ ಮಾತು ಕಾದಂಬರಿಯಲ್ಲಿದೆ. ಶಿಷ್ಯರಾದ ನಮಗೆ ಓದುವಾಗ ಗುರುಗಳು ಹೇಳಿದ ಮಾತುಗಳು ನೆನಪಾಗುತ್ತವೆ, ಅವರ ಅನುಭವ ಪಾಂಡಿತ್ಯದ ಅರಿವಾಗುತ್ತದೆ. ಕೈವಾರದ ಘಟನೆ ನಮಗೆ ಎಷ್ಟು ಬಾರಿ ಹೇಳಿದ್ದಾರೆ. ಒಬ್ಬ ಹೆಂಗಸು ತನ್ನ ಸೆರಗಿನ ಗಂಟಿನಿಂದ ಮುದ್ದೆಯಾದ ಹತ್ತು ರುಪಾಯಿ ತೆಗೆದುಕೊಡುವ ಒಂದು ಘಟನೆ. ಅದನ್ನು ಅವರು ಈಗಲೂ ಇಟ್ಟುಕೊಂಡಿದ್ದಾರೆ. ಈ ಕಾದಂಬರಿಯಲ್ಲಿ ಒಬ್ಬ ಕೂಲಿ ಮಾರುವವನು ಹತ್ತು ರೂಪಾಯಿ ಕೊಡುವ ಪ್ರಸಂಗ ಬರುತ್ತದೆ. ಅಂತರ್ ಸೃಷ್ಟಿಯ ವಸ್ತುವನ್ನು ಕೇಂದ್ರವಾಗಿಸಿಕೊಂಡಿರುವ ಕಾದಂಬರಿ ಇದು. ಅನೇಕ ಕಾರಣಗಳಿಂದ ವಿಭಿನ್ನವಾಗಿದೆ. ಕಾದಂಬರಿಯ ಉದ್ದಕ್ಕೂ ಸಂಗೀತದ ವಿಚಾರಗಳಿವೆ. ಕಾದಂಬರಿಯ ರಸವಾಹಕವಾಗಿ ವಸ್ತುವಿಗೆ ಪೂರಕವಾಗಿ ರಸೋಚಿತವಾಗಿ ಹೇಳಿರುವುದು ಕಾದಂಬರಿಯ ವಿಶೇಷತೆ.




ಅಯೋಧ್ಯಾ ಕಾಂಡವು ರಾಮಾಯಣದ ಹೃದಯ ಭಾಗ ಎನ್ನುವಂತೆ ಸುವರ್ಣಕ ದಾನದಲ್ಲಿ ಮಗನನ್ನು ಮಠಕ್ಕೆ ಕೊಡಬೇಕು ಅಂತ ಗೊತ್ತಾದಾಗ ತಾಯಿ ಹೊನ್ನು ಹೆಚ್ಚು ತಿಂತೀಯಾ ಅನ್ನುವ ಪ್ರಸಂಗ ಹನಿಗಣ್ಣಾಗಿ ಓದುವಂತೆ ಮಾಡುತ್ತದೆ ಪೂರ್ವ ಕಲ್ಯಾಣಿ ಕಾಂಬೋಜಿ ಅಠಾಣ ಇವುಗಳ ಬಗ್ಗೆ ಗುರುಗಳಿಗೆ ಹೆಚ್ಚು ಒಲವು ಎಂಬುದನ್ನು ತರಗತಿಯಲ್ಲಿ ಮಾತ್ರವಲ್ಲ, ಕಾದಂಬರಿಯಲ್ಲೂ ಕಾಣುತ್ತೇವೆ. ಹೇಗೆ ವ್ಯಕ್ತಿಗೆ ಬೇರೆಬೇರೆ ವಿಳಾಸವಿರುತ್ತದೆಯೋ ಹಾಗೆ ರಾಗಗಳಿಗೂ ವಿಳಾಸವಿರುತ್ತದೆ. ಅನೇಕ ಬಿಂದುಗಳು ಒಂದು ಕೇಂದ್ರಕ್ಕೆ ಬಂದು ಸೇರುವುದು ಕಾದಂಬರಿಗಳಲ್ಲಿ ಸಾಮಾನ್ಯ. ಸುವರ್ಣಗಾನ ಸರಳ ರೇಖೆಯಲ್ಲಿ ಸಾಗುವ ಸರಳ ಭಾಷೆಯ ಸರಳ ಕಥಾನಕ. ಆದರೆ ಅದ್ವಿತೀಯ ಸಂಗೀತ ಕೇಂದ್ರವಾಗಿರಿಸಿಕೊಂಡು ಸಾಹಿತ್ಯಕ್ಕೆ ಲೋಪ ಬಾರದೆ ಇರುವಹಾಗೆ ರಚಿಸಲಾದ ಪರಿಗೆ ನಾನು ಬೆರಗಾಗಿದ್ದೇನೆ ಎಂದು ಶ್ರೀಮತಿ ರಂಜನಿ ಕೀರ್ತಿಯವರು ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು.





'ಬೇವು ಬೆಲ್ಲ': 'ಬೇವು ಬೆಲ್ಲ' ಕಾದಂಬರಿಯ ಕುರಿತು ಮಾತನಾಡಿದ ಲೇಖಕ, ವಿಮರ್ಶಕ ಶ್ರೀ ಜಿ.ಎನ್.ನರಸಿಂಹಮೂರ್ತಿಯವರು, ಗಂಭೀರವಾದ ಸಾಹಿತ್ಯದ ಚರ್ಚೆಗಳು ಈಗ ಅಷ್ಟಾಗಿ ಆಗುತ್ತಿಲ್ಲ. ಇಲ್ಲಿ ಇಂದು ಸಾಹಿತ್ಯಿಕ ವಿಚಾರ ಸಂಕಿರಣದ ಜೊತೆಗೇ ಸಂಗೀತ ಸಮಾರಾಧನೆಯು ನಡೆಯುತ್ತಿರುವುದು ಸಂತೋಷ. 'ಬೇವು ಬೆಲ್ಲ' ಕಾದಂಬರಿಯನ್ನು ಮೊದಲು ಪ್ರಕಟಿಸಿದವರು ಸಂಸ್ಕೃತಿ ಸುಬ್ರಹ್ಮಣ್ಯರವರು. ಶ್ರೀಮದ್ವಾದಿರಾಜ ಆರಾಧನಾ ಟ್ರಸ್ಟ್ ಎರಡನೇ ಬಾರಿಗೆ ಪ್ರಕಟಿಸಿದೆ. ಮುಖಪುಟವೇ ಕಥೆಯ ವಸ್ತುವನ್ನು ಸೂಚಿಸುತ್ತಿದೆ. ಸರಳವಾದ ಕ್ರಮದಲ್ಲಿ ಕಥೆ ಹೇಳಿಕೊಂಡು ಹೋಗುತ್ತಾರೆ. ಒಳ್ಳೆಯ ಭಾಷೆ ಮತ್ತು ಶೈಲಿ ಇದೆ. ಸಂಗೀತದ ಅಂಶದ ಜೊತೆಗೆ ಕಥೆಯೂ ಇದ್ದು, ಕಥೆ ಅನೇಕ ತಿರುವುಗಳನ್ನು ಪಡೆಯುತ್ತದೆ. ಈ ಸಾಮಾಜಿಕ ಕಾದಂಬರಿ ಒಂದು ಚಲನಚಿತ್ರ ಇದ್ದಹಾಗೆ ಇದೆ. ಸಂಗೀತಗಾರನ ಸಾಧನೆಯ ವಿವರ ಕೊಡುತ್ತಾರೆ. ಸಂಗೀತದ ಬೇರೆ ಬೇರೆ ವಿವರಗಳನ್ನು ಕೊಡುತ್ತಾ ಹೋಗುವುದೇ ಇದರ ಮುಖ್ಯ ಧ್ವನಿಯಾಗಿದ್ದು ಪಾತ್ರ ಪೋಷಣೆ ಚೆನ್ನಾಗಿದೆ ಎಂದು ಹೇಳಿ ಕಾದಂಬರಿಯ ಕೆಲವು ಭಾಗಗಳನ್ನು ತೆರೆದಿಟ್ಟರು. ಈ ಕಾದಂಬರಿಯಲ್ಲಿ ಮದುವೆಯಾದ ಮೇಲೆ ಕಷ್ಟ ಪರಂಪರೆ ಆರಂಭವಾಗುತ್ತದೆ. ಕಾರಣ ಏನೆಂಬುದು ಅಂತ್ಯದಲ್ಲಿ ತಿಳಿಯುತ್ತದೆ. ಕಥಾನಾಯಕ ಗವಾಯಿಗಳ ಸಮ್ಮುಖದಲ್ಲಿ ಹಾಡಿದಾಗ, ಸಾಧಕನು ಸಾಧನೆಯನ್ನು ಮಾಡಿ ಪ್ರಸ್ತುತಿಪಡಿಸಿದಾಗ ಅದು ಎಲ್ಲರಿಗೂ ಸಂತೋಷ ತರುತ್ತದೆ. ಅಂತಹವರನ್ನು ಎಲ್ಲರೂ ಗೌರವಿಸುತ್ತಾರೆ ಎನ್ನುವ ಸಂದೇಶವನ್ನು ಕೊಡುತ್ತಾರೆ. ಕಾದಂಬರಿಯಲ್ಲಿ ಕಥಾನಾಯಕ ಮಗಳಿಗೆ ಸುನಾದ ವಿನೋದಿನಿ ಎಂಬ ಹೆಸರು ಕೊಟ್ಟಿರುತ್ತಾರೆ ಕೊನೆಯಲ್ಲಿ ಸುಖಾಂತ್ಯವಿದೆ. ಕಾದಂಬರಿಯಲ್ಲಿ ಜೀವನದ ಉದ್ದೇಶವೇನು ಎಂಬ ಪ್ರಶ್ನೆ ಏಳುತ್ತದೆ ವಾದಿರಾಜ ಸ್ವಾಮಿಗಳ ಕೃತಿಗಳನ್ನು ಪ್ರಚಾರ ಮಾಡುವುದೇ ನಿನ್ನ ಜೀವನದ ಉದ್ದೇಶ ಎಂಬ ಮಾತು ಇಲ್ಲಿ ಬರುತ್ತದೆ.





ಹೀಗೆ ಕಾದಂಬರಿಯನ್ನು ಸಂಗೀತದ ವಿವರಗಳಿಗಾಗಿಯೂ ಓದಬಹುದು, ಸಾಮಾಜಿಕ ಕಾದಂಬರಿಯಾಗಿಯೂ ಓದಬಹುದು. ಸಂಗೀತದ ಅನುರಣನ ಆರ್.ಕೆ.ಪದ್ಮನಾಭರ ಎಲ್ಲ ಕಾದಂಬರಿಗಳಲ್ಲೂ ಇದೆ. ಈ ಕಾದಂಬರಿಯಲ್ಲಿ ಅವರ ಜೀವನದ ಉದ್ದೇಶ ಸ್ಪಷ್ಟವಾಗಿ ಕಾಣುತ್ತದೆ. ಸಂಗೀತದ ವಿವರಗಳನ್ನು ಅನುಭವಿಸುವ ಸಹೃದಯರಿಗೆ ಇದು ಹೆಚ್ಚಿನ ಸಂತೋಷ ಕೊಡುತ್ತದೆ. ಒಂದು ಉತ್ತಮ ಕೃತಿ ನೀಡಿದ ಆರ್.ಕೆ.ಪದ್ಮನಾಭ ಅವರಿಂದ ಇನ್ನಷ್ಟು ಕಾದಂಬರಿಗಳು ಬರಲಿ ಎಂದೂ ಶ್ರೀ ಜಿ.ಎನ್. ನರಸಿಂಹಮೂರ್ತಿಯವರು ಆಶಿಸಿದರು.

ಹೀಗೆ ಪ್ರತಿಯೊಂದು ಉಪನ್ಯಾಸದ ನಂತರ ಆಯಾ ಕೃತಿ ರಚನೆಗೆ ತಮಗೊದಗಿದ ಪ್ರೇರಣೆಯ ಬಗ್ಗೆ ವಿವರಿಸಿದ ಆರ್.ಕೆ.ಪದ್ಮನಾಭರವರು, ತಮ್ಮ ಗಾಯನದಿಂದ ಪ್ರೇಕ್ಷಕರನ್ನು ನಾದಲೋಕಕ್ಕೊಯ್ದರು. ಡಾ.ಪದ್ಮನಾಭರು ರಚಿಸಿರುವ ಹೊಸ ರಾಗಗಳಲ್ಲಿನ ರಚನೆಗಳನ್ನು ಹಾಡುವುದರ ಮೂಲಕ ಅವರ ಶಿಷ್ಯಂದಿರು ಹಾಗೂ ವಿದುಷಿಯರಾದ ಅಕ್ಷತಾ, ಭವ್ಯಾ, ಅರ್ಚನಾ ಹಾಗೂ ಸಂಗೀತ ವಿದ್ವಾನರಾದ ದೀಪಕ್, ಅಕ್ಷಯ್ ಮತ್ತು ಅಭಿಷೇಕ್‌ರವರು ತಮ್ಮ ಸುಶ್ರಾವ್ಯ ಗಾಯನಗಳ ಮೂಲಕ ಸಭಿಕರ ಮನತಣಿಸಿದರು.




ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ವತಿಯಿಂದ ಸಮಾರಂಭದ ಮುಖ್ಯ ಅತಿಥಿಗಳಾದ ಶ್ರೀ ಎನ್.ಎಸ್. ಶ್ರೀಧರಮೂರ್ತಿ ಹಾಗೂ ಗಾನಕಲಾಭೂಷಣ ಡಾ. ಆರ್.ಕೆ.ಪದ್ಮನಾಭರವರನ್ನು ಸನ್ಮಾನಿಸಲಾಯ್ತು.

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಬೆಂ.ಶ್ರೀ. ರವೀಂದ್ರ ಮತ್ತು ಪ್ರಧಾನ ಕಾಋಯದರ್ಶಿ ಶ್ರೀ ಕೆ.ಎನ್. ಮಹಾಬಲ ಹಾಗೂ ಸೊಗಸಾಗಿ ಕಾರ್ಯಕ್ರಮ ನಿರೂಪಣೆ ಮಾಡಿದ ಶ್ರೀರಂಗರಾಜನ್ ಅವರನ್ನು ಈ ಸಂದರ್ಭದಲ್ಲಿ ಡಾ. ಆರ್.ಕೆ. ಪದ್ಮನಾಭ ಅವರು ಶ್ರೀಮನ್ಮದ್ವಾದಿರಾಜ ಆರಾಧನಾ ಟ್ರಸ್ಟ್ (ಶಾರದಾ ಕಲಾ ಕೇಂದ್ರ) ಪರವಾಗಿ ಸನ್ಮಾನಿಸಿದರು.





ಕೊನೆಯಲ್ಲಿ ಶ್ರೀ ಹು.ವಾ.ಶ್ರೀಪ್ರಕಾಶ್ ಅವರ ಧನ್ಯವಾದ ಸಮರ್ಪಣೆಯೊಂದಿಗೆ ವಿಶೇಷ ಸಂಗೀತ ಸಾಹಿತ್ಯ ಸಮ್ಮೋಹನ ಮುಕ್ತಾಯವಾಯಿತು.



ಶ್ರೀ ಗುರುರಾಜ ಶಾಸ್ತ್ರಿ ಹಾಗೂ ಶ್ರೀಮತಿ ರೇಣುಕಾ ದೇಸಾಯಿಯವರು ವೇದಿಕೆ ಮತ್ತು ಹಿನ್ನೆಲೆಯ ರಂಗಸಜ್ಜಿಕೆ ನಿರ್ವಹಿಸಿದರು.

ಪತ್ತಿ ಸಭಾಂಗಣ ಪ್ರೇಕ್ಷಕರಿಂದ ಕಿಕ್ಕಿರಿದು ತುಂಬಿತ್ತು. ಸಂಗೀತ ಸಾಹಿತ್ಯ ಸಮ್ಮೇಳನದಂತೆ ಮೂಡಿಬಂದ ಈ ಕಾರ್ಯಕ್ರಮದುದ್ದಕ್ಕೂ ಪ್ರೇಕ್ಷಕರು ತನ್ಮಯರಾಗಿದ್ದು ಸಮಾರಂಭದ ಬಗ್ಗೆ ಅಪಾರ ಮೆಚ್ಚುಗೆ ವ್ಯಕ್ತಪಸಿಸಿದರು.

***

ಕವಿಮನ

ಹುನ್ನಾರ

ತೋಳದ ಹಿಂಡು ಸಜ್ಜುಗೊಳ್ಳುತಿದೆ
ಎಚ್ಚರಾಗಿರಿ ಕುರಿಗಳೆ
ಚೂರು ಸೊಪ್ಪಿನ ಆಸೆ ತೋರಿಸಿ
ವಂಚಿಸಿ ನಮ್ಮನು ಹಳ್ಳಕ್ಕೆ ಬೀಳಿಸಿ
ಭೂರಿ ಭೋಜನ ತಾವು ಸವಿಯಲು

ಅಂಗೈಯಲ್ಲೇ ಅರಮನೆ ತೋರಿಸಿ
ಹೊಸ ಕನಸಿನಲ್ಲಿ ನಮ್ಮನು ತೇಲಿಸಿ
ಆಕಾಶವನೆ ಭುವಿಗಿಳಿಸುವೆನು
ನಕ್ಷತ್ರಗಳ ಉಡುಗೊರೆ ಕೊಡುವೆನು
ಎನ್ನುತ ಬಗೆ ಬಗೆ ಆಮಿಷ ಒಡ್ಡುತ

ಚಂದ್ರನ ಮೇಲೆ ಸೈಟನು ನೀಡುವೆ
ಇಂದ್ರನರಮನೆಯ ವೈಭೋಗ ಕೊಡುವೆ
ಭಾಗ್ಯಲಕ್ಷ್ಮಿಯನೇ ತಂದು ಕೂರಿಸುವೆ
ಎಲ್ಲರ ಬಡತನ ಓಡಿಸಿಬಿಡುವೆ
ಎನ್ನುತ ಅರಚುತ ನಮ್ಮಯ ಸುತ್ತಲೂ

ನಾವೋ ಕುರಿಗಳು ಬ್ಯಾ ಬ್ಯಾ ಅನ್ನುತ
ಬಾಲವ ಮೂಸುತ ಕಂಗಳ ಮುಚ್ಚುತ
ತಲೆಯೆತ್ತದೆ ಉಸಿರೆತ್ತದೆ ನಡೆಯುವೆವು
ನಮ್ಮಯ ಕಾವಲಿಗೆಂದು ಬರುವವರ
ಹುನ್ನಾರವರಿಯದೆ ಹೋಗುವೆವು

– ವೆಂಕಟೇಶ ಬೈಲೂರು
02.07.2025

ಯಾರಿವನು

ಅವನು ಎಂತಹ ಜಾಣ
ನೀಡಿವೆ ಸಾಕಷ್ಟು ಪ್ರಮಾಣ
ಕೆಲವನ್ನು ಕೊಟ್ಟು ಕೆಲವು ತನ್ನಲ್ಲಿಟ್ಟು
ಪ್ರಯತ್ನದಾಸೆ ತುಂಬಿದ್ದಾನೆ

ಉಪ್ಪು ನೀರಲ್ಲಿಟ್ಟು
ಉಪ್ಪಲ್ಲಿ ರುಚಿಯಿಟ್ಟು
ಹೆಪ್ಪುಗಟ್ಟಿಸಿ ತೆಗೆಯೆನ್ನುತ್ತಾನೆ
ಆಯುಷ್ಯ ಅವನ ಕೈಲಿ
ಆರೋಗ್ಯ ನಮ್ಮ ಕೈಲಿ

ಎಲ್ಲ ತನ್ನ ಮಕ್ಕಳೆಂದು
ಎಲ್ಲರಿಗೊಂದು ಪ್ರತಿಭೆ ತಂದು
ಅದರಲ್ಲೆ ಮುಂದುವರಿದು
ತೃಪ್ತಿ ಪಡುಯೆನ್ನುತ್ತಾನೆ

ಕಷ್ಟದಿಂದ ದುಡಿದವನು
ಸುಖವಾಗಿ ತಿನ್ನುವನು
ಸುಖದಿಂದ ದುಡಿದವನು
ಕಷ್ಟದಿಂದುಣ್ಣುವನೆಂದು
ಶಾಸನ ಮಾಡುತ್ತಾನೆ

ಎಲ್ಲ ಕಡೆ ತಾನಿದ್ದು ಇಲ್ಲದಂತಿದ್ದು
ಎಲ್ಲವನು ನೋಡುತ್ತಾನೆ
ಅವನಿಗಾಗಿ ನಡೆಸಿ ಹುಡುಕಾಟ
ಮಾಡಿಕೊಂಡರು ಮತಧರ್ಮಗಳ ಕೂಟ
ಮತಿವಂತರಿಗೆ ಮಾತ್ರ
ಅವನು ದೊರೆಯುತ್ತಾನೆ

– ರಂಗೋಪಂತ್ ನರಸಿಂಗರಾವ್
09.07.2025

ಕವಿಮನ

ಏನನ್ನೂ ಅವರೀಗ ನೋಡುತ್ತಲಿಲ್ಲ

ಒಳಗಣ್ಣಿಗೂ ಕುರುಡು ರಾಚಿಹುದು ಅವರಿಗೆ ಏನನ್ನು ಅವರೀಗ ನೋಡುತ್ತಲಿಲ್ಲ
ಎದುರಿಗೇ ಕಾಣುವ ಕಳ್ತನಕೆ ಕಣ್ಮುಚ್ಚಿ ಏನನ್ನು ಅವರೀಗ ನೋಡುತ್ತಲಿಲ್ಲ

ಏಳ್ಗೆ ಎಂಬೋ ಹಂದಿ ಬಾಲವನು ಹಿಡಿದೋಡಿ ಊರ ಹೊಲಸಲಿ ಬಿದ್ದು ಹೊರಳುತ್ತಲಿಹರು
ಅನ್ನ ಹಾಕಿದ ಮನೆಗೆ ಕನ್ನ ಬಿದ್ದರು ಅಳದೆ ಏನನ್ನು ಅವರೀಗ ನೋಡುತ್ತಲಿಲ್ಲ

ಕಳ್ಳರ ಕೈ ಹಿಡಿದು ಸುಳ್ಳರ ಮೈದಡವಿ ಪರರ ಸ್ವತ್ತಲಿ ಆಟವಾಡುತ್ತಲಿಹರು
ನೋಡುವ ಕಣ್ಣಿದ್ದು ಮಾತನಾಡದ ಸಭಿಕ ಏನನ್ನು ಅವರೀಗ ನೋಡುತ್ತಲಿಲ್ಲ

ತನ್ನ ಪಾಲಿನ ತುತ್ತು ತನ್ನ ಹೂಜೆಯ ನೀರು ತನ್ನ ಜೀವದ ಉಸಿರು ಮಾತ್ರ ಮಹತೆನ್ನುವರು
ಕೇಂದ್ರವಾಗಿರಿಸಿಹರು ತಮ್ಮನ್ನು ತಾವೇ ಏನನ್ನು ಅವರೀಗ ನೋಡುತ್ತಲಿಲ್ಲ

ತನ್ನ ಚರ್ಮವನುಳಿಸೆ ಪೆರರ ಮೈಮನ ದಹಿಸಿ ಕೆಸರಿನೊಳ್ ಹಾವಂತೆ ನುಸುಳುತ್ತಲಿಹರು
ಸತ್ಯ ನಿರ್ಣಯಗಳನು ಮಾಡದೆಯೆ ಬದಿಗೊತ್ತಿ ಏನನ್ನು ಅವರೀಗ ನೋಡುತ್ತಲಿಲ್ಲ

ಸ್ವಾರ್ಥಿಗಳ ಸರಿಪಡಿಸೆ ಮೇಲಿದ್ದ ಭಗವಂತ ಹಿಂದೆ ಕೆಲವೊಂದು ಸಲ ಧರೆಗಿಳಿದು ಬಂದ
ಇಂಥವರ ನೋಡಿದೊಡೆ ಅವನೂನು ಕೈಚೆಲ್ಲಿ ಏನನ್ನು ಅವನೀಗ ನೋಡುತ್ತಲಿಲ್ಲ

– ಸೀತಾರಾಮ ಕಟ್ಟಿ
16.07.2025

ಕವಿಮನ

ನೋವನಡಗಿಸಲಿ ಬದುಕು

ಮರೆತು ಬದುಕಲೆ ಬೇಕು ನೋವನಡಗಿಸಿ ಮನದಿ
ಹರಿವ ಹಾದಿಯ ಬಿಡದೆ ನದಿ ಸಾಗರ ಸೇರುವಂತೆ ॥

ಉಬ್ಬರಿಸಿ ಉಕ್ಕುವ ಅಲೆಗಳ ಸಾಗರ ತಡೆವಂತೆ
ಕಡೆ ಕಡೆದು ಹದಗೊಳಿಸಿ ಶಾಂತವಾಗಿಸಲು ।
ಏಳು ಬೀಳಿನ ನಡುವೆ ತಲ್ಲಣಿಸೊ ಹಡಗೊಂದು
ಮರೆತು ಸಂಕಷ್ಟಗಳ ಈಜಿ ದಡ ಸೇರುವಂತೆ ॥

ಸಿಡಿಲು ಮಿಂಚು ಬೆಂಕಿಯ ಹೊಡೆತದ ನಡುವೆ
ಹಿಡಿ ಹಿಡೆದು ದಿಶೆ ಮರೆತು ಓಡೊ ಮೇಘಗಳ ।
ವರುಣನಾ ಕೃಪೆ ಕೊಡಿಸಿ ಮಳೆ ಸುರಿಸೊ ಮುಗಿಲು
ಮರೆತು ನೋವುಗಳ ಇಳೆಗೆ ತಂಪ ತರುವಂತೆ ॥

ಬಿರುಗಾಳಿ ಬೀಸಿ ವರುಣ ಪೀಡಿಸಿ ಬಿಡದೆ ಕಾಡಿಸಲು
ತಡೆ ತಡೆದು ಪ್ರಕೃತಿ ವಿಕೋಪಗಳ ದಿನವು ।
ನೀರು ನೆರಳು ಅನ್ನ ಅರಿವೆ ಕೊಡೋ ವಸುಧೆಯು
ಮರೆತು ಸಂಪೀಡನೆಗಳ ಜೀವ ರಾಶಿಯ ಪೊರೆವಂತೆ ॥

ತನ್ನೊಡಲ ಬಸಿರಿನಲಿ ಉಸಿರೊಂದು ಚಿಗುರಿರಲು
ಕ್ಷಣ ಕ್ಷಣವು ಉಸಿರಿನ ಭಾರ ಏರಿಸುತ ।
ಪಣಕಿಡುತ ತನ ಜನುಮ ಕರುಳ ಕುಡಿಗಾಗಿ
ಮರೆತು ಪ್ರಸವ ವೇದನೆ ಮಗುವ ಹೆತ್ತು ಪೊರೆವಂತೆ ॥

ನೋವಿರದೆ ನಲಿವಿರದು ಇರುಳಿರದೆ ಹಗಲಿರದು
ದಿನ ದಿನವು ಹಾರುತಿರೆ ಈ ಉಸಿರ ಹಕ್ಕಿ ।
ಬೇವಿನ ಬೆಲ್ಲದ ಮೂಲಮಂತ್ರವೊ ಬದುಕು ಮರೆತು...

– ಕಮಲಾಕ್ಷಿ ಸಿ.ಆರ್.
23.07.2025

ಕರುಣಾಳು ಬಾರಾ ಕೃಪೆಯೆನಗೆ ತೋರಾ

ಸಾಗರದಿ ತೇಲುವ ಮಂಜಿನ ತುಣುಕಿನಂತೆ,
ಮರುಭೂಮಿಯ ಬಿಸಿಲಲಿ ಮೇಣಬತ್ತಿಯಂತೆ
ನನ್ನ ನಾ ಕಳೆದುಕೊಳ್ಳಲು ಹಂಬಲಿಸುತಿರುವೆ
ಹೊಳೆಯಬೇಕಿಲ್ಲ ನಾನು ಮಿಂಚಬೇಕಿಲ್ಲ

ದೇವ, ನಾ ನಿನ್ನ ಪ್ರೇಮಿಸುವೆ, ನೀನು ನಿಶ್ಚಲ
ಸುಂದರ ದೇದೀಪ್ಯಮಾನ ಚೇತನದಾತ್ಮನು
ಆದರೂ ನಾನು ನಾನೇ, ದೀಪದೊಳಗಿನ ಬೆಳಕಾಗಿ
ಹಂಬಲಿಸುವೆ ಮರೆಯಾಗಲು

ಬಿರುಗಾಳಿಯಲಿ ಸಿಲುಕಿದ ತರಗೆಲೆಯಂತೆ
ಪ್ರವಾಹದಿ ಮುಳುಗೇಳುವ ದಿಮ್ಮಿಯಂತೆ
ನಿನ್ನ ಪ್ರೇಮದಾಳದಲಿ ಮುಳುಗಿಸೆನ್ನನು
ಅರಿವನಳಿಸಿ ಕಿವಿಡುಕುರುಡನ ಮಾಡಿಬಿಡು

ಕೀರ್ತನೆಯ ಹಾಡಿರುವೆ ಅಷ್ಟಾಂಗ ಬಿದ್ದಿರುವೆ
ಜಪತಪವ ಮಾಡಿರುವೆ ಧ್ಯಾನವನು ಮಾಡಿದೆ
ಹೋಮಗಳಲಿ ಅರ್ಘ್ಯಪೂಜೆಯನರ್ಪಿಸಿದೆ
ಎಷ್ಟಾದರೂ ನೀ ನನ್ನ ಇಷ್ಟದೇವನಲ್ಲವೇ

ಇಷ್ಟೆಲ್ಲ ಮಾಡಿದರೂ ನಾನು ತಿಳಿಯದಾದೆ
ಎಲ್ಲಿ ನೆಲೆಸಿರುವೆ ನೀನು ಹೇಗಿರುವೆ ನೀನು
ದರ್ಶನವ ತೋರಿಬಿಡೆನಗೆ ಒಮ್ಮೆಯಾದರೂ
ಕರುಣಾಳು ನೀ ಬಾರಾ ಲೀನವಾಗಿಸಲೆನ್ನನು

ಸೃಷ್ಟಿಸಿದೆ ನೀ ನನ್ನ, ನಿನ್ನುದ್ದೇಶವೇನಽರುಹು
ಈ ಸ್ಥಿತಿಗೆ ತಂದಿರುವೆ ಮುಂದೆ ಮಾಡಲೇನು
ಲಯವ ತರದಿರೆನಗೆಂದು ಹೇ ನಿರಾಮಯನೇ
ಆಲಯದಲಿ ನಿನ್ನ, ನೆಲೆಯೆನಗೆ ಕರುಣಿಸು

–.ಮಂಜುನಾಥ.ಎಸ್ (ಹಿಮನಾಥ)
30.07.2025

ಪತ್ರ ಲೇಖನ

-ಹ.ವಾ. ಶ್ರೀಪ್ರಕಾಶ್



ಇತ್ತೀಚೆಗೆ ಸಾಹಿತ್ಯ ವೇದಿಕೆಯೊಂದರಲ್ಲಿ ಪತ್ರಲೇಖನ ಸ್ಪರ್ಧೆ ಏರ್ಪಡಿಸಿದ್ದರು. ಭಾರತ ಮಾತೆಗೆ ಇನ್‌ಲ್ಯಾಂಡ್ ಲೆಟರ್‌ನಲ್ಲಿ ಪತ್ರ ಬರೆಯಿರಿ ಎಂದಿತ್ತು.

ಇದನ್ನು ನೋಡಿ ಬಹಳ ಆಶ್ಚರ್ಯವಾಯ್ತು. ಕೈಯಲ್ಲಿ ಮೊಬೈಲ್ ಬಂದಮೇಲೆ ಪತ್ರ ಬರೆಯುವರು ಯಾರು? ಕಛೇರಿಗಳು ಕೇವಲ ನೋಟೀಸ್ ಕಳಿಸಲು ಇನ್‌ಲ್ಯಾಂಡ್ ಲೆಟರ್ ಉಪಯೋಗಿಸುತ್ತಿರಬಹುದಷ್ಟೇ.

ಈಗಲೂ ಪೋಸ್ಟ್ ಆಫೀಸಿನಲ್ಲಿ ಇನ್‌ಲ್ಯಾಂಡ್ ಲೆಟರ್ ಬೆಲೆ ಕೇವಲ ಎರಡು ರೂಪಾಯಿ. ಅದರ ಸ್ವರೂಪ ಸ್ವಲ್ಪ ಬದಲಾಗಿದೆ ಅಷ್ಟೆ. ನಾನು ತೊಂಬತ್ತರ ದಶಕದಲ್ಲಿ ಉಪಯೋಗಿಸುವಾಗ ಇನ್‌ಲ್ಯಾಂಡ್ ಲೆಟರನ್ನು ಕೊಟ್ಟೆಯಾಕಾರದಲ್ಲಿ ಹಿಡಿದು ಒಳಗಿನ ಬರಹ ಓದಬಹುದಾಗಿತ್ತು. ಈಗ ಹಾಗಿಲ್ಲ, ಎಲ್ಲಾ ಬದಿಗಳಲ್ಲೂ ಮುಚ್ಚಿಕೊಳ್ಳುತ್ತದೆ.

ಆಗೆಲ್ಲ ಕಾಗದ ಬಂದಿದೆ ಅಂದರೆ ಅದೆಷ್ಟು ಖುಷಿ. "ಕಾಗದ ಬಂದಿದೆ ನಮ್ಮ ಪದುಮನಾಭನದು" ಎಂಬ ಹಾಡು ನೆನಪಾಗುತ್ತದೆ. "ಚಿಟ್ಟಿ ಆಯಿ ಹೈ ವಚಿಟ್ಟಿ ಆಯಿ ಹೈ" ಒಂದು ಸುಂದರ ಹಾಡು. "ನಾ ಮೆಚ್ಚಿದ ಹುಡುಗನಿಗೆ ಕಾಗದ ಬರೆದಿರುವೆ. ಈ ಪತ್ರದೆ ಬರೆದಾ ಪದಗಳನು ಚುಂಬಿಸಿ ಕಳಿಸಿರುವೆ" ಎಂಬ ಚಲನಚಿತ್ರ ಗೀತೆಯೂ ಬಹಳ ಜನಪ್ರಿಯವಾಗಿತ್ತು. ನೆಹರು ಮಗಳಿಗೆ ಬರೆದ ಪತ್ರಗಳ ಬಗ್ಗೆ ಎಲ್ಲ ಕೇಳಿಯೇ ಇರುತ್ತೀರಿ.

ಅಟ್ಟದ ಮೇಲಿರುವ ಹಳೆಯ ಪತ್ರಗಳ ಕಟ್ಟಲ್ಲಿ ಈಗಲೂ ಅಪ್ಪ, ಅಣ್ಣ, ಅಕ್ಕ, ಮಾವ ಮುಂತಾದ ಬಂಧುಗಳು ಮತ್ತು ಮಿತ್ರರು ಬರೆದ ಪತ್ರಗಳನ್ನು ನೋಡುವಾಗ ಸಂತೋಷವಾಗುತ್ತದೆ. ಅವರ ಅಕ್ಷರಗಳಲ್ಲಿ ಅವರ ಭಾವನೆಗಳು ಹುದುಗಿರುವಂತೆ ಭಾಸವಾಗುತ್ತದೆ.

ಹಿಂದೆ ನಮ್ಮ ಬಾಲ್ಯದಲ್ಲಿ ನಮ್ಮ ಹಳ್ಳಿಯ ಮನೆಗೆ ಪತ್ರ ತರುತ್ತಿದ್ದವನು ಪಕ್ಕದ ಕಾಫಿ ಎಸ್ಟೇಟ್ ಕೆಲಸಗಾರ ಪಿಸಿರ. ಅವನೇ ಅಂಚೆಯಣ್ಣ. ಅವನು ಪೇಟೆಗೆ ಹೋಗಿ ನಮ್ಮ ಹಳ್ಳಿಯ ಎಲ್ಲ ಮನೆಗಳ ಪತ್ರ, ಪೇಪರ್ ಇತ್ಯಾದಿ ತರುತ್ತಿದ್ದ. ನಮಗೆ ಬಳಪ ಅಥವಾ ಸಣ್ಣಪುಟ್ಟ ಸಾಮಾಗ್ರಿಗಳು ಬೇಕಾದರೆ ಅವನ ಹತ್ತಿರವೇ ತರಿಸುವುದಿತ್ತು.

ಮದುವೆಯಾಗಿ ಹೋದ ಅಕ್ಕನ ಪತ್ರ ಬಂದರೆ ನಮಗೆ ಖುಷಿ. ಪತ್ರ ಬರುವುದು ತಡವಾದರೆ ಅಪ್ಪ ಚಿಂತೆಗೊಳಗಾಗುತ್ತಿದ್ದರು. ಅಕ್ಕ ಸಾಧಾರಣವಾಗಿ ಇನ್‌ಲ್ಯಾಂಡ್ ಲೆಟರಿನಲ್ಲೇ ಬರೆಯುತ್ತಿದ್ದಳು. ಅವಳು ಓದಿದ್ದು ಕೇವಲ ನಾಲ್ಕನೇ ಕ್ಲಾಸು. ಆದರೂ ಬಹಳ ಬುದ್ಧಿವಂತೆ. ಬಹುತೇಕ ಎಲ್ಲ ಖ್ಯಾತ ಲೇಖಕಿಯರ ಕಾದಂಬರಿಗಳನ್ನೂ ಓದಿದ್ದಳು. ಅವಳು ಪತ್ರದ ತುಂಬಾ ಸಣ್ಣ ಅಕ್ಷರಗಳಲ್ಲಿ ಎಡೆಯಿಲ್ಲದೆ ಬರೆಯುವುದಲ್ಲದೆ ಎಡ ಭಾಗದ ಪಟ್ಟಿಯ ಆಚೀಚೆ ಬದಿಯಲ್ಲೂ ಬರೆದಿರುತ್ತಿದ್ದಳು. ಮನೆಯ ಎಲ್ಲರನ್ನೂ ಅಲ್ಲದೆ ಮನೆಯ ದನ, ಕರು, ನಾಯಿಗಳನ್ನೂ, ಅಕ್ಕಪಕ್ಕದ ಮನೆಯವರನ್ನೂ ಪತ್ರದಲ್ಲಿ ವಿಚಾರಿಸುತ್ತಿದ್ದಳು. ಎಷ್ಟೆಂದರೂ ತವರುಮನೆಯೆಂದರೆ ಬಲು ಪ್ರೀತಿಯಲ್ಲವೇ. ಪತ್ರ ಬರೆಯುವಾಗ ಅವಳಿಗೆ ಪೆನ್ನು ಹಿಡಿದು ಯೋಚಿಸಬೇಕಾಗಿರಲಿಲ್ಲ. ಇನ್‌ಲ್ಯಾಂಡ್ ಲೆಟರ್ ಸಾಕಾಗಲಿಲ್ಲವೇನೋ ಎಂಬಂತಿರುತ್ತಿತ್ತು. ಅವಳು ಬಾಲು, ಶಕ್ಕು ಎಲ್ಲ ಹೇಗಿದ್ದಾರೆ ಅಂತ ಬರೆಯುವುದನ್ನು ಓದಿ ನಮ್ಮ ಭಾವ ತಮಾಷೆ ಮಾಡುತ್ತಿದ್ದರಂತೆ. ಚಿಕ್ಕಪ್ಪನ ಮಕ್ಕಳಾದ ಬಾಲಚಂದ್ರ,

ಶಕುಂತಳರನ್ನು ಅವಳು ಚುಟುಕು ಹೆಸರಲ್ಲಿ ವಿಚಾರಿಸುತ್ತಿದ್ದುದು ಹಾಗೆ!. ಹಾಗೆಯೇ ಬಾಬು ಚಿಕ್ಕಪ್ಪನ ಹೆಸರು ಕೃಷ್ಣಮೂರ್ತಿ ಎಂದಿದ್ದರೂ ಹಳ್ಳಿಯ ಎಲ್ಲರಿಗೂ ಅವನು ಬಾಬಣ್ಣ ಆಗಿ ಪರಿಚಿತನಾಗಿದ್ದನೇ ಹೊರತು ಕೃಷ್ಣಮೂರ್ತಿ ಎಂದರೆ ಯಾರಿಗೂ ಗೊತ್ತಾಗುತ್ತಿರಲಿಲ್ಲ.

ಪತ್ರ ಬಂದ ಎರಡು ಮೂರು ದಿನದೊಳಗೆ ಅದಕ್ಕೆ ಉತ್ತರ ಬರೆಯುವುದೂ ಇತ್ತು. ಅಕ್ಕ ಉತ್ತರ ಬರೆಯುವುದು ತಡವಾದರೆ ಉತ್ತರ ಏಕಿಲ್ಲ ಅಂತ ಅಪ್ಪನ ಮತ್ತೊಂದು ಪತ್ರ ಹೋಗಿರುತ್ತಿತ್ತು. ಅಂಚೆಯವನು ಪತ್ರ ತರುವುದನ್ನೇ ಎದುರು ನೋಡುವುದಾಗುತ್ತಿತ್ತು.

ಪತ್ರದ ಅಕ್ಷರ ನೋಡಿಯೇ ಅದು ಯಾರ ಪತ್ರ ಅಂತ ಹೇಳಬಹುದಾದಷ್ಟು ಕೆಲವರ ಅಕ್ಷರದ ಪರಿಚಯವಿರುತ್ತಿತ್ತು. ಈಗ ಪತ್ರ ತರುವ ಖುಷಿಗಳು ಮಾಯವಾಗಿವೆ. ಥಟ್ಟಂತ ಚುಟುಕು ಸಂದೇಶಗಳ ರವಾನೆ. ಇನ್ನು ಬೇಕಾದರೆ ಆಡಿಯೋ ಅಥವಾ ವೀಡಿಯೋ ಕಾಲ್ ಮಾಡಿಯೂ ಮಾತಾಡಬಹುದಾಗಿದೆ.

***

ತೆರೆದೆನೊಂದು ಕಿಟಕಿ

– ರಾಧಿಕಾ ವಿ ಗುಜ್ಜರ್

ಅದೇ ದಿಕ್ಕಿನ ಕಿಟಕಿಯೊಂದ ತೆರೆದೆ
ಇತ್ತಾದರೂ, ಈಗ ತೆರೆದೆ ತೆರೆದುಕೊಳ್ಳಲು
ತಾಜಾತನವನರಸಿ ಇಣುಕಲಲ್ಲ
ತುರ್ತಾಗಿ ತಿಪ್ಪೆಯನ್ನೆಸೆಯಲಂತೂ ಅಲ್ಲವೇ ಅಲ್ಲ

ಸೀಮಾರೇಖೆಯಾಚೆ ರೆಕ್ಕೆ ಬಡಿದು
ಪಶ್ಚಾತ್ತಾಪದ ಬಂಡೆಯಡಿ ಬಂಧಿಯಾಗಿರಲಿಲ್ಲ
ಸೇಡಿನ ಕಾಳ್ಗಿಚ್ಚು ಹೊತ್ತಿಸಿಕೊಂಡು
ಒಡಲ ಉರಿಯನ್ನಾರಿಸಲು ಮುಡಿ ಬಿಚ್ಚಿರಲಿಲ್ಲ
ಡಿಸ್ಮಿಕಾಯಸಿಸ್ ಕಣ್ರೆಪ್ಪೆಗಳ
ಸುಂದರ ನಯನಗಳಿದ್ದೂ ಕಣ್ಕಿರಿಕಿರಿಯಿರಲಿಲ್ಲ
ಕೂಡಿ ಹಾಕಿದ ನನ್ನಿರುವಿಕೆಗೆ
ಬಿಡುಗಡೆಯ ನೀಡಿದೆನೆಂಬ ಭ್ರಮೆಯೂ ಬೇಡ

ಅಂತರಂಗದ ಒತ್ತಾಯದ ನಿಲುಗಡೆಯಲ್ಲಿ
ಒರತೆಯಾಗಿ ಹರಿಯುವಿಕೆಯಿರದೆ ಪಾಚಿ ಕಟ್ಟಿದೆ
ಆಲೋಚನೆಗಳ ಹಸಿರನ್ನುಳಿಸಿಕೊಳ್ಳಲು
ಕೊಂಚ ಬೆಳಕಿನ ಜಾಡು ಹುಡುಕಬೇಕಿದೆ
ಆವರಣದ ಸುಖ ಸುರಿದುಕೊಂಡ ಜೀವಕೆ
ನಿರಾವರಣದ ಕದಲಿಕೆಯು ಕರೆಯುತ್ತಿದೆ
ಬಾಗಿಲ ತೆರೆದು ಸುರಿದುಕೊಳ್ಳಲಾಗದ ಅಂಜಿಕೆಗಳು
ಕಿಟಕಿಯ ಅಗಳಿ ತೆರೆದು ಸತ್ಯದೆಡೆಗೆ ಇಣುಕಬೇಕಿದೆ

ಬಾಗಿಲು ತೆರೆದರೆ ಎಲ್ಲವೂ ಒಳಬರುವುದೇ?
ಬರುವುದರಲ್ಲಿ ರುಂಡ ಖಂಡಗಳೆಂಬ ಭೇದವಿದೆಯೇ?
ಬೆಳಕಲ್ಲಿ ಕಾಣುವಷ್ಟೇ ಲಕ್ಷಣಗಳೊಡನೆ
ಬಂದು ಹೊಂದಿಕೊಳ್ಳುವುದೇ ನನ್ನನ್ನು?
ಹೊಸತು, ಗೀಚಿ ಪರಚಿ ಚುಚ್ಚಿ ಕಚ್ಚದೇನೋ !
ಅಥವಾ, ಆತಂಕಗಳೇ ಇರಿದುಬಿಟ್ಟಾವೇನೋ ನನ್ನನ್ನು!

ತೆರೆದುಕೊಳ್ಳಲು ಎಷ್ಟು ಸುಖಗಳ ಬಿಡಬೇಕೋ?
ಎಲ್ಲಿ ಪಟ್ಟಾಗಿ ಕುಳಿತ ಆಸನ ಕಸಿದುಕೊಂಡಾರೋ?
ಎಂಬ ಹತ್ತಾರು ಮನಸಿನ ಮಂಡಿಗೆಗಳ ಕರಕರ ಕೇಳಿ
ಒಳ ಮನಸು ಹೇಳಿತು; ದಶಕಗಳ ಗಮಟು ಕಳೆಯಲಿ
ಒಳಗೂ ಇಳಿಯದ, ಮೇಲೂ ಹತ್ತದ ಜಡತೆಗೆ
ಇರುವಲ್ಲೇ ಬಡಿಸಿಬಿಡು ವಾಸ್ತವದ ವಿರುಸ್ ಅಮಿಗೋ

***

ಬ್ಯಾಂಕ್ ಹೇಳಿಕೊಟ್ಟ ಪಾಠ

– ಸ್ನೇಹ ಶಶಿಧರ

ನನ್ನ ಹಾಗೆ, ನಮ್ಮ ಗುಂಪಿನ ಅನೇಕ ಸದಸ್ಯರ ಅನ್ನದಾತ – ಭಾರತೀಯ ಸ್ಟೇಟ್ ಬ್ಯಾಂಕಿಗೆ ಎಪ್ಪತ್ತರ ಹರೆಯ. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಇಲ್ಲದಿರುವ ಹಲವರಿಗೆ ಆಶ್ಚರ್ಯ ಆಗದೆ ಇರದು. ಇದೇನಪ್ಪ, ದೇಶದಲ್ಲೇ ಹಳೆಯ ಬ್ಯಾಂಕ್ ಅಂತಾರೆ, ಇನ್ನೂ ಎಪ್ಪತ್ತು ವರ್ಷನಾ? ಹೌದು, ಭಾರತೀಯ ಸ್ಟೇಟ್ ಬ್ಯಾಂಕ್ ಎಂದು ಹೆಸರು ಬಂದು ಕೇವಲ ಎಪ್ಪತ್ತು ವರ್ಷ. ಅದಕ್ಕೆ ಮುನ್ನ ಇಂಪೀರಿಯಲ್ ಬ್ಯಾಂಕ್ ಎಂದು ಕರೆಯುತ್ತಿದ್ದರು. 2 ಜೂನ್ 1806ರಲ್ಲಿ ಶುರುವಾದ ಬ್ಯಾಂಕ್ ಆಫ್ ಕಲ್ಕತ್ತಾ 1955ರಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್ ಆಗಿದ್ದು ಇತಿಹಾಸ.

ಅಷ್ಟು ಹಳೆಯ ಇತಿಹಾಸ ಉಳ್ಳ ಬ್ಯಾಂಕ್ ಇಂದಿಗೂ ಅಗ್ರಸ್ಥಾನದಲ್ಲಿರುವುದು ವಿಶೇಷ. ಅದಕ್ಕೆ ಕಾರಣಗಳಿವೆ. ಪ್ರಮುಖ ಕಾರಣ ಬದಲಾವಣೆಗೆ ಸಿದ್ದವಾಗಿರುವುದು. ಕಾಲ ಕಳೆದಂತೆ, ಜನರ ಅಗತ್ಯಗಳು ಬದಲಾಗುತ್ತವೆ. ಬೇರೆಬೇರೆ ಪ್ರತಿಸ್ಪರ್ಧಿಗಳು ಅಖಾಡಕ್ಕೆ ಇಳಿಯುತ್ತಾರೆ. ಎಲ್ಲರನ್ನು ಧೃಡತೆಯಿಂದ ಎದುರಿಸಿ, ಸಾಮಾಜಿಕ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ಪೂರೈಸಿ, ಜನಮನದ ಬೇಕು ಬೇಡಗಳಿಗೆ ಸೈ ಎನ್ನಿಸಿಕೊಂಡು, ಭಾರತದ ಆರ್ಥಿಕತೆಗೆ ಸಾಕ್ಷಿಯಾಗಿ ಬೆಳೆದು ನಿಂತಿರುವುದು ಹೆಮ್ಮೆಯ ವಿಷಯ.

ಸ್ವಾತಂತ್ರ್ಯ ಪೂರ್ವದಲ್ಲೇ, ಬ್ಯಾಂಕ್ ಆಫ್ ಮದ್ರಾಸ್, ಬ್ಯಾಂಕ್ ಆಫ್ ಬಾಂಬೇ ಹಾಗೂ ಬ್ಯಾಂಕ್ ಆಫ್ ಕಲ್ಕತ್ತಾ ಒಟ್ಟಿಗೆ ಸೇರಿ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯ ಆಗಿ ಹೊರಹೊಮ್ಮಿತು. ಆಗಿನ ಬ್ರಿಟಿಷ್ ಸರಕಾರ ಅದನ್ನು ಅಧಿಕೃತವಾಗ ಸರಕಾರಿ ಬ್ಯಾಂಕ್ ಎಂದು ಘೋಷಿಸಿತ್ತು. ಮೂರು ಬೇರೆ ಬ್ಯಾಂಕುಗಳು ಸೇರಿದ್ದರಿಂದ ಅದರ ಗಾತ್ರಕ್ಕೆ, ಒಗ್ಗಟ್ಟಿಗೆ ಸಿಕ್ಕ ಪ್ರತಿಫಲ ಎಂದರೆ ತಪ್ಪಾಗಲಾರದು. ಭಾರತದ ಸ್ವಾತಂತ್ರ್ಯದ ನಂತರವೂ ಸರಕಾರದ ಪ್ರತಿ ಹೆಜ್ಜೆಗೂ ಬೆನ್ನೆಲುಬಾಗಿ ನಿಂತಿದೆ ನಮ್ಮ ಬ್ಯಾಂಕ್.

ನಮ್ಮ ಬ್ಯಾಂಕ್ ಬಗ್ಗೆ ಸಾಧಾರಣವಾಗಿ ಎಲ್ಲರಿಗೂ ತಿಳಿದಿರುತ್ತದೆ. ದೊಡ್ಡ ಬ್ಯಾಂಕ್, ಸರ್ಕಾರಿ ಬ್ಯಾಂಕ್.. ಇತ್ಯಾದಿ ಇತ್ಯಾದಿ. ಹಾ ಆದರೆ, ನಾವು ಸರ್ಕಾರಿ ನೌಕರರಲ್ಲ! ನಮ್ಮ ಬಾಂಕಿನ ಬಗ್ಗೆ, ಅದರ ಗಾತ್ರದ ಬಗ್ಗೆ, ಅದರ ವೈಭವದ ಬಗ್ಗೆ ಎಲ್ಲರಿಗೂ ತಿಳಿದೇ ಇದೆ. ಆದರೆ, ನನಗೆ ವೈಯಕ್ತಿಕವಾಗಿ ಸ್ಫೂರ್ತಿ ನೀಡುವ ಗುಣವೊಂದಿದೆ. ಅದನ್ನು ವಿವರಿಸುತ್ತೇನೆ.

ಇತ್ತೀಚಿಗೆ ನಮ್ಮ ಬಾಂಕಿನ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಒಳ್ಳೆಯದಿಕ್ಕಿಂತ ಹೆಚ್ಚಿಗೆ ಬೇಡದಿರುವ ವಿಚಾರವೇ ಪ್ರಸ್ತಾಪವಾಗುತ್ತಿದೆ. ಅದರಿಂದ ಬ್ಯಾಂಕಿನ ಭಾಗವಾದ ನಮ್ಮೆಲ್ಲರಿಗೂ ಕಸಿವಿಸಿಯೇ. ಭಾಗಶಃ ಎಟುಕಲಾರದ ದ್ರಾಕ್ಷಿ ಎಂದು ಜನ ಮೂಗು ಮುರಿಯುವುದು ಎಂದು ನನ್ನ ಭಾವನೆ. ಇರಲಿ, ಅವರವರ ಭಾವಕ್ಕೆ!

ನಾನಿಂದು ಎತ್ತಿ ಹಿಡಿಯುತ್ತಿರುವ ಒಂದು ವಿಚಾರವೆಂದರೆ, ನಮ್ಮ ಕೆಲಸ ನಾವು ಮಾಡಬೇಕು. ಜನರ ಮಾತಿಗೆ ತಲೆ ಕೆಡಿಸಿಕೊಳ್ಳಬಾರದು. ಇತ್ತೀಚಿಗೆ ಆದ ಒಂದು ಪ್ರಸಂಗದಲ್ಲಿ, ಒಂದು ಮಾಧ್ಯಮದಲ್ಲಿ ಬ್ಯಾಂಕ್ ಬಗ್ಗೆ ಇಲ್ಲಸಲ್ಲದ ಆರೋಪ ಹೊರಿಸಿತು. ನಮಗೆ ತಿಳಿದಿರುವವರು, ತಿಳಿಯದವರೂ ಎಲ್ಲರೂ ಕರೆ ಮಾಡಿ ಆತಂಕ ವ್ಯಕ್ತಪಡಿಸಿದರು. ನಮಗೆ ಆ ಆರೋಪ ಸುಳ್ಳು ಎಂದು ತಿಳಿದರೂ, ಎಲ್ಲರಿಗೂ ವಿವರಿಸಿ ಹೇಳಿ ಸುಸ್ತಾಯಿತು.

ಆದರೆ ಬ್ಯಾಂಕ್ ಒಂದು ಪತ್ರಿಕಾಗೋಷ್ಠಿ ಕರೆದು ವಿವರಿಸಿತು. ನಂತರ ತನ್ನ ಪಾಡಿಗೆ ತನ್ನ ಕೆಲಸ ಮಾಡಿಕೊಂಡು ಹೋಯಿತು. ಹೆಚ್ಚು ಸಮಯ ವ್ಯರ್ಥ ಮಾಡಲಿಲ್ಲ. ತನ್ನ ಕೆಲಸವನ್ನು ಅಚ್ಚುಕಟ್ಟಾಗಿ ನೆರವೇರಿಸಿ, ಪುನಃ ಜನರ ಒಲವು ಗೆದ್ದಿತು. ಇದನ್ನೇ ತಾನೇ ಶ್ರೀಕೃಷ್ಣನು ಭಾಗವತದಲ್ಲಿ ವಿವರಿಸಿರುವುದು. ಮಾಡುವುದು ನಿನ್ನ ಧರ್ಮ. ಫಲಾಫಲಗಳ ಚಿಂತೆ ಬಿಟ್ಟು ಕೆಲಸ ಮಾಡು ಎಂದು.

ನಾವು ಇದರಿಂದ ಕಲಿಯಬೇಕಾದ ವಿಷಯ ಇದೇ. ಜನರ ಬಾಯಿ ಮುಚ್ಚಿಸುವ ಕೆಲಸ ಮಾಡಬಾರದು. ಮಾಡಿದರೂ, ಎಷ್ಟು ಜನರ ಬಾಯಿ ಮುಚ್ಚಿಸಲು ಸಾಧ್ಯ? ಮಾತನಾಡುವವರು ಇದ್ದೇ ಇರುತ್ತಾರೆ. ನಮ್ಮ ಕೆಲಸದಿಂದ ಉತ್ತರಿಸಬೇಕೆ ಹೊರತು, ಬಾಯಿ ಮಾತಿಗೆ ತಲೆ ಕೆಡಿಸಿಕೊಳ್ಳಬಾರದು. ಈ ಆಲೋಚನೆಯಿಂದ ಇನ್ನೊಮ್ಮೆ ನಮ್ಮ ಬ್ಯಾಂಕ್ ನನ್ನ ಕಣ್ಣಲ್ಲಿ ಹೀರೋ ಆಗಿದೆ.

***

ಹೂಮಾಲೆ

– ಕಮಲಾಕ್ಷಿ ಸಿ.ಆರ್.

ಪ್ರತಿ ಸುಮವು
ಪರಿ ಪರಿಯಾಗಿ ಕೋರುತಿವೆ
ದೇವನ ಚರಣ ಸೇರಲು
ಹೂಮಾಲೆಯಲಿ ಸೇರಿಸೆನ್ನ

ಬಿಡಿಯಾಗಿ ಇರಲಾರೆ
ಬಂಧುತ್ವ ಬೇಕೆನೆಕೆ
ಅನುಬಂಧ ಬೆಸೆಯುವೆ
ಹೂಮಾಲೆಯಲಿ ಸೇರಿಸೆನ್ನ

ಎಲ್ಲಿಯ ವಧು ವರರೋ
ಹೂಮಾಲೆ ಬದಲಿಸಿದೊಡೆ
ದಾಂಪತ್ಯ ಪಥದಿ ಬೆಸೆವೆ
ಹೂಮಾಲೆಯಲಿ ಸೇರಿಸೆನ್ನ

ಬಗೆ ಬಗೆಯ ಸುಮಗಳ
ನೂಲಿನಲಿ ಹೊಸೆದು
ದೇವನ ಸಾನಿಧ್ಯದಿ ಮುಕ್ತಿ ಪಡೆವೆ
ಹೂಮಾಲೆಯಲಿ ಸೇರಿಸೆನ್ನ

ಸುಗಂಧ ಸೂಸುವ
ಮಲ್ಲಿಗೆಯಾಗಿ ಮುಡಿಯೇರಿ
ವನಿತೆಯ ಸಿಂಗರಿಸುವೆ
ಹೂಮಾಲೆಯಾಲಿ ಸೇರಿಸೆನ್ನ

ಸಾಧನೆಯ ಶಿಖರವೇರಿ
ವಿಜಯೋತ್ಸವದಿ ಸಂಭ್ರಮಿಸಿ
ವಿಜಯಮಾಲೆಯಾಗಿ ನಲಿವೆ
ಹೂಮಾಲೆಯಲಿ ಸೇರಿಸೆನ್ನ

ಬದುಕಿನ ಬವಣೆ ತೀರಿ
ಮುಕ್ತಿ ಮಾರ್ಗವ ಸೇರಿಸುವ
ಅಂತಿಮ ಯಾತ್ರೆಯ
ಹೂಮಾಲೆಯಲಿ ಸೇರಿಸೆನ್ನ

ಮಲ್ಲಿಗೆ ಸಂಪಿಗೆಯೋ
ಗುಲಾಬಿ ಸೇವಂತಿಗೆಯೋ
ಬಹು ಜನರೊಡನೆ ಇರುವೆ
ಹೂಮಾಲೆಯಲಿ ಸೇರಿಸೆನ್ನ

ಕಾಡಿನಲಿ ನರಳಿಸದೆ
ಬೇಲಿಯಲಿ ಸೊರಗಿಸದೆ
ಕೃತಕೃತ್ಯತೆಯ ಪಡೆವೆ
ಹೂಮಾಲೆಯಲಿ ಸೇರಿಸೆನ್ನ

***

ಮಂಥರ ಮಂಥನ

– ಸಿಂಧು ಹರಿಥಸ್

ಯಕ್ಷಲೋಕದಲ್ಲಿ ಅದೊಂದು ಸಾಮಾನ್ಯ ದಿನ. ಎಲ್ಲ ಯಕ್ಷ ಕಿನ್ನರರೂ ತಮ್ಮ ಮಾಯಾವಿ ವಿದ್ಯೆಗಳ ಅಭ್ಯಾಸ ಮತ್ತು ಅಧ್ಯಯನದಲ್ಲಿ ತೊಡಗಿಕೊಂಡಿದ್ದರು. ಯಕ್ಷೇಂದ್ರನಿಗೆ ಬ್ರಹ್ಮಲೋಕದಿಂದ ಪತ್ರವೊಂದು ತಲುಪಿತು. ಎಲ್ಲರ ಸಭೆ ಸೇರಿಸಿದ ಯಕ್ಷೇಂದ್ರನು, ಎಲ್ಲರ ಸಮ್ಮುಖದಲ್ಲಿ ಆ ಪತ್ರದ ಸಂದೇಶವನ್ನು ವಿವರಿಸಿದನು.

“ಭೂಲೋಕದಲ್ಲಿ ಅಧರ್ಮದ ಅಟ್ಟಹಾಸ ಹೆಚ್ಚಾಗುತ್ತಿದೆ. ಮತ್ತೆ ಧರ್ಮರಕ್ಷಣೆಗಾಗಿ ಶ್ರೀಮನ್ನಾರಾಯಣನ ಅವತಾರವಾಗಲಿದೆ. ಆಗ ನಮ್ಮಲ್ಲಿ ಬಹುತೇಕರು ಅವರ ಸಹಾಯಕ್ಕಾಗಿ ವಾನರ ರೂಪದಲ್ಲಿ ಜನಿಸಬೇಕೆಂಬ ಅಪ್ಪಣೆಯಾಗಿದೆ. ಅದರ ಪಟ್ಟಿ ಹೀಗಿದೆ..." ಎಂದು ಹೇಳುತ್ತ, ಯಾವ ಯಕ್ಷ ಯಾವ ವಾನರನಾಗಬೇಕೆಂದು ತಿಳಿಸಿದನು.

ತನ್ನ ಹೆಸರು ಆ ಪಟ್ಟಿಯಲ್ಲಿ ಇಲ್ಲದ ಕಾರಣ, ದುಂದುಭಿ ಎಂಬ ಯಕ್ಷಿಣಿಯೊಬ್ಬಳು ನಿರಾಶಳಾದಳು. ಸ್ವಲ್ಪ ಯೋಚಿಸಿ, ಸ್ವತಃ ತಾನೆ ಬ್ರಹ್ಮದೇವನನ್ನು ಅವಕಾಶ ನೀಡುವಂತೆ ಕೋರಲು ಹೊರಟಳು. ಬ್ರಹ್ಮದೇವ ಮತ್ತು ಸರಸ್ವತಿ ದೇವಿಯರನ್ನು ಕಂಡು ನಮಸ್ಕರಿಸಿ, “ಬ್ರಹ್ಮದೇವ, ಶ್ರೀಮನ್ನಾರಾಯಣನ ಮುಂದಿನ ಅವತಾರದ ಬಗ್ಗೆ ತಿಳಿಯಿತು. ಧರ್ಮ ಸಂಸ್ಥಾಪನೆಗೆಂದು ನಡೆಯುವ ಅವರ ಕಾರ್ಯದಲ್ಲಿ ನನಗೂ ಪಾಲ್ಗೊಳ್ಳುವ ಅವಕಾಶವನ್ನು ನೀಡುವಿರಾ?" ಎಂದು ಮನ್ನಿಸಿದಳು.

ಅವಳ ಉತ್ಸಾಹವನ್ನು ಮೆಚ್ಚಿದ ಬ್ರಹ್ಮದೇವನು, “ಮಗು, ನಿನ್ನ ಮನವಿಯನ್ನು ನಾನು ಸ್ವೀಕರಿಸುತ್ತೇನೆ. ಶ್ರೀಮನ್ನಾರಾಯಣನು ರಾಮನಾಗಿ ಅವತರಿಸಿದಾಗ ಅವರ ಗುರಿ ಸಾಧನೆಗೆ ಬೇಕಾದ ಮಹತ್ತರವಾದ ತಿರುವನ್ನು ನೀನು ಕಲ್ಪಿಸು." ಎಂದರು.

ದುಂದುಭಿಗೆ ಈ ಆದೇಶದಿಂದ ಬಹಳ ಸಂತೋಷವಾಯಿತು. ಹಾಗೆಯೇ ಗೊಂದಲವೂ ಉಂಟಾಯಿತು. ಅದಕ್ಕೆ ಅವಳು, "ಬ್ರಹ್ಮದೇವ, ನಿಮ್ಮ ಆಣತಿಯನ್ನು ನಾನು ಶಿರಸಾ ಪಾಲಿಸುತ್ತೇನೆ. ಆದರೆ, ನನಗೊಂದು ಸಂದೇಹ. ಈ ಕಾರ್ಯ ಕೈಗೊಳ್ಳುವ ಸಮಯದ ಬಗ್ಗೆ ನನಗೆ ಹೇಗೆ ತಿಳಿಯುತ್ತದೆ?" ಎಂದು ಕೇಳಿದಳು. ಅವಳ ಮಾತಿಗೆ ಮುಗುಳ್ನಗುತ್ತ, ಸರಸ್ವತಿ ದೇವಿಯು ಇಂತೆಂದಳು, "ಅದರ ಬಗ್ಗೆ ಚಿಂತಿಸಬೇಡ, ಮಗು. ಸಮಯ ಬಂದಾಗ ನಾನೇ ನಿನ್ನ ಮೂಲಕ ಆ ಕಾರ್ಯಕ್ಕೆ ನಾಂದಿ ಹಾಡುತ್ತೇನೆ." ದೇವತೆಗಳ ಮಾತಿನಿಂದ ತೃಪ್ತಳಾದ ದುಂದುಭಿ ಅವರಿಗೆ ವಂದಿಸಿ ತನ್ನ ಲೋಕಕ್ಕೆ ಹಿಂದಿರುಗಿದಳು.

ಋತುಚಕ್ರ ಉರುಳಿತು. ರಾಮಾವತಾರದ ಬಗ್ಗೆ ಇನ್ನೂ ಸುಳಿವೇ ಇರಲಿಲ್ಲ. ಹೀಗಿರುವಾಗ ಒಮ್ಮೆ ದುಂದುಭಿಯು ವಿಹಾರಕ್ಕೆಂದು ಭೂಲೋಕದ ಅರಣ್ಯವೊಂದನ್ನು ಪ್ರವೇಶಿಸಿದಳು. ಅಲ್ಲಿ ಒಂದು ಸುಂದರವಾದ ಸರೋವರವಿತ್ತು. ಅದರ ಮಧ್ಯದಲ್ಲಿ ತಿಳಿನೀರಿನ ಕಾರಂಜಿಯಿತ್ತು. ಹಂಸ, ಕಾರಂಡ ಮೊದಲಾದ ಪಕ್ಷಿಗಳು ಅಲ್ಲಿ ಹಾಯಾಗಿ ಈಜಾಡುತ್ತಿದ್ದವು. ಸರೋವರದ ಸುತ್ತ ಘನವಾದ ಹಣ್ಣಿನ ಮರಗಳು, ಸುಗಂಧ ಪುಷ್ಪಗಳು ಅರಳಿದ್ದ ಗಿಡ, ಬಳ್ಳಿಗಳಿದ್ದವು. ಇಂತಹ ವನಸಿರಿಯಲ್ಲಿ ಪ್ರಾಣಿಗಳು ದಷ್ಟಪುಷ್ಟವಾಗಿ ಬೆಳೆದಿದ್ದವು. ಈ ಪ್ರಕೃತಿ ಸೌಂದರ್ಯಕ್ಕೆ ಮನಸೋತ ದುಂದುಭಿಯು ತನ್ನ ಲೋಕವನ್ನು ಮರೆತು ಅಲ್ಲಿಯೇ ವಾಸಿಸತೊಡಗಿದಳು.

ಒಂದು ದಿನ ಜಿಂಕೆ ಮರಿಯೊಂದು ಅವಳ ಕುಟೀರದ ಬಳಿ ತಂಗಿತು. ಅದನ್ನು ಕಂಡ ದುಂದುಭಿಯ ಹೃದಯದಲ್ಲಿ ಮಾತೃವಾತ್ಸಲ್ಯ ಉಕ್ಕಿತು. ಆ ಮರಿಯನ್ನು ತನ್ನ ಬಳಿ ಕರೆದು ಮುದ್ದಾಡಿದಳು. ಅದೂ ಕೂಡ ಅವಳ ಮಡಿಲಲ್ಲಿ ನೆಮ್ಮದಿ ಹೊಂದಿತು. ಅವರಿಬ್ಬರ ನಡುವೆ ತಾಯಿ–ಮಗುವಿನ ಪ್ರೇಮ ಜಾಗೃತವಾಯಿತು. ದುಂದುಭಿಯು ಅದನ್ನು ತನ್ನ ಸ್ವಂತ ಮಗಳಂತೆ ಬೆಳೆಸಿದಳು. ಕಾಲ ಕಳೆದು ಜಿಂಕೆ ಮರಿಯು ದೊಡ್ಡದಾಯಿತು. ತನಗಾಗಿ ಸಂಗಾತಿಯನ್ನೂ ಆರಿಸಿಕೊಂಡಿತು.

ಜೋಡಿ ಜಿಂಕೆಗಳು ಮಿಲನ ಸುಖದಲ್ಲಿ ತಲ್ಲೀನರಾಗಿದ್ದಾಗ, ಹಠಾತ್ತನೆ ಎಲ್ಲಿಂದಲೋ ಬಂದ ಬಾಣವು ಗಂಡು ಜಿಂಕೆಯ ಪ್ರಾಣವನ್ನು ತೆಗೆಯಿತು. ಹೆಣ್ಣು ಜಿಂಕೆಯು ಕಣ್ಣೀರಿಡುತ್ತ ದುಂದುಭಿಯ ಹತ್ತಿರ ಬಂದು ಅವಳನ್ನು ತನ್ನ ಪ್ರಿಯಕರನಿದ್ದ ಕಡೆಗೆ

ಕರೆದುಕೊಂಡು ಹೋಯಿತು. ಅಲ್ಲಿ ಒಬ್ಬ ಯುವಕನು ಜಿಂಕೆಯ ನಿರ್ಜೀವ ದೇಹವನ್ನು ತನ್ನ ಹೆಗಲಿಗೇರಿಸಿ ಹೊರಡುವ ಸಿದ್ಧತೆಯಲ್ಲಿದ್ದನು. ದುಂದುಭಿಯು ಅವನನ್ನು ಕರೆದು, "ಅಯ್ಯಾ, ಮಿಲನಕ್ರಿಯೆಯಲ್ಲಿ ನಿರತರಾಗಿರುವ ಮೃಗವನ್ನು ಭೇಟೆಯಾಡುವುದು ಮಹಾಪಾಪ. ಇರಲಿ. ನಿನಗೆ ತಿಳಿದಿರಲಿಲ್ಲವೇನೋ! ಈಗ ಈ ದೇಹವನ್ನು ಇಲ್ಲಿಯೇ ಬಿಟ್ಟುಬಿಡು. ನಾನು ಒಬ್ಬ ಯಕ್ಷಿಣಿ. ನನ್ನ ವಿದ್ಯೆಯ ಪ್ರಯೋಗದಿಂದ ಅದರ ಪ್ರಾಣವನ್ನು ಹಿಂಪಡೆಯುತ್ತೇನೆ. ನೋಡಲ್ಲಿ ಇನಿಯನ ಅಗಲಿಕೆಯಿಂದ ನನ್ನ ಮಗಳ ಸಮಾನವಾಗಿರುವ ಜಿಂಕೆಯು ನರಳುತ್ತಿದೆ." ಎಂದು ಬೇಡಿಕೊಂಡಳು.

"ನಾನು ಈ ಪ್ರಾಂತ್ಯದ ರಾಜ, ಅಶ್ವಪತಿ ಮಹಾರಾಜ! ಇಲ್ಲಿನ ಪ್ರಾಣಿ- ಪಕ್ಷಿಗಳ ಮೇಲೆ ನನ್ನ ಅಧಿಕಾರವಿದೆ. ಇಷ್ಟು ಬಲಿಷ್ಟವಾದ ಕೊಂಬುಗಳಿರುವ ಈ ಜಿಂಕೆಯನ್ನು ನಾನು ಬಿಡುವುದಿಲ್ಲ. ಇದರ ಶಿರಸ್ಸನ್ನು ನನ್ನ ಅರಮನೆಯ ಗೋಡೆಯ ಮೇಲೆ ಪ್ರದರ್ಶಿಸುತ್ತೇನೆ." ಎಂದು ದುರಹಂಕಾರ ಮೆರೆದನು.

ಬಲವಂತದಿಂದ ಜಿಂಕೆಯ ದೇಹವನ್ನು ಹಿಂಪಡೆಯಲು ದುಂದುಭಿಯು ಮುಂದಾದಳು. ರಾಜನಿಗೆ ಅದು ಹಿಡಿಸಲಿಲ್ಲ. ತನ್ನ ದಾರಿಗೆ ಅಡ್ಡವಾಗಿದ್ದ ದುಂದುಭಿಯ ಹೊಟ್ಟೆಗೆ ಕಟಾರದಿಂದ ಇರಿದನು.

"ನನ್ನ ಮಗಳ ಸಮಾನವಾಗಿರುವ ಈ ಜಿಂಕೆಯನ್ನು ನೀನು ವಿಧವೆ ಮಾಡಿದೆ. ನಿನ್ನ ಮಗಳು ವಿಧವೆಯಾಗಲು ನಾನು ದಾರಿ ಮಾಡುತ್ತೇನೆ" ಎಂದು ಶಪಿಸಿ ದುಂದುಭಿ ಅಸುನೀಗಿದಳು.

ಮುಂದೊಂದು ದಿನ, ಕೇಕಯ ರಾಜ್ಯದಲ್ಲಿ ಒಬ್ಬ ಸುಂದರ ರಾಜಕುಮಾರಿಯ ಜನನವಾಯಿತು. ಅವಳೇ ಕೈಕೇಯಿ. ಕೈಕೇಯಿ ರೂಪವಂತೆ, ಗುಣವಂತೆ, ಬುದ್ಧಿವಂತೆ ಹಾಗು ಬಲಾಢ್ಯಳೂ ಆಗಿದ್ದಳು. ಚಿಕ್ಕ ವಯಸ್ಸಿನಿಂದಲೇ ಅವಳ ತಂದೆ, ಅಶ್ವಪತಿ ಮಹಾರಾಜನು ಅವಳಿಗೆ ಯುದ್ಧನೀತಿ ಹಾಗು ರಾಜನೀತಿಗಳನ್ನು ಕಲಿಸಲಾರಂಭಿಸಿದ್ದನು.

ಒಮ್ಮೆ ಕೈಕೇಯಿ ಪಲ್ಲಕ್ಕಿಯಲ್ಲಿ ಕುಳಿತು ಪರ್ಯಟನೆಗೆ ಹೊರಟಿದ್ದಳು. ಅನತಿ ದೂರದಲ್ಲಿ ಕೆಲವು ಹುಡುಗರು ಯಾರನ್ನೋ ನೋಡಿ ಗೇಲಿ ಮಾಡುತ್ತಿರುವುದನ್ನು ಕಂಡಳು. ಒಬ್ಬನಂತೂ ಅತ್ತಕಡೆ ಕಲ್ಲೆಸೆದು ನಗುತ್ತಿದ್ದನು. ಮೂಲೆಯಲ್ಲಿ ರೋಧಿಸುತ್ತಿದ್ದ ಒಂದು ಹೆಣ್ಣಿನ ಧ್ವನಿ ಕೇಳಿಸಿತು. ರಾಜಭಟರನ್ನು ನೋಡಿದ ಬಾಲಕರು ಅಲ್ಲಿಂದ ಕಾಲ್ಕಿತ್ತರು. ಭಟರಿಗೆ ತನ್ನ ಪಲ್ಲಕ್ಕಿಯನ್ನು ಇಳಿಸಲು ಸೂಚಿಸಿ, ಕೈಕೇಯಿ ಆ ಹೆಂಗಸಿನ ಹತ್ತಿರ ಬಂದಳು. ಅಳುತ್ತಿದ್ದ ಅವಳ ಸ್ಥಿತಿ ಹೇಳತೀರದು. ವಿಕಾರವಾದ ಮುಖ, ಗೂನು ಬೆನ್ನು, ಜಟೆ ಕಟ್ಟಿದ ಕೂದಲು ಮತ್ತು ಎಷ್ಟೋ ದಿನಗಳಿಂದ ಆಹಾರವಿಲ್ಲದೆ ಅವಳ ದೇಹ ಸೊರಗಿತ್ತು. ಕೈಕೇಯಿ ಅವಳ ಕೈ ಹಿಡಿದು ಸ್ನೇಹದ ನಗೆ ಬೀರಿದಳು. ಆ ಹೆಂಗಸು ಚಕಿತಳಾದಳು. ಕುರೂಪಿಯಾದ ತನ್ನನ್ನು ನೋಡಿ ಎಲ್ಲರೂ ಹೆದರುವವರೋ ಇಲ್ಲ ಅಣುಕಿಸುವರೇ ಹೊರತು ಯಾರೂ ಅವಳೊಂದಿಗೆ ಸ್ನೇಹಭಾವ ತೋರಿರಲಿಲ್ಲ. ಕೈಕೇಯಿ ಆಕೆಯನ್ನು ಮಾತನಾಡಿಸಿ ವಿಚಾರಿಸಿದಾಗ ಆಕೆ ಮಂಥರೆ ಎಂಬ ದಿಕ್ಕಿಲ್ಲದ ನತದೃಷ್ಟೆ ಎಂದು ಗೊತ್ತಾಯಿತು.

ಕೈಕೇಯಿ ಅವಳನ್ನು ತನ್ನ ಅರಮನೆಗೆ ಕರೆತಂದು, ಸ್ನಾನ ಶೃಂಗಾರಗಳನ್ನು ಮಾಡಿಸಿ ಊಟವನ್ನೂ ನೀಡಿದಳು. ನಂತರ ಮಂಥರೆ ಕೈಕೇಯಿಯ ಸೇವಕಿಯಾದಳು. ಮಂಥರೆಗೆ ತನ್ನ ಒಡತಿಯ ಬಗ್ಗೆ ತೀರದ ಅಭಿಮಾನವಿತ್ತು. ಕೈಕೇಯಿಗೂ ಮಂಥರೆಯಲ್ಲಿ ಆತ್ಮೀಯ ಭಾವ ಮೂಡಿತ್ತು. ಇದೇ ಕಾರಣ, ಮುಂದೆ ದಶರಥನೊಂದಿಗೆ ವಿವಾಹವಾದ ಬಳಿಕ ಕೈಕೇಯಿ ಮಂಥರೆಯನ್ನು ತನ್ನ ಪ್ರಧಾನ ದಾಸಿಯಾಗಿ ಅಯೋಧ್ಯೆಗೆ ಕರೆದುಕೊಂಡು ಹೋದಳು.

ಅಯೋಧ್ಯೆಯಲ್ಲಿ ದಶರಥನಿಗೆ ಮೊದಲೇ ಇಬ್ಬರು ರಾಣಿಯರಿದ್ದರು, ಪಟ್ಟದ ರಾಣಿ ಕೌಸಲ್ಯ ಹಾಗು ಇನ್ನೊಬ್ಬಳು ಸುಮಿತ್ರ. ಕೈಕೇಯಿ ಅವರಿಬ್ಬರೊಂದಿಗೆ ಸೌಹಾರ್ದತೆಯಿಂದಿದ್ದಳು. ಆದರೆ ಮಂಥರೆಗೆ ಈ ವಿಚಾರ ಬೇಸರವನ್ನುಂಟು ಮಾಡುತ್ತಿತ್ತು. ಮಂಥರೆಯ ಪ್ರಕಾರ, ಅವರಿಬ್ಬರಿಗಿಂತ ರೂಪದಲ್ಲಿ, ಸಾಮರ್ಥ್ಯದಲ್ಲಿ ಹಾಗು ಅಂತಸ್ತಿನಲ್ಲಿಯೂ ಉತ್ತಮಳಾದ ತನ್ನ ಒಡತಿಗೆ ಪಟ್ಟವಿಲ್ಲವೆಂಬ ವಿಷಯ ಅವಳಿಗೆ ಕಹಿಯಾಗಿತ್ತು.

ಮುಂದೆ ಪುತ್ರಕಾಮೇಷ್ಟಿ ಯಾಗದ ಫಲವಾಗಿ ಕೌಸಲ್ಯೆಗೆ ರಾಮ, ಸುಮಿತ್ರಳಿಗೆ ಲಕ್ಷ್ಮಣ ಮತ್ತು ಶತೃಘ್ನ ಹಾಗು ಕೈಕೇಯಿಗೆ ಭರತನೆಂಬ ಮಗ ಜನಿಸಿದರು. ನಾಲ್ಕು ಮಕ್ಕಳೂ ಸುಶೀಲರಾಗಿದ್ದರು. ಆದರೆ ಅಯೋಧ್ಯೆಯವರೆಲ್ಲರಿಗೂ ರಾಮನ ಮೇಲೆ ವಿಶೇಷವಾದ ಪ್ರೀತಿಯಿತ್ತು. ರಾಜಕುಮಾರರು ಯುವಾವಸ್ಥೆ ತಲುಪಿದಾಗ, ಮಿಥಿಲಾ ದೇಶದ ರಾಜನಾದ ಜನಕ ಮಹಾರಜ ಮತ್ತು ಅವನ ತಮ್ಮನಾದ ಕುಷಧ್ವಜನ ಮಕ್ಕಳಾದ ಸೀತೆ, ಉರ್ಮಿಳೆ, ಶೃತಕೀರ್ತಿ ಮತ್ತು ಮಾಂಡವಿಯರ ಜೊತೆ ವಿವಾಹವಾಯಿತು.

ತದನಂತರ ನೆರವೇರಬೇಕಿದ್ದ ಶುಭಕಾರ್ಯವೇ ರಾಮನ ಪಟ್ಟಾಭಿಷೇಕ. ಎಲ್ಲರೂ ಸಂಭ್ರಮದಿಂದ ಸಿದ್ಧತೆಗಳನ್ನು ನಡೆಸುತ್ತಿದ್ದರು. ಕೈಕೇಯಿ ಕೂಡ ಉತ್ಸಾಹದಿಂದ ತಯ್ಯಾರಾಗುತ್ತಿದ್ದಳು. ಮಂಥರೆಯ ಸಂಯಮ ಮೀರಿತು. ಕೈಕೇಯಿಯನ್ನು ಮೂದಲಿಸುತ್ತ, "ಛೇ! ನಿನ್ನ ದುರ್ಭಾಗ್ಯಕ್ಕೆ ದಾರಿಯಾಗಿರುವ ಈ ಪಟ್ಟಾಭಿಷೇಕಕ್ಕಾಗಿ ಇಷ್ಟು ಸಡಗರವೇ? ನೆನಪಿಡು, ರಾಮನು ರಾಜನಾದರೆ ಕೌಸಲ್ಯೆಯು ರಾಜಮಾತೆಯಾಗುವಳು. ನೀನು ಅವಳ ದಾಸಿಯಾಗಬೇಕಾಗುತ್ತದೆ. ಅಷ್ಟೇ ಅಲ್ಲದೆ, ಭರತನು ರಾಮನ ಆಜ್ಞೆ ಪಾಲಿಸುವ ಸೇವಕನಾಗಿ ಉಳಿಯುತ್ತಾನೆ. ಆಗ ನಿನಗೆ ಸಂತೋಷವೇ?" ಎಂದು ಕಿಡಿ ಕಾರಿದಳು.

ಮಂಥರೆಯ ಮಾತನ್ನು ಮೊದಲು ನಿರ್ಲಕ್ಷಿಸಿದ ಕೈಕೇಯಿ, ಅದೇ ಮಾತನ್ನು ಮಂಥರೆ ಪದೇ ಪದೇ ಪುನರಾವರ್ತನೆ ಮಾಡಿದಾಗ ಪ್ರಭಾವಿತಳಾದಳು. ಭರತ ಸೇವಕನಾಗುವ ಕಲ್ಪನೆ ಅವಳಿಗೆ ರೋಷ ತಂದಿತು. ಅದನ್ನು ತಪ್ಪಿಸಲು ವಿಧಾನ ತಿಳಿಯದೆ, ಮಂಥರೆಗೆ ಉಪಾಯ ನೀಡಲು ಯಾಚಿಸಿದಳು. ಮಂಥರೆ, "ದಶರಥನು ಹಿಂದೆ ಯುದ್ಧವೊಂದರ ಸಂದರ್ಭದಲ್ಲಿ ನಿನಗೆ ನೀಡಿದ್ದ ವಚನಗಳನ್ನು ಬಳಸಿ, ರಾಮನನ್ನು ಕಾಡಿಗೆ ಅಟ್ಟಿ, ಭರತನಿಗೆ ಪಟ್ಟಕಟ್ಟಲು ಪಟ್ಟುಹಿಡಿ" ಎಂದು ಆದೇಶಿಸಿದಳು.



ಮಂಥರೆಯ ಉಪಾಯದಂತೆ ಕೈಕೇಯಿ ತನ್ನ ಎರಡು ಕೋರಿಕೆಗಳನ್ನು ಪತಿಯ ಮುಂದಿಟ್ಟಳು. ಅವಳ ಮಾತಿಗೆ ಎದುರಾಡಲಾರದೆ ದಶರಥ ಭಾರವಾದ ಮನಸ್ಸಿನಿಂದ ಒಪ್ಪಿದನು. ರಾಮನಿಗೆ ವನವಾಸವಾಯಿತು. ರಾಮನು ಕಾಡಿಗೆ ತೆರಳಿದಾಕ್ಷಣ ದಶರಥನೂ ಪ್ರಾಣ ತ್ಯಜಿಸಿದನು.

ಮಂಥರೆಯಾಗಿ ಜನಿಸಿದ್ದ ಯಕ್ಷಿಣಿ ದುಂದುಭಿಯ ನಾಲಿಗೆ ಮೇಲೆ ಕುಳಿತ ಸರಸ್ವತಿ ದೇವಿಯು ರಾಮನ ವನವಾಸವನ್ನು ಸೂಚಿಸಿದ್ದಳು. ಈ ಮುಖೇನ ಸೀತೆಯ ಅಪಹರಣ, ತದನಂತರ ರಾವಣನ ಸಂಹಾರವಾಯಿತು. ರಾಮನ ಅವತಾರವು ಸಾರ್ಥಕವಾಯಿತು.

ಅದಲ್ಲದೆ, ದುಂದುಭಿ ಸಾಕಿದ್ದ ಹರಿಣದ ಸಂಗಾತಿಯ ಮರಣದ ಪ್ರತೀಕಾರವೂ ಕೈಕೇಯಿ ವಿಧವೆಯಾದಾಗ ತೀರಿತು.

***

ಭಾಗ 2

ತಾನೊಂದು ಬಗೆದರೆ ಮಾನವ

– ಪೂರ್ಣಿಮ ಭಗವಾನ್

ಶ್ರೀನಗರದ ಶಾಲಿಮಾರ್ ಮುಘಲ್ ಗಾರ್ಡನ್ ರಸ್ತೆಯಲ್ಲೇ ಕೃಷಿ ವಿಶ್ವವಿದ್ಯಾಲಯದ ಸಮೀಪದ ಹೋಟೆಲ್ ಝುರ್ಯಾಬ್‌ನಲ್ಲಿ ನಮ್ಮ ವಸತಿಯೆಂದು ಮೊದಲೇ ತಿಳಿಸಿದ್ದರು. ಪ್ರವಾಸದ ಮೊದಲ ಎರಡು ದಿನ ಮತ್ತು ಕೊನೆಯ ಎರಡು ದಿನ ಅದೇ ಹೋಟೆಲಿನಲ್ಲಿ ನಾವು ಉಳಿದುಕೊಂಡಿದ್ದೆವು. ಮಧ್ಯೆ ಎರಡು ದಿನ ನಾವು ಪಹಲ್ಗಾಂಗೆ ಹೋಗುವುದು, ಅಲ್ಲಿನ ಹೋಟೆಲ್ ಗ್ರೀನ್ ಹೈಟ್ಸ್‌ನಲ್ಲಿ ಎರಡು ದಿನಗಳಿದ್ದು ಮುಖ್ಯ ಪ್ರವಾಸೀ ತಾಣಗಳನ್ನು ನೋಡಿಕೊಂಡು ಮತ್ತೆ ಶ್ರೀನಗರದಲ್ಲಿ ಉಳಿದ ಸ್ಥಳಗಳನ್ನು ನೋಡುವ ಕಾರ್ಯಕ್ರಮ ನಮ್ಮದಾಗಿತ್ತು.

ಮೂರು ಅಂತಸ್ತಿನ ಹೋಟೆಲ್ ಝುರ್ಯಾಬ್‌ನಲ್ಲಿ ಲಿಫ್ಟ್ ಇರಲಿಲ್ಲ. ಅಲ್ಲಿನ ಸಿಬ್ಬಂದಿಗಳ ಉಪಚಾರ ಆತಿಥ್ಯ ಬಹಳ ಚೆನ್ನಾಗಿತ್ತು. ಬೆಳಗಿನ ಉಪಹಾರಕ್ಕೆ, ರಾತ್ರಿ ಊಟಕ್ಕೆ ನಾವು ಹೋಗುವುದು ಸ್ವಲ್ಪ ತಡವಾದರೆ ರೂಮಿಗೆ ಫೋನ್ ಮಾಡಿ ಕರೆಯುತ್ತಿದ್ದರು. ತಿಂಡಿ, ಊಟದ ರುಚಿಯ ಬಗ್ಗೆಯೂ ವಿಚಾರಿಸಿಕೊಳ್ಳುತ್ತಾ, ಬಿಸಿ ಬಿಸಿಯಾದ, ಮೃದುವಾದ ರೋಟಿ, ಪರೋಟ, ಪೂರಿ ಎಲ್ಲವನ್ನೂ ಕುಳಿತ ಸ್ಥಳಕ್ಕೇ ತಂದು ಬಡಿಸುತ್ತಾ ಇದ್ದರು. ಹೋಟೆಲಿಗೆ ಸಂಬಂಧಿಸಿದ ನಮ್ಮ ಕುಂದು ಕೊರತೆಗಳನ್ನು ನಮ್ಮ ಟೂರ್ ಮೇನೇಜರಿಗೆ ಹೇಳದೇ ನೇರವಾಗಿ ರಿಸೆಪ್ಷನ್ಗೆ ಫೋನ್ ಮಾಡುವಂತೆ ಹೇಳುತ್ತಿದ್ದರು. ಮನೆಯವರಂತೆಯೇ ಆತ್ಮೀಯವಾಗಿ ನಡೆದುಕೊಳ್ಳುತ್ತಿದ್ದರು.

ನಾವು ಮೂರು ಜನ ಗೆಳತಿಯರು ಹೋಗಿದ್ದೆವು. ಎರಡು ಹಾಸಿಗೆಗಳ ಕೊಠಡಿಯಲ್ಲಿ ನೆಲದ ಮೇಲೆ ಮತ್ತೊಂದು ಹಾಸಿಗೆ ಹಾಕಿದ್ದರು. ಹೊರಗೆ ಹೋಗುವ ಗಡಿಬಿಡಿಯಲ್ಲಿ ನಾವು ಸಂಜೆ ಅದನ್ನು ಗಮನಿಸಿರಲಿಲ್ಲ. ರಾತ್ರಿ ನಮ್ಮ ಮೇನೇಜರನ್ನು ರೂಮಿನ ಬಗ್ಗೆ ಕೇಳಿದರೆ, ಈ ಹೋಟೆಲ್ಲಿನ ಎಲ್ಲಾ ರೂಮುಗಳು ಮೊದಲೇ ಬುಕ್ ಆಗಿದ್ದವು. ಅದಕ್ಕಾಗಿ ನಿಮಗೆ ಟ್ರಿಪಲ್ ಶೇರಿಂಗ್ ಮಾಡಿದ್ದೇವೆ ಎಂದು ನುಣುಚಿಕೊಳ್ಳಲು ನೋಡಿದರು. ಅಲ್ಲಿಯ ಥಂಡಿಗೆ ಕೆಳಗೆ ಮಲಗಿದ್ದ ಗೆಳತಿಗೆ ರಾತ್ರಿಯೆಲ್ಲಾ ಜಾಗರಣೆ. ಮರುದಿನ ಹೋಟೆಲ್ ಸಿಬ್ಬಂದಿ ಮತ್ತೊಂದು ಹಾಸಿಗೆ ತಂದು ಹಾಕಿ, ಎರಡು ಹಾಸಿಗೆಗಳನ್ನು ಒಂದರ ಮೇಲೊಂದು ಹಾಕಿದರು. ಹೊರಡುವ ಹಿಂದಿನ ದಿನ ಬೆಂಗಳೂರಿನಲ್ಲಿ ಫೋನ್ ಮಾಡಿ ರೂಮಿನ ಬಗ್ಗೆ ವಿಚಾರಿಸಿದಾಗ, ನಿಮ್ಮ ಹಾಗೆಯೇ ಇನ್ನೊಂದು ಗುಂಪಿನಲ್ಲಿ ಮೂರು ಜನ ಹೆಂಗಸರು ಇದ್ದಾರೆ, ಅಡ್ಜಸ್ಟ್ ಮಾಡುತ್ತೇವೆ ಎಂದಿದ್ದರು. ಹೇಳುವುದು ಒಂದು ಮಾಡುವುದು ಮತ್ತೊಂದು.

ಶ್ರೀನಗರ ಪ್ರವಾಸದ ಎರಡನೆಯ ದಿನ ಸೋನ್ ಮಾರ್ಗ್ ಗೆ ಹೋಗುವುದೆಂದು ಮೊದಲೇ ತಿಳಿಸಿದ್ದರು. ಶ್ರೀನಗರದಿಂದ ಸುಮಾರು 85 ಕಿ.ಮಿ> ದೂರ ಇರುವುದರಿಂದ ಮೂರು ಗಂಟೆಗಳ ಪ್ರಯಾಣ ಆಗುತ್ತದೆ, ಆದ್ದರಿಂದ ಎಲ್ಲರೂ ಬೆಳಿಗ್ಗೆ 8 ಗಂಟೆಯ ಹೊತ್ತಿಗೆ ತಿಂಡಿ ತಿಂದು ಸಿದ್ಧರಾಗಿರಬೇಕೆಂದು ಹೇಳಿದ್ದರು. ಉತ್ತರಭಾರತದಲ್ಲಿ, ಅದರಲ್ಲೂ ಶ್ರೀನಗರದ ಹವಾಮಾನ ಬಹಳ ವಿಚಿತ್ರ, ಒಂದು ನಿಮಿಷ ಇದ್ದಂತೆ ಮತ್ತೊಂದು ನಿಮಿಷ ಇರುವುದಿಲ್ಲ, ಬದಲಾವಣೆ ಆಗುತ್ತಲೇ ಇರುತ್ತದೆ, ಇದ್ದಕ್ಕಿದ್ದಂತೆ ಯಾವ ಕ್ಷಣದಲ್ಲಿಯಾದರೂ ಮಳೆ ಸುರಿಯಲು ಆರಂಭಿಸಬಹುದು, ಆದ್ದರಿಂದ ಬೇಗ ಹೊರಟರೆ ಒಳ್ಳೆಯದು ಎಂದಿದ್ದರು. ಎಲ್ಲರೂ ಸಮಯಕ್ಕೆ ಸರಿಯಾಗಿ ಸಿದ್ಧರಾಗಿ ಬಂದಿದ್ದರು. 20 ಜನ ಪ್ರವಾಸಿಗರ ತಂಡ ಒಂದು ಕಾರು, ಒಂದು ವ್ಯಾನಿನಲ್ಲಿ ಪ್ರಯಾಣಿಸುವುದೆಂದು ಮೊದಲೇ ನಿರ್ಧಾರವಾಗಿತ್ತು ಕಾರಿನ ಚಾಲಕರು ಸಮಯಕ್ಕೆ ಸರಿಯಾಗಿ ಬಂದಿದ್ದರು. ವ್ಯಾನಿನ ಡ್ರೈವರ್ 9 ಗಂಟೆಯಾದರೂ ಬಂದಿರಲಿಲ್ಲ. ಶ್ರೀನಗರದಲ್ಲಿ ನೆಟ್‌ವರ್ಕ್ ಸಮಸ್ಯೆ ಹೆಚ್ಚು. ಚಾಲಕರನ್ನು ಸಂಪರ್ಕಿಸಲು ಬಹಳಷ್ಟು ಸಲ ಪ್ರಯತ್ನಿಸಿದರೂ ಸಹ ಅದು ವಿಫಲವಾಗಿತ್ತು. ಕೊನೆಗೆ 10 ಗಂಟೆಗೆ ಬಂದು ಟ್ರಾಫಿಕ್ ಜಾಮ್ ನಿಂದ ತಡವಾಯಿತು ಎಂದು ಕ್ಷಮೆ ಕೋರಿದರು. ಶ್ರೀನಗರದಲ್ಲಿ ಮೊದಲನೆಯ ದಿನವೇ ಎಲ್ಲರಿಗೂ ಕಿರುರಸ್ತೆಗಳು, ಸಂಚಾರ ದಟ್ಟಣೆ ಎಲ್ಲದರ ಅನುಭವವಾಗಿತ್ತು. "ಇನ್ನೇನು ಮಾಡುವುದು ಸದ್ಯ ಬಂದರಲ್ಲಾ, ಪ್ರಕೃತಿ ಮುನಿಯದೇ ಇದ್ದರೆ ಸಾಕು" ಎಂದು

ದೇವರನ್ನು ಬೇಡಿಕೊಂಡು ಎಲ್ಲರೂ ತಮ್ಮ ತಮ್ಮ ವಾಹನಗಳಲ್ಲಿ ಹತ್ತಿ ಅಂದಿನ ಪ್ರಯಾಣ ಆರಂಭಿಸಿದರು. "ಚಾಲಕರು ಬರುವುದು ತಡವಾಯಿತಲ್ಲ, ಪೂರ್ತಿಯಾಗಿ ನೋಡಲು ಆಗುತ್ತದೋ, ಇಲ್ಲವೋ" ಎಂದು ಕೆಲವರು ಗೊಣಗಾಡುತ್ತಿದ್ದರೆ, ಮತ್ತೆ ಕೆಲವರು ತಮ್ಮ ರೀಲ್ಸ್ ಮಾಡುವುದಕ್ಕೆ ಸಮಯ ಸಿಕ್ಕಿತು, ಬೆಳಗ್ಗೆ ಹೇಗೂ ಎಲ್ಲರ ಮೇಕಪ್, ಅಲಂಕಾರ ಎಲ್ಲಾ ಫ್ರೆಶ್ ಆಗಿ ಇರುತ್ತದೆ ಎಂದು ಸಂತಸಪಟ್ಟರು. ಹಾಡುಗಳಿಗೆ ತಕ್ಕಂತೆ ಅಭಿನಯ ಮಾಡಿ, ಹೆಜ್ಜೆ ಹಾಕುವುದನ್ನು ಅಭ್ಯಾಸವೇ ಇಲ್ಲದ ಸಹಪ್ರಯಾಣಿಕರಿಗೂ ಕಲಿಸಿ, ಅವರನ್ನೂ ಸಹ ತಮ್ಮ ಜೊತೆ ಸೇರಿಸಿಕೊಂಡರು.

ಶ್ರೀನಗರದಿಂದ ಸೋನಾಮಾರ್ಗ್‌ಗೆ ಹೋಗುವ ದಾರಿ ಭಾರತದ ಜಮ್ಮು ಮತ್ತು ಕಾಶ್ಮೀರದ ಗಂಡೇರ್ಬಲ್ ಜಿಲ್ಲೆಯ ಕಂಗನ್ ಎನ್ನುವ ಪುಟ್ಟ ಪಟ್ಟಣದ ಮುಖಾಂತರ ಹಾದು ಹೋಗುತ್ತವೆ. ಸುತ್ತಲಿನ ರಮಣೀಯ ಪ್ರಕೃತಿ ಸೌಂದರ್ಯ ನೋಡಿಯೇ ಅನುಭವಿಸಬೇಕು. ಇದು ಗಂಡೇರ್ಬಲ್ ಜಿಲ್ಲೆಯ 50 ಕಿಮೀ ಉದ್ದದ ಕಮರಿ ಕಣಿವೆಯಲ್ಲಿ ಹರಡಿಕೊಂಡಿದೆ. ಪ್ರಕೃತಿ ಸೌಂದರ್ಯಕ್ಕೆ ಹೆಸರುವಾಸಿಯಾದ ಇದು ಸೋನಾಮಾರ್ಗ್ ಮತ್ತು ನರನಾಗ್‌ನಂತಹ ವಿವಿಧ ಪಿಕ್ನಿಕ್ ತಾಣಗಳಿಂದ ಆವೃತವಾಗಿದೆ. ದಾರಿಯ ಇಕ್ಕೆಲಗಳಲ್ಲೂ ಅಲ್ಲಲ್ಲಿ ಕಾಣುವ ಆಲ್ಪೈನ್ ಹುಲ್ಲುಗಾವಲು, ಹಿಮನದಿಗಳ ಸೌಂದರ್ಯ ರಮಣೀಯ.

ಭಾರತದ ಅತ್ಯಂತ ಅಪಾಯಕಾರಿ ರಸ್ತೆಯಾಗಿರುವ ಸೋನ್ ಮಾರ್ಗ್‌ನ ಪ್ರವೇಶವು ಈಗ ಸುಲಭ ಸಾಧ್ಯ. ಶ್ರೀನಗರದ ಪ್ರವಾಸೋದ್ಯಮವೂ ಅಭಿವೃದ್ಧಿಯಾಗುತ್ತದೆ, ರಕ್ಷಣಾತ್ಮಕ ವ್ಯವಸ್ಥೆ ಉತ್ತಮಪಡಿಸಬಹುದು ಎಂಬ ದಿವ್ಯದೃಷ್ಟಿಯಿಂದ ಸೋನ್ ಮಾರ್ಗ್ ಸುರಂಗ/ಝಡ್ ಮೋರ್ ಸುರಂಗವನ್ನು ನಿರ್ಮಿಸಿದ್ದಾರೆ. ಝಡ್-ಮೋರ್ಹ್ ಸುರಂಗವು ಜಮ್ಮು ಮತ್ತು ಕಾಶ್ಮೀರದ ಶ್ರೀನಗರ-ಲೇಹ್ ಹೆದ್ದಾರಿಯಲ್ಲಿ ಗಗಂಗೀರ್ ಮತ್ತು ಸೋನಾಮಾರ್ಗ್ ನಡುವಿನ ಎರಡು ಪಥದ ರಸ್ತೆ ಸುರಂಗವಾಗಿದೆ. 'ಝಡ್-ಮೋರ್ಹ್' ಎಂಬ ಹೆಸರು ನಿರ್ಮಾಣ ಸ್ಥಳದ ಬಳಿಯಿರುವ ಝಡ್-ಆಕಾರದ ರಸ್ತೆ ವಿಭಾಗವನ್ನು ಸೂಚಿಸುತ್ತದೆ. ಸುರಂಗವನ್ನು ನಿರ್ಮಿಸಿರುವ ಪ್ರದೇಶವು 8,500 ಅಡಿಗಳಷ್ಟು ಎತ್ತರದಲ್ಲಿದೆ ಮತ್ತು ಹಿಮಪಾತಕ್ಕೆ ಗುರಿಯಾಗುತ್ತದೆ. ಚಳಿಗಾಲದಲ್ಲಿ ಬಹಳಷ್ಟು ಭಾಗಗಳಲ್ಲಿ ಸೋನ್ ಮಾರ್ಗ್‌ಗೆ ಹೋಗಲು ದುಸ್ತರ. ವಾಹನ ಸಂಚಾರ ಸುಗಮಗೊಳಿಸಿ ಎಲ್ಲಾ ಹವಾಮಾನದಲ್ಲೂ ಓಡಾಡಲು ಸಾಧ್ಯವಾಗುವಂತೆ ಸುಮಾರು ನಾಲ್ಕು ಮೈಲಿ ಅಂದರೆ ಆರೂವರೆ ಕಿಲೋಮೀಟರ್ ಉದ್ದದ ಸುರಂಗ ಮಾರ್ಗವನ್ನು 8652 ಅಡಿ ಎತ್ತರದಲ್ಲಿ ನಿರ್ಮಿಸಿದ್ದಾರೆ. ಸೋನಾಮಾರ್ಗ್ ಸುರಂಗ ಯೋಜನೆಯ ಪ್ರಸ್ತಾವನೆ 2012ನೆಯ ಇಸವಿಯಲ್ಲಿಯೇ ನಡೆದಿತ್ತು. ಸೋನಾಮಾರ್ಗ್‌ನ್ನು ಕಾಶ್ಮೀರ ಕಣಿವೆಗೆ ವರ್ಷಪೂರ್ತಿ ಸಂಪರ್ಕಿಸುವ ಕಾರ್ಯತಂತ್ರದ ಮೂಲಸೌಕರ್ಯ ಯೋಜನೆಯಾದ ಝಡ್-ಮೋರ್ಹ್ ಸುರಂಗವು ವಿಶಾಲವಾದ ಝೋಜಿಲಾ ಸುರಂಗ ಯೋಜನೆಯ ಒಂದು ಭಾಗವಾಗಿದೆ. ಶ್ರೀನಗರ ಮತ್ತು ಲಡಾಖ್ ನಡುವೆ ನಿರಂತರ ಸಂಪರ್ಕವನ್ನು ಒದಗಿಸುವ ಗುರಿಯನ್ನು ಝೋಜಿಲಾ ಸುರಂಗ ಯೋಜನೆ ಹೊಂದಿದೆ.

ಝಡ್ ಮೊರ್ಹ್ ಸುರಂಗದ ಉದ್ಘಾಟನೆಯನ್ನು 2025ರ ಜನವರಿ 13ರಂದು ಭಾರತದ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು ಮಾಡಿದರು. ಎರಡು ಗಂಟೆಗಳಿಗೂ ಅಧಿಕ ಸಮಯ ತೆಗೆದುಕೊಳ್ಳುತ್ತಿದ್ದ ಪ್ರಯಾಣ ಈಗ ಅತ್ಯಂತ ಸರಳ, ಸುಲಭ. ಝಡ್ ಮೋರ್ಹ್ ಸುರಂಗದಲ್ಲಿ ಒಂದು ಗಂಟೆ ಸಮಯದೊಳಗೆ ಒಂದು ಸಾವಿರ ವಾಹನಗಳು 80 ಕಿಮೀ ವೇಗದಲ್ಲಿ ಸಂಚರಿಸಬಹುದು. ಇದು ಭಾರತೀಯ ರಕ್ಷಣಾ ಯೋಜನೆಯ ಪ್ರಮುಖ ರಚನೆಯಾಗಿದೆ. ಸುವರ್ಣ ಪಥ, ಸುವರ್ಣ ಮಾರ್ಗ, ಚಿನ್ನದ ಹುಲ್ಲುಗಾವಲು ಎಂದೂ ಕರೆಯಲ್ಪಡುತ್ತದೆ ಸೋನ್‌ಮಾರ್ಗ್.

ಹಿಮಾವೃತವಾದ ಪರ್ವತಗಳು, ಹಚ್ಚ ಹಸಿರಿನ ಹುಲ್ಲುಗಾವಲುಗಳು ಮತ್ತು ಹಿಮನದಿಯ ಭೂದೃಶ್ಯಗಳನ್ನು ಒಳಗೊಂಡ ಸೋನ್ ಮಾರ್ಗ್ ಅದ್ಭುತವಾದ ನೈಸರ್ಗಿಕ ಸೌಂದರ್ಯಕ್ಕೆ ಹೆಸರುವಾಸಿಯಾಗಿದೆ. ಶ್ರದ್ಧೆ, ಶಕ್ತಿಯಿರುವ ಕೆಲವರು ಪ್ರಾಕೃತಿಕ ಸೌಂದರ್ಯ ಸವಿಯುತ್ತಾ ನಡೆದೇ ಹೋಗುತ್ತಾರೆ. ನಿಗದಿತ ಸಮಯದೊಳಗೆ ಹಿಂದಿರುಗಿ ಬರಬೇಕಾದವರಿಗೆ ಕುದುರೆ ಸವಾರಿ ಉತ್ತಮ ಆಯ್ಕೆ.

ಪ್ರವಾಸೀ ತಾಣಗಳಲ್ಲಿ ಫೋಟೋ ತೆಗೆದು ತಕ್ಷಣವೇ ಪ್ರಿಂಟ್ ಹಾಕಿ ಕೊಡುವುದು ಸರ್ವೇಸಾಮಾನ್ಯ. ತಾಂತ್ರಿಕತೆ ಬೆಳೆದಂತೆ, ಜನರ ಆಸೆ, ಹವ್ಯಾಸಗಳು ನವೀಕರಣಗೊಂಡ ಹಾಗೆ ಯುವಜನರ, ಮನೋಯುವಕರ ಅಭಿಲಾಷೆಗಳನ್ನು ಗಮನದಲ್ಲಿಟ್ಟುಕೊಂಡು ಹೊಸ ರೀತಿಯ ವ್ಯವಹಾರ ನಡೆಯುತ್ತದೆ ಸೋನ್ ಮಾರ್ಗ್ ನಲ್ಲಿ. ಪ್ರವಾಸಿಗರು ಕುದುರೆ ಸವಾರಿ ಮಾಡುತ್ತಾ ಆನಂದಿಸುವ ರೀಲ್ಸ್ ಮಾಡಿಕೊಡುವ ಯುವಜನರ ಪಡೆಯೇ ಅಲ್ಲಿದೆ. 30 ಸೆಕೆಂಡ್‌ನ ರೀಲ್ಸ್ ಬೇಕಾ, ಹೆಚ್ಚು ಸಮಯದ ರೀಲ್ಸ್ ಬೇಕಾ, ಅದಕ್ಕೆ ತಕ್ಕಂತೆ ಶುಲ್ಕವನ್ನು ವಿಧಿಸುತ್ತಾರೆ. ಜೀವಮಾನದ ನೆನಪುಗಳನ್ನು ಕಾಪಾಡಲು ಎಂತಹ ಅದ್ಭುತ ಅನುಕೂಲ. ದುಡಿದು ತಿನ್ನುವ ಛಲ, ಬಲ, ಮನೋಬಲ ಇದ್ದರೆ ಎಂತಹುದೇ ಪರಿಸ್ಥಿತಿಯಲ್ಲಿಯೂ ತಿಳಿದಿರುವ ವಿದ್ಯೆಯನ್ನು ಉಪಯೋಗ ಮಾಡಿಕೊಂಡು ತಾವೂ ಸಂತಸದಿಂದ ಇದ್ದು ಅನ್ಯರನ್ನೂ ಸಂತೋಷಪಡಿಸಬಹುದು.

ಅಲ್ಲಿಂದ ಸ್ವಲ್ಪ ಮುಂದೆ ಹೋದರೆ ಅಮರನಾಥ ಗುಹೆಗೆ ಹೋಗುವ ಮಾರ್ಗ ಇದೆ. ಬಲ್ತಾಲ್ ಬೇಸ್ ಕ್ಯಾಂಪ್ ಹಲವಾರು ಚಾರಣ ಮಾರ್ಗಗಳಿಗೆ ಪ್ರವೇಶದ್ವಾರವೂ ಹೌದು. ರಿವರ್ ರಾಫ್ಟಿಂಗ್ ಮತ್ತು ಕ್ಯಾಂಪಿಂಗ್‌ನಂತಹ ಸಾಹಸ ಚಟುವಟಿಕೆಗಳಿಗೂ ಸಹ ಅದು ಜನಪ್ರಿಯ ತಾಣವಾಗಿದೆ. ಬೇಸಿಗೆಯಲ್ಲಿ ಥಾಜಿವಾಸ್ ಹಿಮನದಿಗೆ ಪ್ರವಾಸಕ್ಕಾಗಿ ಕುದುರೆಗಳನ್ನು ಬಾಡಿಗೆಗೆ ಪಡೆಯಬಹುದು. ಹತ್ತಿರದ ಅಮರನಾಥ ದೇವಾಲಯಕ್ಕೆ ಯಾತ್ರೆ ಸೋನಾಮಾರ್ಗ್‌ನಲ್ಲಿ ಪ್ರಾರಂಭವಾಗುತ್ತದೆ.

ಸೋನಾಮಾರ್ಗ್‌ನಿಂದ ಪೂರ್ವಕ್ಕೆ 15 ಕಿಮೀ ದೂರದಲ್ಲಿರುವ ಬಾಲ್ತಲ್, ಜೋಜಿ ಲಾ ಪಾಸ್‌ನ ಬುಡದಲ್ಲಿರುವ ಕಣಿವೆಯಾಗಿದೆ. ಚಾರಣಿಗರು ಜೋಜಿ ಲಾ ದಾಟುವ ಮೂಲಕ ವಿಶ್ವದ ಮೇಲ್ಛಾವಣಿ ಎಂದು ಕರೆಯಲ್ಪಡುವ ಲೇಹ್ ನಗರವನ್ನು ತಲುಪಬಹುದು.

ಜಮ್ಮು ಮತ್ತು ಕಾಶ್ಮೀರ ಪ್ರವಾಸೋದ್ಯಮ ಇಲಾಖೆಯು ವರ್ಷವಿಡೀ ಸೋನಾಮಾರ್ಗ್‌ನಲ್ಲಿ ರಿವರ್ ರಾಫ್ಟಿಂಗ್ ಪಂದ್ಯಾವಳಿಗಳನ್ನು ಆಯೋಜಿಸುತ್ತದೆ. ಇತ್ತೀಚೆಗೆ ವಿದೇಶಗಳಿಂದಲೂ ಜನರು ಅನೇಕ ತಂಡಗಳಲ್ಲಿ ಬರುತ್ತಾರೆ.

ಸೋನ್ ಮಾರ್ಗ್ಗೆ ಕುದುರೆ ಸವಾರಿ ಹೋಗುವ ಇಚ್ಛೆ ಇರದ ಕೆಲವು ಹಿರಿಯರನ್ನು ಬೇರೊಂದು ವಾಹನದ ವ್ಯವಸ್ಥೆ ಮಾಡಿ ಅಲ್ಲಿನ ಸುಂದರ ದೃಶ್ಯಗಳನ್ನು ನೋಡಲು ಕಳುಹಿಸಿದರು. ಆ ಚಾಲಕನು ಸ್ವಲ್ಪ ದೂರ ಕರೆದುಕೊಂಡು ಹೋಗಿ "ನಮ್ಮ ವಾಹನದ ಅನುಮತಿ ಇರುವುದು ಇಷ್ಟು ದೂರ ಹೋಗುವುದಕ್ಕೆ ಮಾತ್ರ, ಇಲ್ಲಿಂದ ಮುಂದೆ ಹೋಗಬೇಕಾದವರು ಅಲ್ಲಿ ಕಾಣುತ್ತಿರುವ ವಾಹನಗಳಲ್ಲಿ ಹೋಗಿ, ಒಬ್ಬೊಬ್ಬರು ಒಬ್ಬೊಬ್ಬರನ್ನೇ ಕರೆದುಕೊಂಡು ಹೋಗುವುದು" ಎಂದಾಗ ಅಲ್ಲಿದ್ದವರಿಗೆ ಹೋಗಲು ಭಯವಾಗಿ, ನಾವು ಇಲ್ಲಿಂದಲೇ ಹಿಮಾಚ್ಛಾದಿತ ಶಿಖರಗಳ ಸೌಂದರ್ಯ ಆಸ್ವಾದಿಸುತ್ತೇವೆ ಎಂದು ಅಲ್ಲಿನ ಸುಟ್ಟ ಮುಸುಕಿನ ಜೋಳದ ಖರೀದಿಗೆ ನಿಂತರು. ಆ ಚಾಲಕನು ಅವರನ್ನು ಅಷ್ಟಕ್ಕೇ ಬಿಡಲಿಲ್ಲ. "ಹೋಗಲಿ, ಇಲ್ಲಿಂದ ಮುಂದೆ ನಾನು ನಿಮ್ಮನ್ನು ಕರೆದುಕೊಂಡು ಹೋಗಿ ತೋರಿಸುತ್ತೇನೆ, ನನ್ನ ಗಾಡಿಗೆ ಅಲ್ಲಿಗೆ ಹೋಗಲು ಅನುಮತಿ ಇಲ್ಲ. ನಾನು ಹೇಗೋ ಮ್ಯಾನೇಜ್ ಮಾಡುವೆ, ತಲಾ 500 ರೂ.ಗಳಂತೆ ಆರು ಜನರಿಂದ ಮೂರು ಸಾವಿರ ರೂಪಾಯಿ ಕೊಟ್ಟುಬಿಡಿ, ನಿಮ್ಮ ಟೂರ್ ಮೇನೇಜರ್‌ಗೇ ಆಗಲಿ, ಇತರ ಪ್ರವಾಸಿಗಳಿಗೇ ಆಗಲಿ, ಯಾರಿಗೂ ಹೇಳಬೇಡಿ, ಹೇಳಿದರೆ ನನಗೆ ಕೆಲಸಕ್ಕೆ ತೊಂದರೆ ಆಗುತ್ತದೆ" ಎಂದು ಹೇಳಿ ಕೊನೆಗೂ ತಲಾ ಇನ್ನೂರು ಕೊಡಲು ಒಪ್ಪಿಸಿ ಅಲ್ಲಿಗೆ ಕರೆದುಕೊಂಡು ಹೋದರು. ಇವರು ಗಾಡಿಯ ಲೈಸೆನ್ಸ್ "ಸಿ" ಇದ್ದರೆ ಅಲ್ಲಿ "ಎಫ್" ಎಂದು ಹೇಳಿದರು. ಅಂತೂ ಅಲ್ಲಿಯ ರಮಣೀಯ ದೃಶ್ಯ, ಚಿಕ್ಕ ಸೇತುವೆ, ಹರಿಯುವ ನದಿ, ಹಿಮನದಿಗಳು ಎಲ್ಲವೂ ಮನಮೋಹಕತೆ ಕಂಡು ಸಂತಸಪಟ್ಟರು.

ಸಂಜೆ ನಾಲ್ಕು ಗಂಟೆಯಾದರೂ ಕುದುರೆಗಳಲ್ಲಿ ಹೋದವರು ಹಿಂದಿರುಗಿ ಬಂದಿರಲಿಲ್ಲ. ಬೇಗ ಬಂದಿದ್ದ ಆರು ಜನರಲ್ಲಿ ನಾಲ್ಕು ಜನರನ್ನು ಕಾರಿನಲ್ಲಿ ಇಪ್ಪತ್ತು ಕಿಲೋಮೀಟರ್ ದೂರದಲ್ಲಿ ಇದ್ದ ಹೋಟೆಲಿಗೆ ಊಟಕ್ಕೆ ಕಳುಹಿಸಿದರು. ಅಲ್ಲಿಯೂ ಊಟದ ನಂತರ ಉಯ್ಯಾಲೆಯಲ್ಲಿ ಕುಳಿತು ಹರಿಯುವ ನದಿಯ ಸೌಂದರ್ಯ ಸವಿಯುತ್ತಾ ಒಂದಷ್ಟು ಹಾಡುಗಳನ್ನು ಹೇಳಿಕೊಂಡು ನಕ್ಕು ನಲಿದು ಶ್ರೀನಗರಕ್ಕೆ ರಾತ್ರಿ 9 ಗಂಟೆಗೆ ಮರಳಿದೆವು.

***

ಮರಳಿ-ಅರಳು

– ಗಿರಿಜಾ ರಾಜ್ ಎಲ್.

ಬಿಳಿಯ ಕೂದಲು
ಸುಕ್ಕು ಸುಕ್ಕು ಚರ್ಮ!
ಇಳಿ ವಯಸಾಯಿತೇ?
ಸವೆಯಿತೇ ಕರ್ಮ!

ಅನುಭವ ಗಾಥೆಯ
ಉಲಿದಿದೆ, ಒಂದೊಂದು
ತೊಗಲಿನ ನಿರಿಗೆ!
ಒಂದೊಂದು ನೆರೆಯ
ಕೂದಲು;

ಸುಕ್ಕುಗಟ್ಟಿದರೇನಂತೆ
ತೊಗಲು?
ಬಿಳಿಯಾದರೇನಂತೆ
ಕೂದಲು?
ಜೀವನೋತ್ಸಾಹಕ್ಕುಂಟೇ
ಕೊರತೆ?

ವಯಸ್ಸಾದರೇನು?
ಮನಸಿದ್ದರಾಯಿತು!
ಹರೆಯದ ಸೊಕ್ಕಿನಲಿ
ಇನಿತಿರದ ತಿಳಿವು
ವೃದ್ಧಾಪ್ಯದ ಸುಕ್ಕಿನಲಿ
ಪಕ್ವವಾಗಿರೆ ಒಲವು

ಬಾಳ ಸಂಜೆಯ ಶಾಂತ
ನಗೆಯಲಿದೆ
ಆತ್ಮ ಜ್ಞಾನ ಅರಳಿದ
ಅನುಭಾವ
ಅರಳು-ಮರಳಲ್ಲ
ಮರಳಿ-ಅರಳು

***

ಭಾವಗಳ ಬೆನ್ನೇರಿ

– ಗಿರಿಜಾ ರಾಜ್ ಎಲ್.

ಭಾವ-ಅನುಭಾವಗಳ
ಬೆನ್ನೇರಿ ಬಂದಿಹೆನು
ಕಲ್ಪನೆಯ ಶಿಲ್ಪಗಳಿಗೆ,
ಅಕ್ಷರದ ಇಕ್ಷುಧಾರೆ!
ಎರೆದೆರೆದು,ಪ್ರಾಣಾಗ್ನಿ
ಪ್ರವಹಿಸಲಿ!

ಭಾವಗಳಿಗೆ ಕವನದ
ಅಂಗಿ ತೊಡಿಸಿ ಮತ್ತೆ
ಮತ್ತೆ ನೆರಿಗೆಗಳ ತಿದ್ದುವ ತವಕ!

ಕರುಳ ಕೂಸಿನ ಸೊಗಕೆ,
ನಲವೇರುತಿದೆ ಕವಿಗೆ;
ಮತ್ತೆ ಮತ್ತೆ ಸದಾ ಹೆರುವ
ಬಯಕೆ! ಸವಿದು ಹರಸುವ
ಸಹೃದಯರು ಇರುವವರೆಗೆ!

***

ಕರ್ನಾಟಕ ವೃತ್ತಗಳು

(ಅಕ್ಷರ ಅಥವಾ ವರ್ಣ ವೃತ್ತಗಳು)

– ಗಣಪತಿ ಹೆಗಡೆ

ಗೇಯಕ್ಕೆ ಅನುಕೂಲವಾಗಿ ಕಾವ್ಯವನ್ನು ಬರೆಯುವಾಗ, ಶಬ್ದ ಪ್ರಯೋಗಗಳು ಕೆಲವು ನಿಯಮಗಳಿಗೆ ಒಳಪಡಬೇಕು ಎನ್ನುವದು ಕಾವ್ಯ ವಿಮರ್ಶಕರ ಅಭಿಪ್ರಾಯ. (ಇದು ನವ್ಯಕಾವ್ಯಕ್ಕಿಂತಲೂ ಪೂರ್ವಕಾಲದ ಪದ್ಯ ಕಾವ್ಯದ ಕುರಿತಾದ ವಿವರಣೆ.) ಇಂತಹ 'ಪದ್ಯವನ್ನು ರಚಿಸುವ ನಿಯಮ ಅಥವಾ ಶಾಸ್ತ್ರವನ್ನು' ಛಂದಸ್ಸು ಎನ್ನುತ್ತಾರೆ. ಛಂದಸ್ಸಿನ ಶಾಸ್ತ್ರದ ಪ್ರಕಾರ ರಚಿಸಿದ ಪದ್ಯವೇ 'ಛಂದೋಬದ್ಧ' ಪದ್ಯ ಅಥವಾ ಕಾವ್ಯ.

ಗಣ ಎಂದರೆ ಗುಂಪು. ಕೆಲವು ನಿಯಮಗಳಿಗನುಸಾರವಾಗಿ ವಿಂಗಡಿಸಿದ ಅಕ್ಷರಗಳ ಗುಂಪು. ಈ ಗಣಗಳನ್ನು ಕಟ್ಟುವ ಘಟಕಗಳು ಎಂದರೆ ಹ್ರಸ್ವ ದೀರ್ಘಾಕ್ಷರಗಳು. ಇದರಲ್ಲಿ 'ವರ್ಣಗಣ' ಅಥವಾ 'ಅಕ್ಷರಗಣ', 'ಮಾತ್ರಾಗಣ' ಮತ್ತು 'ಅಂಶಗಣ'ಗಳೆಂಬ ಮೂರು ವಿಧದ ಗಣಗಳಿವೆ. ಈ ಗಣಗಳು ಒಂದು ನಿರ್ದಿಷ್ಟವಾದ ಆವರ್ತದಲ್ಲಿ ಪುನರಾವರ್ತನೆ ಗೊಳ್ಳುವಾಗ ಗೇಯತೆ ಹುಟ್ಟಿಕೊಳ್ಳುತ್ತದೆ. ಇದೇ ಪದ್ಯದ ಲಕ್ಷಣ.

ಕನ್ನಡ ಛಂದಸ್ಸಿನಲ್ಲಿ, ವೃತ್ತಗಳು ಎಂದರೆ ಒಂದು ನಿರ್ದಿಷ್ಟ ಗಣವಿನ್ಯಾಸವನ್ನು ಹೊಂದಿರುವ ಪದ್ಯಗಳು. ಇವುಗಳಲ್ಲಿ, ಪ್ರತಿ ಸಾಲಿನಲ್ಲಿಯೂ ಅಕ್ಷರಗಳ ಸಂಖ್ಯೆ ಮತ್ತು ಗಣಗಳ ವಿನ್ಯಾಸವು ಒಂದೇ ರೀತಿ ಇರುತ್ತದೆ.

ಅಕ್ಷರಗಣಗಳನ್ನು ಗುರುತಿಸುವ ಸಂಸ್ಕೃತ ಸೂತ್ರವೊಂದು ಹೀಗಿದೆ.

'ಆದಿಮಧ್ಯಾವಸಾನೇಷು ಯರತಾ ಯಾನ್ತಿ ಲಾಘವಮ್।
ಭಜಸಾ ಗೌರವಂ ಯಾಂತಿ ಮನೌತು ಗುರುಲಾಘವಮ್॥'

(ಆದಿಮಧ್ಯಅಂತ್ಯದಲ್ಲಿ ಲಘುವಿದ್ದರೆ 'ಯರತ' ಗಣ, ಗುರುವಿದ್ದರೆ 'ಭಜಸ' ಗಣ, ಆದಿಮಧ್ಯಅಂತ್ಯ ಮೂರರಲ್ಲಿಯೂ ಗುರುವಿದ್ದರೆ 'ಮ' ಗಣ, ಲಘುವಿದ್ದರೆ 'ನ' ಗಣ.)

ಇನ್ನೂ ವಿಸ್ತಾರವಾಗಿ ಹೇಳುವುದಾದರೆ,,
ಆದಿಯಲ್ಲಿ ಲಘುವಿದ್ದರೆ 'ಯ' ಗಣ
ಮಧ್ಯದಲ್ಲಿ ಲಘುವಿದ್ದರೆ 'ರ' ಗಣ.
ಕೊನೆಯಲ್ಲಿ ಲಘುವಿದ್ದರೆ 'ತ' ಗಣ.
ಆದಿಯಲ್ಲಿ ಗುರುವಿದ್ದರೆ 'ಭ' ಗಣ.
ಮಧ್ಯದಲ್ಲಿ ಗುರುವಿದ್ದರೆ 'ಜ' ಗಣ.
ಕೊನೆಯಲ್ಲಿ ಗುರುವಿದ್ದರೆ 'ಸ' ಗಣ.
ಆದಿಮಧ್ಯಅಂತ್ಯದಲ್ಲಿ ಗುರು ಬಂದರೆ 'ಮ' ಗಣ.
ಆದಿಮಧ್ಯಅಂತ್ಯದಲ್ಲಿ ಲಘು ಬಂದರೆ 'ನ' ಗಣ.

ಕನ್ನಡದಲ್ಲಿ ಇದನ್ನು ಈ ಕೆಳಗಿನ ಸೂತ್ರದಲ್ಲಿ ಗುರುತಿಸುತ್ತಾರೆ.

"ಯಮಾತಾರಾಜಭಾನಸಲಗಂ"

(ಮೂರಕ್ಷರಗಳ ಗುಂಪುಗಳನ್ನು ಮಾಡಿದರೆ, ಮೊದಲನೆಯ ಅಕ್ಷರ ಆ ಗಣದ ಹೆಸರನ್ನು ಸೂಚಿಸುತ್ತದೆ. 'ಯಮಾತಾ' ಯಗಣ, 'ಮಾತಾರಾ' ಮಗಣ, 'ತಾರಾಜ' ತಗಣ, 'ರಾಜಭಾ' ರಗಣ, 'ಜಭಾನ' ಜಗಣ, 'ಭಾನಸ' ಭಗಣ, 'ನಸಲ' ನಗಣ, 'ಸಲಗಂ' ಸಗಣ – ಹೀಗೆ.).

ಸಮವೃತ್ತ :
ಕನ್ನಡ ಕಾವ್ಯದಲ್ಲಿ, ವಿಶೇಷವಾಗಿ ವೃತ್ತಗಳಲ್ಲಿ, ನಾಲ್ಕು ಚರಣಗಳ ಲಕ್ಷಣಗಳು (ಅಕ್ಷರಗಳು, ಮಾತ್ರೆಗಳು, ಗಣಗಳು, ಯತಿ, ಪ್ರಾಸ ಇತ್ಯಾದಿ) ಒಂದೇ ರೀತಿಯಾಗಿದ್ದರೆ ಅದನ್ನು ಸಮವೃತ್ತ ಎಂದು ಕರೆಯಲಾಗುತ್ತದೆ. ಇದು ಸಂಸ್ಕೃತದಿಂದ ಕನ್ನಡಕ್ಕೆ ಬಂದಿರುವ ಒಂದು ಪದವಾಗಿದ್ದು, ಅಕ್ಷರಗಳಿಂದ ಕೂಡಿದ ಪದ್ಯ ಜಾತಿಗಳನ್ನು ಅಕ್ಷರ ವೃತ್ತಗಳೆನ್ನುತ್ತಾರೆ.

ನಾಗವರ್ಮನು ತನ್ನ ಛಂದೋಂಬುಧಿಯಲ್ಲಿ ತಿಳಿಸಿದಂತೆ,
ಈ ಕೆಳಗಿನವುಗಳು ಆ ಆರು ವೃತ್ತಗಳ ಸಾಮಾನ್ಯ ಲಕ್ಷಣಗಳು. (ಗುರು ಹಾಗೂ ಲಘು ಮಾತ್ರೆಗಳು ಪ್ರತಿ ಪಾದಗಳ ಮೊದಲ ಅಕ್ಷರ ಅಥವಾ ಅಕ್ಷರಗಳಾದಲ್ಲಿ ಆ ವೃತ್ತ ಯಾವ ಗುಂಪಿಗೆ ಸೇರುತ್ತದೆ ಅಂತ ತಿಳಿಯಲು ಈ ಕೆಳಗಿನ ಸೂತ್ರ ಅತ್ಯಂತ ಸುಲಭ ಮಾರ್ಗ).

ಗುರುವೊಂದಾದಿಯೊಳುತ್ಪಲಂ ಗುರು ಮೊದಲ್ ಮೂರಾಗೆ ಶಾರ್ದೂಲಮಾ।
ಗುರು ನಾಲ್ಕಾಗಿರಲಂತು ಸ್ರಗ್ಧರೆ ಲಘು ದ್ವಂದ್ವಂ ಗುರುದ್ವಂದಮಾ।
ಗಿರೆ ಮತ್ತೇಭ ಲಘುದ್ವಯತ್ರಿಗುರುವಿಂದಕ್ಕುಂ ಮಹಾಸ್ರಗ್ಧರಾ।
ಪರಿಣಾಕ್ಷೀ ಲಘು ನಾಲ್ಕು ಚಂಪಕಮಿವಾರುಂ ಖ್ಯಾತಕರ್ಣಾಟಕಂ॥

(ಚರಣದ ಮೊದಲಕ್ಷರ ಗುರುವಾದರೆ ಉತ್ಪಲ.
ಮೊದಲ ಮೂರಕ್ಷರಗಳು ಗುರುವಾದರೆ ಶಾರ್ದೂಲ.
ಮೊದಲ ನಾಲ್ಕಕ್ಷರಗಳು ಗುರುವಾದರೆ ಸ್ರಗ್ಧರೆ.
ಮೊದಲ ಅಕ್ಷರಗಳು ಎರಡು ಲಘು ಎರಡು ಗುರುವಾದರೆ ಮತ್ತೇಭ.
ಮೊದಲ ಅಕ್ಷರಗಳು ಎರಡು ಲಘು ಮೂರು ಗುರುಗಳಾದರೆ ಮಹಾಸ್ರಗ್ಧರೆ.
ಮೊದಲ ನಾಲ್ಕು ಅಕ್ಷರಗಳು ಲಘುವಾದರೆ ಚಂಪಕಮಾಲಾ.)

ಆದರೆ ಈ ಆರೂ ವೃತ್ತಗಳನ್ನು ವಿಸ್ತಾರವಾಗಿ ನೋಡುವುದಾದರೆ ಕೆಳಗಿನಂತೆ ತಿಳಿಯಬಹುದು.

ಆರೂ ವೃತ್ತಗಳು ನಾಲ್ಕು ನಾಲ್ಕು ಚರಣಗಳಿಂದ ಕೂಡಿರುತ್ತವೆ.

೧-ಉತ್ಪಲ ಮಾಲಾ ವೃತ್ತ.
"ಉತ್ಪಲ ಮಾಲೆಯಪ್ಪುದು ಭರಂನಭಭಂರಲಗಂನೆಗೆಲ್ದಿರಲ್"
ಪ್ರತಿ ಪಾದದಲ್ಲಿಯೂ ೨೦ ಅಕ್ಷರಗಳು. ಇದರ ಗಣವಿನ್ಯಾಸದಲ್ಲಿ ಬರುವ ಗಣಗಳು 'ಭರನಭಭರ-ಲಗು'

ಬ ರ ನ ಬ ಬ ಬ
"ಉತ್ಪಲ। ಮಾಲೆಯ। ಪ್ಪುದುಭ।ರಂನಭ।ಭಂರಲ।ಗಂನೆಗೆ।
ಲ-ಗು
ಲ್ದಿರಲ್"

ಉದಾಹರಣೆ.

ಶ್ರೀಯನ।ರಾತಿ ಸಾ।ಧನಪ।ಯೋನಿಧಿ।ಯೊಳ್ ಪಡೆ।ದುಂ ಧರಿ।ತ್ರಿಯಂ.॥

(ಗುರುವೊಂದಾದಿಯೊಳುತ್ಪಲಂ)

೨–ಶಾರ್ದೂಲ ವಿಕ್ರೀಡಿತಂ ವೃತ್ತ.

"ಕಣ್ಗೊಪ್ಪಲ್ ಮಸಜಂಸತಂತಗಮುಮಾ ಶಾರ್ದೂಲ ವಿಕ್ರೀಡಿತಂ"

ಪ್ರತಿ ಪಾದದಲ್ಲಿಯೂ ೧೯ ಅಕ್ಷರಗಳು. 'ಮಸಜಸತತಂ–ಗು'

ಮ ಸ ಜ ಸ ತ

"ಕಣ್ಗೊಪ್ಪಲ್। ಮಸಜಂ। ಸತಂತ।ಗಮುಮಾ। ಶಾರ್ದೂಲ।

ತ ಗು

ವಿಕ್ರೀಡಿ। ತಂ"

ಉದಾಹರಣೆ:–

ಮಾಯಾಕಾ।ರ ಜಲೇ।ಶ ಪೋಲಿ।ಕೆಯುಮುಂ।ಟೇಂ ನಿನ್ನ। ವಿಸ್ತೀರ್ಣ।ಕಂ.

(ಗುರು ಮೊದಲ್ ಮೂರಾಗೆ ಶಾರ್ದೂಲಮಾ।)

೩–ಸ್ರಗ್ಧರೆ ವೃತ್ತ.

"ತೋರಲ್ ಮಂರಂಭನಂಮೂಯಗಣಮುಮದೆತಾಂ ಸ್ರಗ್ಧರಾವೃತ್ತಮಕ್ಕುಂ"

ಪ್ರತಿ ಪಾದದಲ್ಲಿಯೂ ೨೧ ಅಕ್ಷರಗಳಿವೆ. ಇದರ ಗಣವಿನ್ಯಾಸದಲ್ಲಿ ಬರುವ ಗಣಗಳು "ಮರಭನಯಯಯ"

ಮ ರ ಭ ನ

"ತೋರಲ್ ಮಂ।ರಂಭನಂ।ಮೂಯಗ।ಣಮುಮ।

ಯ ಯ ಯ

ದೆತಾಂಸ್ರ। ಗ್ಧರಾವೃ।ತ್ತಮಕ್ಕುಂ"।

ಉದಾಹರಣೆ

ಆ ರುದ್ರಾ।ಕ್ಷ್ಯಗ್ನಿ ಸಂ।ತಪ್ತನ।ನೆನೆ ಜ।ನರಾ ತಾ।ಪಮಂಪೊ।ರ್ಚಿಸುತ್ತುಂ।

(ಗುರು ನಾಲ್ಕಾಗಿರಲಂತು ಸೃಗ್ಧರೆ)

೪–ಮತ್ತೇಭ ವಿಕ್ರೀಡಿತ ವೃತ್ತ.

"ಸಭರಂನಂಮಯಲಂಗಮೂಬಗೆಗೊಳಲ್ ಮತ್ತೇಭ ವಿಕ್ರೀಡಿತಂ"

ಪ್ರತಿ ಪಾದದಲ್ಲಿಯೂ ೨೦ ಅಕ್ಷರಗಳು. ಗಣವಿನ್ಯಾಸದಲ್ಲಿ ಬರುವ ಗಣಗಳು 'ಸಭರನಮಯ–ಲಗು'

ಸ ಬ ರ ನ ಮ

"ಸಭರಂ।ನಂಮಯ।ಲಂಗಮೂ।ಬಗೆಗೊ।ಳಲ್ ಮತ್ತೇ।

ಯ ಲಗು

ಭವಿಕ್ರೀ। ಡಿತಂ"

ಉದಾಹರಣೆ
ಜಗದೊಳ್। ಸನ್ನಿದ।ಮಾದ ನಾ।ಳ್ನುಡಿಗ।ಳಿಂ ಛಂದ।ಕ್ಕೆಬರ್ಪ೯ಂ। ತು ನೆ-(ಟ್ಟಗೆ)
(ಲಘು ದ್ವಂದ್ವಂ ಗುರುದ್ವಂದಮಾಗಿರೆ ಮತ್ತೇಭ)

೫-ಮಹಾ ಸ್ರಗ್ಧರೆ ವೃತ್ತ.
"ಸತತಂನಂಸಂರರಂಗಂನೆರೆದೆಸೆಯೆ ಮಹಾ ಸ್ರಗ್ಧರಾವೃತ್ತಮಕ್ಕುಂ"
ಪ್ರತಿ ಪಾದದಲ್ಲಿಯೂ ೨೨ ಅಕ್ಷರಗಳ ಗಣವಿನ್ಯಾಸದಲ್ಲಿ ಬರುವ ಗಣಗಳು 'ಸತತನಸರರ-ಗು'

ಸ ತ ತ ನ ಸ
"ಸತತಂ।ನಂಸಂರ।ರಂಗಂನೆ।ರೆದೆಸೆ।ಯೆ ಮಹಾ ।
ರ ರ ಗು
ಸ್ರಗ್ಧರಾ।ವೃತ್ತಮ।ಕ್ಕುಂ

ಉದಾಹರಣೆ:-
ಇದುಲಾ।ಕ್ಷಾಗೇಹ। ದಾಹಕ್ಕೆ। ದುವಿಷ।ಮವಿಷಾ।ನ್ನಕ್ಕಿದಾ।ನಾಡಜೂ।ದಿಂ-।
(ಲಘುದ್ವಯತ್ರಿಗುರುವಿಂದಕ್ಕುಂ ಮಹಾಗೃಸ್ಥರಾ।)

೬-ಚಂಪಕಮಾಲಾ ವೃತ್ತ.
"ನಜಭಜಜಂಜರಂ ಬಗೆಗೊಳುತ್ತಿರೆ ಚಂಪಕಮಾಲೆಯೆಂದಪರ್"
ಪ್ರತಿ ಪಾದದಲ್ಲಿಯೂ ೨೧ ಅಕ್ಷರಗಳು ಗಣವಿನ್ಯಾಸದಲ್ಲಿ ಬರುವ ಗಣಗಳು 'ನಜಭಜಜಂಜರ'

ನ ಜ ಬ ಜ ಜ ಜ
"ನಜಭ।ಜಜಂಜ।ರಂ ಬಗೆ।ಗೊಳುತ್ತಿ। ರೆಚಂಪ।ಕಮಾಲೆ।
ರ
ಯೆಂದಪರ್"।

ಉದಾಹರಣೆ:
ಗುರುವಿ।ನನೆತ್ತ।ರಂ ಕುಡಿ।ವೆನಪ್ಪೊ।ಡೆವಂದ್ವಿ।ಜವಂಶ।ಜಂನಿಜಾ॥
(ಲಘು ನಾಲ್ಕು ಚಂಪಕಮಿವು)

***

ಗುರುಪೂರ್ಣಿಮೆ ದಿನದಲ್ಲಿ ಗುರುಸ್ಮರಣೆ

–ರೇಣುಕಾ ದೇಸಾಯಿ

ಓ!!! ಇವರು ನಮ್ಮವರೇ? ಎನ್ನುವ ಉದ್ಗಾರ ತನ್ನಷ್ಟಕ್ಕೆ ತಾನೇ ಮೂಡುತ್ತದೆ ಮತ್ತು ಪ್ರಶ್ನೆ ದೊಡ್ಡದಾಗಿ ಎದ್ದು ನಿಲ್ಲುತ್ತದೆ. ಶ್ರೀಯುತ ಇಜೇರಿಯವರು ಪ್ರಸ್ತುತಪಡಿಸುತ್ತಿರುವ, ಕನ್ನಡ ಮತ್ತು ಸಸಕಸ ವೇದಿಕೆ '**ನಾವು ಮತ್ತು ನಮ್ಮವರು**' ಲೇಖನಮಾಲೆ, ಎಲ್ಲರನ್ನೂ ಬೆರಗುಗೊಳಿಸುತ್ತಿದೆ ಮತ್ತು ಸಾಧಕರ ಮೇಲೆ ಗೌರವಭಾವ ತನ್ನಷ್ಟಕ್ಕೆ ತಾನೇ ಸ್ಫುರಿಸುತ್ತದೆ.

ಇತ್ತೀಚಿಗಷ್ಟೆ ಶ್ರೀಯುತ ಬಿ.ಎಸ್.ಚಂದ್ರಶೇಖರ ಅವರ ಬಗೆಗಿನ ಪರಿಚಯ ಓದಿ, ಇವರೊಬ್ಬ ಕವಿ, ಪ್ರಬಂಧಕಾರ, ವಿಮರ್ಶಕ, ಸಂಪಾದಕ, ಚಿಂತಕ, ಗಣಿತಜ್ಞ, ಜ್ಯೋತಿಷಿ, ತತ್ವಜ್ಞಾನಿ, ಸಂಗೀತ ಶಾಸ್ತ್ರಜ್ಞ, ಬ್ಯಾಂಕಿಂಗ್ ಬೋಧಕ, ಉಪನ್ಯಾಸಕ, ಲೆಕ್ಕಪರಿಶೋಧಕ, ಕನ್ನಡ ಸಂಘದ ಚಟುವಟಿಕೆಗಳ ಸಂಘಟಕ, ರಸಪ್ರಶ್ನೆ ಸಂಚಾಲಕ, ಸಾಹಿತ್ಯ ದಾಸೋಹ ವ್ಯವಸ್ಥಾಪಕ, ಅಂಕಣಕಾರ, ನಿಘಂಟುತಜ್ಞ, ೧೦೦೦ ಮಕ್ಕಳಿಗೆ ರಾಮಾಯಣ ಪರೀಕ್ಷೆ ನಡೆಸಿದವ, ಸಮಾಜ ಪರಿವರ್ತಕ .... ಇತ್ಯಾದಿ... ಇತ್ಯಾದಿ... ಇಷ್ಟಲ್ಲದೆ, ಶ್ರೀ ಬಿ.ಎಸ್.ಚಂದ್ರಶೇಖರ್ ಅವರು ಉತ್ತಮ ಚದುರಂಗ ಹಾಗೂ ಟೇಬಲ್ ಟೆನ್ನಿಸ್ ಆಟಗಾರರೂ ಆಗಿದ್ದಾರೆ ಎನ್ನುವ ವಿಷಯ ಅವರ ಮತ್ತೊಬ್ಬ ಸನ್ಮಿತ್ರರಿಂದ ಈ ವೇದಿಕೆಯಲ್ಲೇ ಗೊತ್ತಾಗಿದ್ದು. ಯಾವುದೇ ವಿಷಯದ ಬಗ್ಗೆ ಅವರು ಗಮನಹರಿಸಿದರೆ, ಅದನ್ನು ಆಮೂಲಾಗ್ರವಾಗಿ ಅಧ್ಯಯನ ನಡೆಸಿ ಅದರ ಮೇಲೆ ಸಂಪೂರ್ಣ ಪ್ರಭುತ್ವ ಸಾಧಿಸುವವರೆಗೆ ನಿರಂತರವಾಗಿ ಪರಿಶ್ರಮಿಸುತ್ತಾರೆ. ಅದೇ ಅವರ ಯಶಸ್ಸಿನ/ಸಾಧನೆಯ ರಹಸ್ಯ ಎಂಬುದು ಅವರ ಪರಿಚಯ ಮತ್ತು ಇತರ ವೇದಿಕೆ ಸದಸ್ಯರು ಬರೆದ ಬರಹದಿಂದ ವೇದ್ಯವಾಗುತ್ತದೆ. ಅಂತಹ ಕುಶಲಮತಿಯನ್ನು ಭಗವಂತ ಅವರಿಗೆ ಕರುಣಿಸಿದ್ದಾನೆ. ಹಾಗಿಲ್ಲದಿದ್ದರೆ ನಾಡಿನ ಹೆಸರಾಂತ ಸಾಹಿತಿ, ನಗೆಲೋಕದ ಸಾಮ್ರಾಜ್ಞಿಯವರು "ಎರಡೇ ವರ್ಷದಲ್ಲಿ ನನ್ನ ಹೆಸರಲ್ಲಿರುವ ದಾಖಲೆಯನ್ನು ಉಡಿಸ್ ಮಾಡಿ ಉಪ್ಪಿಟ್ಟು ತಿನ್ನಿಸದವರು" ಎನ್ನುತ್ತಿದ್ದರೆ?

ಇಂತಹ ಮೇರು ವ್ಯಕ್ತಿ ನನಗೆ ಚಿರಪರಿಚಿತರು ಎನ್ನುವ ಹೆಮ್ಮೆ ಬಹು ದೊಡ್ಡದು. ಇವರು ನಮ್ಮ ಸ್ಟೇಟ್ ಬ್ಯಾಂಕ್ ಸಂಸಾರದ ಸದಸ್ಯರು, ಇಲ್ಲಿ ನಾನೂ ಒಬ್ಬಳು ಎನ್ನುವ ಸಂತೋಷ ನನ್ನದು. ನಮ್ಮ ಬ್ಯಾಂಕ್ ದೊಡ್ಡದು, ಲಕ್ಷಾಂತರ ಜನ ಕೆಲಸ ಮಾಡುವ ಸಂಸ್ಥೆ. ಇಲ್ಲಿ ಎಲ್ಲರೂ ಎಲ್ಲರಿಗೂ ಪರಿಚಯವಿರೋಲ್ಲ, ಆದರೆ ಈ ಸಸಕಸ ವೇದಿಕೆ ಇಂತಹ ಎಲ್ಲಾ ನಕ್ಷತ್ರಗಳನ್ನು ಒಂದು ಗೂಡಿಸಿದೆ, ಇಂತಹ ನಕ್ಷತ್ರಪುಂಜಗಳ ನಡುವೆ ವಿಹರಿಸುತ್ತಿರುವದು ನನ್ನ ಭಾಗ್ಯ. ಶ್ರೀಯುತರು ನನಗೆ ಪರಿಚಯವಾಗಿದ್ದು ನಾನು ನಿವೃತ್ತಿ ಹೊಂದಿದ ಮೇಲೆ. ಆಗ ಎನ್.ಆರ್.ಕಾಲೋನಿಯಲ್ಲಿರುವ ಬಿ.ಎಂ.ಶ್ರೀ ಕಲಾಭವನದಲ್ಲಿ ನಿಯಮಿತವಾಗಿ ಎರಡನೇ ಶನಿವಾರ ನಡೆಯುತ್ತಿದ್ದ ಸಾಹಿತ್ಯ ದಾಸೋಹದ ಕಾರ್ಯಕ್ರಮದಲ್ಲಿ. ಮೊದಲಸಲ ದಾಸೋಹದಲ್ಲಿ ನಾನು ಪ್ರಸ್ತುತಿ ಪಡಿಸಿದ ಕವನವನ್ನು ಕೇಳಿ, ಕಾರ್ಯಕ್ರಮದ ನಂತರ ಮೆಚ್ಚುಗೆಯ ಮಾತನಾಡಿದರು, ಮುಂದಿನ ತಿಂಗಳುಗಳಲ್ಲಿ ಒಂದಿಷ್ಟು ಸಲಹೆ ಕೊಟ್ಟು ಬರೆಯಲು ಪ್ರೋತ್ಸಾಹಿಸಿದರು, ನಂತರ ನಾನು ಸಂಘದ ವ್ಯಕ್ತಿಗಳು ನಡೆಸಿಕೊಂಡು ಬರುತ್ತಿರುವ ಒಂದು ಪ್ರಕಲ್ಪವಾದ IMCTF (Initiative for Moral and Cultural Training Foundation) ಅದರ ಕೈಪಿಡಿಯನ್ನು ಕನ್ನಡಕ್ಕೆ ಅನುವಾದಿಸುವ ಕೆಲಸ ಕೈಗೊಂಡೆ, ಆ ಸಮಯದಲ್ಲಿ ಸಣ್ಣ ಸಣ್ಣ ವಿಷಯಕ್ಕೆ, ಶಬ್ದಕ್ಕೆ ಸತತವಾಗಿ ಅವರ ನೆರವು ಪಡೆದೆ. ಯಾವುದೇ ಸಮಯದಲ್ಲಿ ಕರೆ ಮಾಡಿದರೂ ಸ್ವಲ್ಪವೂ ಅಸಮಾಧಾನ ತೋರದೆ ನನಗೆ ಸಹಾಯ ಮಾಡಿದ್ದರು.

ಜುಲೈ ೨೦೨೨ರಲ್ಲಿ ನಮ್ಮ ಭಾರತೀಯ ಸ್ಟೇಟ್ ಬ್ಯಾಂಕಿನ ಸಮುದಾಯ ಭವನದಲ್ಲಿ ಶ್ರೀ ರಂಗರಾಜನ್ ಬರೆದ 'ಇಬ್ಬನಿ', ಅದಕ್ಕೆ ಪ್ರತಿಯಾಗಿ ಬೆಂ. ಶ್ರೀ. ರವೀಂದ್ರ ಅವರದು ಬರೆದ 'ಬನಿ' ಪುಸ್ತಕ ಹಾಗೂ ಎಂ.ಜಿ.ವೆಂಕಟೇಶಮೂರ್ತಿ ಅವರು ಬರೆದ 'ಬ್ಯಾಂಕಿಂಗ್ ಲೋಕದ ಪ್ರತಿಭಾವಂತರು' ಪುಸ್ತಕಗಳ ಬಿಡುಗಡೆ ಸಮಾರಂಭ ನಡೆಯಿತು. 'ಬ್ಯಾಂಕಿಂಗ್ ಲೋಕದ ಪ್ರತಿಭಾವಂತರು' ಪುಸ್ತಕ ಬಿಡುಗಡೆ ಶ್ರೀ ಬಿ. ಎಸ್. ಚಂದ್ರಶೇಖರ ಅವರಿಂದ. ಆ ಸಮಾರಂಭದ ವರದಿ ಬರೆಯುವ ಜವಾಬ್ದಾರಿ ನನ್ನದಾಗಿತ್ತು, ಹೀಗಾಗಿ ಮುಂದಿನ ಸಾಲಿನಲ್ಲಿ ಕುಳಿತು ಎಲ್ಲವನ್ನೂ ಕೂಲಂಕುಷವಾಗಿ ಕೇಳಿ, ಟಿಪ್ಪಣಿ ಮಾಡಿಕೊಳ್ಳುತ್ತಿರುವದನ್ನು (ರೆಕಾರ್ಡಿಂಗ್ ಇರಲಿಲ್ಲ), ನೋಡಿದ್ದ ಚಂದ್ರಶೇಖರವರು ನಂತರ ನಾನು ಬರೆದ ವರದಿಯನ್ನು

ನನಗೆ ಕರೆಮಾಡಿ ತರಿಸಿಕೊಂಡು ಓದಿ, ಅದನ್ನು ಮೆಚ್ಚಿ ಅವರು ಬರೆದ ನುಡಿಗಳನ್ನು ಇನ್ನೂ ನನ್ನ ಹತ್ತಿರ ಸಂಗ್ರಹಿಸಿ ಇಟ್ಟುಕೊಂಡಿದ್ದೇನೆ. ತದನಂತರ ಅವರೇ ಹೇಳುತ್ತಾರೆ "ಶ್ರೀಯುತ ಮನೋಹರ್ ಗೋಖಲೆಯವರು ಆ ವರದಿ ನನಗೆ ಕಳಿಸಿದ್ದರು, ಓದಿದ್ದೆ, ಆದರೂ ನಿಮ್ಮಿಂದ ತರಿಸಿಕೊಂಡು ಮತ್ತೊಮ್ಮೆ ಓದಿದೆ" ಎಂದು ಹೇಳಿ, ನನಗೆ ಪ್ರೋತ್ಸಾಹದ ನುಡಿ ನುಡಿದದ್ದು ನನಗೆ ಅತೀವ ಸಂತೋಷವಾಗಿತ್ತು.

೨೦೨೦ರಲ್ಲಿ ಕೋವಿಡ್ ಕಾರಣ ವೇದಿಕೆಯಲ್ಲಿ ನಡೆಸುವ ಕಾರ್ಯಕ್ರಮಗಳು ರದ್ದಾದವು, ಕಾಲಾಯ ತಸ್ಮೈ ನಮಃ. ಅಂತರ್ಜಾಲದಲ್ಲಿ ದಾಸೋಹ ನಡೆಸುವದು ಇಂದಿಗೂ ತಪ್ಪದೇ ಮುಂದುವರಿದುಕೊಂಡು ಬಂದಿದೆ. ಆದರೆ ಅಗಸ್ಟ್ ೨೦೨೨ರ ಎರಡನೇ ಶನಿವಾರ, ನಮ್ಮ ೨೦೦ನೇ ಸಾಹಿತ್ಯ ದಾಸೋಹವನ್ನು ಹಿಂದಿನಂತೆ ವೇದಿಕೆಯಲ್ಲಿ ನಡೆಸೋಣ, ಇದು ವೇದಿಕೆಯ ಒಂದು ಮೈಲಿಗಲ್ಲು, ಅದನ್ನು ಒಂದು ಕಾರ್ಯಕ್ರಮ ರೂಪದಲ್ಲಿ ವಿಜೃಂಭಣೆಯಿಂದ ಆಚರಿಸುವದು ಎಂದಾಯ್ತು. ಆಗ ನಾನು, 'ವೇದಿಕೆಯು ಕನ್ನಡ ಸಾಹಿತ್ಯವನ್ನು ಪ್ರೋತ್ಸಾಹಿಸುವ ಎಲ್ಲಾ ಕೆಲಸ ಮಾಡಿದೆ, ಜೊತೆಗೆ ಪುಸ್ತಕ ಪ್ರಕಟಣೆ ಕೆಲಸಕ್ಕೂ ಕೈ ಹಾಕಿ ಅದನ್ನು ಹೇಗೆ ನಿಭಾಯಿಸಿತು' ಎನ್ನುವ ವೇದಿಕೆಯ ಹಿರಿಮೆಯ ವಿವರಣೆ ಕೊಡಲೋಸುಗ "ಕೃತಿಯು ರೂಪಗೊಂಡ ಮರು ನೆನಪು" ಎನ್ನುವ ಒಂದು ಬರಹ ತಯಾರಿಸಿದೆ. ಅದು ಮತ್ತೆ ಚಂದ್ರಶೇಖರ್ ಅವರ ಕೃತಿ "ಸವಿಗನ್ನಡ ಸ್ತೋತ್ರ ಚಂದ್ರಿಕೆ". ಅದಕ್ಕೆ ಸ್ವಲ್ಪ ಮಾಹಿತಿ ಬೇಕಾಗಿತ್ತು, ಕರೆ ಮಾಡಿದೆ, ಆಗ ಶ್ರೀಯುತರು ಶಿವಮೊಗ್ಗದಲ್ಲಿ ಗ್ರಾಮೀಣ ಬ್ಯಾಂಕ್ ತರಬೇತಿ ಕಾರ್ಯಾಗಾರದಲ್ಲಿ ಪಾಠ ಮಾಡುತ್ತಿದ್ದವರು ತರಗತಿ ಮುಗಿದ ತಕ್ಷಣ ತಿರುಗಿ ಕರೆ ಮಾಡಿ ನನಗೆ ಬೇಕಾದ ಮಾಹಿತಿ ಕೊಟ್ಟರು, ಆದರೆ ಅವರ ಕೆಲಸಕ್ಕೆ ತೊಂದರೆ ಕೊಟ್ಟದ್ದಕ್ಕೆ ಒಂದು ಸಣ್ಣ ಅಸಮಾಧಾನ ಕೂಡಾ ತೋರಿಸಲಿಲ್ಲ, ನಾನು ಈ ಪ್ರಸಂಗ ಹೇಳುವ ಉದ್ದೇಶವೇ ಇದು, ಅವರಲ್ಲಿರುವ ಅಪಾರ ತಾಳ್ಮೆ, ಪ್ರತಿಭಾವಂತರಾದ ಅವರು ಯಾವ ಹಮ್ಮು-ಬಿಮ್ಮು ಇಲ್ಲದೆ, ಬರವಣಿಗೆಯಲ್ಲಿ ಕಿರಿಯರಾದ ನಮ್ಮೊಡನೆ ಅತ್ಯಂತ ಸ್ನೇಹದಿಂದ ನಡೆದುಕೊಳ್ಳುತ್ತಿರುವ ರೀತಿ ಅನುಕರಣೀಯ ಹಾಗೂ ಆಧರಣೀಯ. ನಂತರ ಆ ಬರವಣಿಗೆಯ ಬಗೆಗೆ ಅವರ ಅನಿಸಿಕೆ ಅದಕ್ಕೆ ನನ್ನ ಸಮಜಾಯಿಷಿ ನಡೆದೇ ಇತ್ತು.

ನಂತರ ಮೇ ೨೦೨೩ರಲ್ಲಿ ಶ್ರೀ ಬಿ.ಎಸ್.ಚಂದ್ರಶೇಖರ್ ಬರೆದಿರುವ "ಮಹಾನಾರಾಯಣ ಉಪನಿಷತ್ತು" ಪುಸ್ತಕ ಬಿಡುಗಡೆಗೆ ನನಗೂ ಆಹ್ವಾನವಿತ್ತು. ಅದು ಸಹ ನನಗೆ ಹೆಮ್ಮೆಯ ವಿಷಯ. ಆಧ್ಯಾತ್ಮಿಕ ಹಿನ್ನಲೆಯಲ್ಲಿ ವೇದಘೋಷದೊಂದಿಗೆ ಪ್ರಾರಂಭವಾಗಿ ನಂತರ ಪುಸ್ತಕ ಬಿಡುಗಡೆಮಾಡಿದ್ದ ಸಮಾರಂಭ ವೀಕ್ಷಿಸಿದ್ದು ನನ್ನ ಜೀವನದಲ್ಲಿ ಮೊದಲಸಲ. ಹೀಗಾಗಿ ಧನ್ಯತೆಯ ಭಾವ ಉಂಟುಮಾಡಿತ್ತು, ನಂತರ ಆ ಸಮಾರಂಭದ ಬಗೆಗೆ ನಮ್ಮ ಸ್ಟೇಟ್ ಬ್ಯಾಂಕ್ 'ಪೆನ್ಷನರ್ಸ್ ಮ್ಯುಸಿಂಗ್ಸ್'ನಲ್ಲಿ ಬರೆದಿದ್ದೆ, ಅಂದು ಆ ಪುಸ್ತಕದ ಬಗೆಗೆ ಶ್ರೀ ಜನಾರ್ದನ ತುಂಗ ಮಾತನಾಡಿದ್ದರು, ಅವರ ಸಮ್ಮತಿ ಪಡೆದು ಆ ಪುಸ್ತಕದ ಬಗೆಗೆ ಜನಾರ್ದನ ತುಂಗ ಹೀಗೆ ವಿಶ್ಲೇಷಣೆ ಮಾಡಿದರು ಎಂದು ಬರೆದೆ. ಕಾರಣ ಅಂತಹ ಉಪನಿಷತ್ತು ಪುಸ್ತಕದ ಬಗೆಗೆ ಬರೆಯುವ ಸಾಮರ್ಥ ನನ್ನಲ್ಲಿ ಇಲ್ಲ. ಆ ನನ್ನ ಬರವಣಿಗೆ ಬಗೆಗೆ, ಕಾರ್ಯಕ್ರಮದ ವರದಿ ತುಂಬಾ ಚೆನ್ನಾಗಿ ಬರೆದು ಪ್ರಚಾರ ಕೊಟ್ಟಿರಿ, ನನ್ನ ಮಾಜಿ ಸಹೋದ್ಯೋಗಿಗಳು ನನಗೆ ಕರೆಮಾಡಿ ಅಭಿನಂದಿಸಿದರು ಎಂದು ತಮ್ಮ ಸಂತೋಷ ವ್ಯಕ್ತಪಡಿಸಿದರು.

ಮೇಲಿನ ಸಂದರ್ಭಗಳನ್ನು ನಾನು ಏಕೆ ಉದಾಹರಿಸಿ ಬರೆದೆ ಎಂದರೆ, ಆಗ ಶ್ರೀಯುತರ ಬಗೆಗೆ, ಅವರ ಸಾಧನೆಗಳ ಬಗೆಗೆ ಗೊತ್ತಿರಲಿಲ್ಲ, ಅವರು ಇಷ್ಟೊಂದು ಕೆಲಸಕಾರ್ಯಗಳಲ್ಲಿ ತೊಡಗಿಸಿಕೊಂಡ ವ್ಯಕ್ತಿ ಎಂದೂ ಗೊತ್ತಿರಲಿಲ್ಲ, ಆದರೆ ಈಗ ಇಜೇರಿಯವರು ಬರೆದ ಅವರ ಅಘಾದವಾದ ಕೆಲಸ, ಸಾಧನೆಗಳ ವಿವರ ಓದಿದಾಗ ನನಗೆ ಸಂಕೋಚವಾಯ್ತು, ಎಷ್ಟೊಂದು ಮೇರುವ್ಯಕ್ತಿ, ಸಾಧಕರು ಒಂದೇ ಒಂದುಸಲ ಅಸಮಾಧಾನ ತೋರಿಸದೆ ನನ್ನಂತಹ ಸಾಮಾನ್ಯಳಿಗಾಗಿ ಸಮಯ ಕೊಟ್ಟರು, ಅವರ ಅಮೂಲ್ಯ ಸಮಯ ಹಾಳುಮಾಡಿ ನಾನು ತಪ್ಪು ಮಾಡಿದ್ದೇನಾ? ಎನ್ನುವ ಪ್ರಶ್ನೆ ಕಾಡಿತು ಹೀಗಾಗಿ ಈ ಮೂಲಕ ಅವರಿಗೆ ಕ್ಷಮೆ ಕೋರುವದಕ್ಕಾಗಿ ಈ ಬರಹ, ಅವರಿಗೆ ನನ್ನ ಅನಂತ ಧನ್ಯವಾದಗಳು.

ಗುರು ಸಮಾನರಿಗೆ ನಮನಗಳು.

***



ದಲಾಯಿ ಎಂಬ ಸಾಗರ

– ಬೆಂ.ಶ್ರೀ. ರವೀಂದ್ರ

ನನಗೆ ತೊಂಭತ್ತೇ ಅಲ್ಲ ಅಲ್ಲ, ಒಂಭತ್ತು.
ಮುಗ್ದ ಮೋಹಕ ನಗು.. ಹ್ಹ..ಹ್ಹಿ...ಹ.. ಹ..
ಧನ್ಯವಾದ ಬುದ್ಧನಿಗೆ ವಂದನೆಗಳು

ಲ್ಹಾಸಾದ ಎತ್ತರೆತ್ತರ ಗೋಡೆಗಳ ಮೇಲೆ
ಹೆಣೆದ ಕಬ್ಬಿಣದ ತಂತಿಗಳ ಬೇಲಿ
ಬೇಹುಜಾಲದ ಕಬಂಧಬಾಹು
ಬಂದೂಕು ಮೂತಿಗಳು ಅರಸುವ ಕಣ್ಣುಗಳು
ಬೂಟುಗಾಲುಗಳ ಠಳಾರವ ರಕ್ಕಸರ ಮೊಕ್ಕಾಂ
ತಂಬೆಟ್ಟದ ಬುದ್ದಬಸ್ತಿಗೆ ಕೆಂಬಾವುಟದ ಮುಕುಟ
ಕೆಂಪು ಮುಗುಟದ ಕಂಪು ಹರಿವ ಹುನ್ನಾರ
ನಿಡುಸುಯ್ವ ಬಿಸಿಯುಸಿರು
ಬೆದರಿದ ಹರಿಣಗಳ ಚಿತ್ತ ಕೈಲಾಸ ಪರ್ವತದತ್ತ

ಬೆಟ್ಟದಲಿಹ ತಿಬೆಟ್ಟು ಎತ್ತರದ ಪ್ರಸ್ಥಭೂಮಿ
ಜಗದ ಮಾಡು ದೇವತೆಗಳ ಬೀಡು
ಎಲ್ಲ ನಾನೇ ಎಲ್ಲಡೆ ನಾನೆನ್ನುವ ದುರಾಕ್ರಮಿ
ಸಾಮ್ರಾಜ್ಯಶಾಹಿಯ ಹಿಂಸೆಗೆ ತುತ್ತು

ಮತ್ತೆ ಬರುವೆನೆಂದು ಮಾತು ಕೊಟ್ಟು
ಬಿಟ್ಟೆ ಲ್ಹಾಸಾ ಕುದುರೆ ಹತ್ತಿ
ಯ್ಯಾಕ್‌ಗಳನೇರಿ ಬುದ್ಧನೂರಿಗೆ
ಕಾಡುಮೇಡಲಿ ಅಪಾಯದ ನೆರಳಲಿ
ನಡೆದೇ ನಡೆದೇ ಹದಿಮೂರು ದಿನ
ತೋಳು ತೆರೆದಿತ್ತು ಧರ್ಮಶಾಲಾ ಮನ ವಿಶಾಲ
ಕರುಣ ಆಶ್ರಯ ಆಶ್ವಾಸನ ಆಸನ
ಆಶನ ಧೈರ್ಯ ವಿಶ್ವಾಸ ಪ್ರೇಮಸಿಂಚನ

ಎದುರಿಸಿ ನಿಂದೆ ವಿಶ್ವ ಸುತ್ತಿದೆ ಇದೋ
ಶಾಂತಿ ಕರುಣೆ ಧ್ಯಾನಿಸು ವಿಪಾಸನಾ
ಡ್ರ್ಯಾಗನ್ ದೈತ್ಯನಿಗೆ ಸತ್ಯದುಪದೇಶ
ಅವನೇನು ಅಂಗುಲಿಮಾಲನೇ !
ಆರು ದಶಕದಿಂ ಬೆಳಗಿದೆ ಬುದ್ಧನಸ್ಮಿತೆ
ಬುದ್ಧಂ ಶರಣಂ ಗಚ್ಛಾಮಿ

ನೀನೊಂದು ಆಯಸ್ಕಾಂತ
ದುಂಡು ಮುಖದಲಿ ಮಿಂಚುಗಣ್ಣು
ಕನ್ನಡಕದಿಂದ ಸುರಿವ ತಿಳಿ ಝರಿ
ತುಟಿಯಲರಳಿದ ಮುಗ್ದ ಅಕ್ಕರದ ನಗು
ಏರಿ ಸಕ್ಕದ ಸೋಪಾನ ತಪಿಸಿ ಪೂಜಿಸಿ
ಸಜ್ಜನರ ಕೂಡಿಸಿ ಕಟ್ಟಿದೆ ಪ್ರತಿರೋಧ
ಗೆಲುವು ನಿನ್ನದೆ ಸಾಗರೋಪಮಾನ
ಸಂಘಂ ಶರಣಂ ಗಚ್ಛಾಮಿ

ಸಾರಿದೆ ಭಾರತವು ಧರ್ಮೋ ರಕ್ಷತಿ ರಕ್ಷಿತಃ
ಸಾರಿದೆ ಭಾರತವು ಅಹಿಂಸಾ ಪರಮೋಧರ್ಮಃ
ಸಾರಿದೆ ಭಾರತವು ಸತ್ಯಮೇವ ಜಯತೇ
ಸಾರಿದೆ ಭಾರತವು ಧೈರ್ಯಂ ಸರ್ವತ್ರ ಸಾಧನಂ
"ಅನ್ಯಾಕೆಂದೆಂದು ಬಾಗದೆಚ್ಚರ'ವಿಟ್ಟ
ಮಹಾಬುದ್ಧ ಸ್ತೋತ್ರವೇ ದಲಾಯಿ ಲಾಮಾ
ಧರ್ಮಂ ಶರಣಂ ಗಚ್ಛಾಮಿ

ನಗುತ್ತಾರೆ ಕೈ ಎತ್ತಿ ಹರಸುತ್ತಾರೆ
ನುಡಿಯುತ್ತಾರೆ ನಾನು ಬದುಕುತ್ತೇನೆ
ಈ ಶರೀರದಲಿ ಇನ್ನೂ ನಲವತ್ತು ವರ್ಷ
ಹುಟ್ಟದ ಸಾಯದ ಪೊರೆ ಕಳಚಿ ಹೊಸದಾಗುವ
ಒಂದು...ಎರಡು... ಸದ್ಯ ಹದಿನಾಕು
ಜನಮನದರಳು ದಲಾಯಿ ಲಾಮಾ
ಅಲವತ್ತುಕೊಳ್ಳಲಿ ಡ್ರ್ಯಾಗನ್ ಮಾಮಾ

***

ಒಂದು ಕಥೆಯ ಕಥೆ – ಓ ಹೆನ್ರಿ

– ವಿಠ್ಠಲ. ಇಜೇರಿ

ವಿಲಿಯಂ ಸಿಡ್ನಿ ಪೋರ್ಟರ್ (1862–1910) ಅವರು 'ಓ ಹೆನ್ರಿ' ಕಾವ್ಯನಾಮದಿಂದ ಕಥೆ, ವಿಶೇಷವಾಗಿ ಸಣ್ಣ ಕತೆಗಳನ್ನು ಬರೆಯುತ್ತಿದ್ದರು. ಓದು ಮುಗಿಸಿ ತಮ್ಮ ಚಿಕ್ಕಪ್ಪನ ಔಷಧಾಲಯದಲ್ಲಿ ಕೆಲಸ ಮಾಡುತ್ತಿದ್ದರು. ಮಾರ್ಚ್ 1862ರಲ್ಲಿ ಟೆಕ್ಸಾಸ್‌ಗೆ ತೆರಳಿದ ಅವರು ನಂತರ ಆಸ್ಟಿನ್ನಲ್ಲಿ ವಾಸಮಾಡಿದರು. ಅಲ್ಲಿ ಲ್ಯಾಂಡ್ ಬ್ಯಾಂಕ್ ನಲ್ಲಿ ಕೆಲಸ ಮಾಡುತ್ತಾ ಚಿಕ್ಕ ಕಥೆಗಳನ್ನು ಬರೆಯಲಾರಂಭಿಸಿದರು. ಅವರ ಸುಪ್ರಸಿದ್ದ ಕತೆಗಳು –

ದಿ ಗಿಫ್ಟ್ ಆಫ್ ದಿ ಮ್ಯಾಗಿ,
ದಿ ರಾನ್ಸಮ್ ಆಫ್ ರೆಡ್ ಚೀಫ್.
ದಿ ಕಾಪ್ ಅಂಡ್ ದಿ ಅಂಥೇಮ್
ಎ ರಿಟೈರ್ಡ್ ರಿಫಾರ್ಮಶನ್
ಎ ಸ್ಟ್ರೇಂಜ ಸ್ಟೋರಿ. – ಇತ್ಯಾದಿ.

ಓ ಹೆನ್ರಿ ತಮ್ಮ ಅತ್ಯುತ್ತಮ ಕಥೆ, "ಎ ಗಿಫ್ಟ್ ಆಫ್ ಮ್ಯಾಗಿ" ಕಥೆ ಬರೆದ ಇಪ್ಪತ್ತು ವರ್ಷಗಳ ನಂತರ "ಎ ಸ್ಟ್ರೇಂಜ್ ಸ್ಟೋರಿ" ಕಥೆ ಬರೆದರು. ಈ ಕತೆಯಲ್ಲಿ ಇಪ್ಪತ್ತು ವರ್ಷಗಳದ್ದು ಮಹತ್ವದ ಪಾತ್ರವಿದೆ. ಈ ಕಥೆಯಲ್ಲಿ "ಸ್ಟ್ರೀಟ್ ಕಾರ್" ಎಂಬ ವಾಹನಕ್ಕೆ (ರಸ್ತೆಯ ಮೇಲೆ ಇರುವ ಹಳಿಗಳ ಮೇಲೆ ಓಡುವ ವಾಹನ, ಟ್ರಾಮ್ ಎಂದು ಕರೆಯಬಹುದು. ಕತೆಯ ನಾಯಕ ಸ್ಮೂದರ್ಸ್ ಮಗಳ ಕಾಯಿಲೆಗಾಗಿ ಔಷಧ ತರಲು ಹೋದವನು ಮರಳಿ ಔಷಧಿಯೊಡನೆ ಬರುವಾಗ ಇಪ್ಪತ್ತು ವರ್ಷಗಳು ಉರುಳಿರುತ್ತವೆ. ಇಲ್ಲಿ ಆಸ್ಟಿನ್ ಪಟ್ಟಣದ "ಸ್ಟ್ರೀಟ್ ಕಾರ್" ಸೇವೆ ದುರ್ಭರವಾಗಿತ್ತು ಎಂದು ತಿಳಿಸಲು ಒಂದು ಮಾರ್ಮಿಕ ಕಥೆಯನ್ನು ಹೆನ್ರಿ ಬರೆದಿದ್ದಾರೆ. ಈ ಕಥೆಯಲ್ಲಿಯ ಸನ್ನಿವೇಶಗಳು ಕಾಕಾತಾಳೀಯ ಸನ್ನಿವೇಶ ಹೊಂದಿವೆ.

1880 ರ ವೇಳೆಗೆ ಆಷ್ಟಿನ್ ನಗರಕ್ಕೆ ಹೆನ್ರಿ ಬಂದಾಗ ಸ್ಟ್ರೀಟ್ ಕಾರ್ ಸೇವೆ ಹದಗೆಟ್ಟಿತ್ತು. ಕೆಲವು ಸಲ ಅವುಗಳಿಗಾಗಿ ಕಾಯುತ್ತ ಗಂಟೆಗಟ್ಟಲೆ ಕಾಯಬೇಕಿತ್ತು. ಏನಪ್ಪಾ ಬದುಕೆಲ್ಲ ಬೀದಿಯಲ್ಲೇ ಕಳೆಯಬೇಕೇ? ಅನಿಸುತ್ತಲಿತ್ತು. ಅದಕ್ಕಾಗಿ ವಿಡಂಬನೆಗಾಗಿ ಈ ಸ್ಟ್ರೈಂಜ್ ಸ್ಟೋರಿ ಬರೆದೆ ಎಂದು ಹೆನ್ರಿ ಹೇಳಿಕೊಂಡಿದ್ದಾನೆ.

ಕಥೆಯು ಅಮೇರಿಕಾದ ಟೆಕ್ಸಾಸ್ ರಾಜ್ಯದ ಆಷ್ಟಿನ್ ಪಟ್ಟಣದಲ್ಲಿ ಸ್ಮೂದರ್ಸ್ ಎಂಬ ಸುಸಂಸ್ಕೃತ ಕುಟುಂಬದಲ್ಲಿ ಸ್ಮೂದರ್ಸ್, ಅವನ ಪತ್ನಿ ಮತ್ತು ಮಗಳು ಮೂರೇ ಜನರಿದ್ದರು. ಒಮ್ಮೆ ಮಗಳಿಗೆ ವಿಪರೀತ ಹೊಟ್ಟೆನೋವು ಪ್ರಾರಂಭವಾಯಿತು. ಸ್ಮುದರ್ಸ್ ಹೆಂಡತಿಗೆ ಮಗುವನ್ನು ನೋಡಿಕೊಂಡಿರಲು ತಿಳಿಸಿ ಔಷಧಿ ತರಲು ಪಟ್ಟಣಕ್ಕೆ ಹೋದ. ಸ್ಮೂದರ್ಸ್ ಮರಳಿ ಔಷಧಿಯೊಡನೆ ಬರಲೇ ಇಲ್ಲ. ಸ್ವಲ್ಪ ಸಮಯದಲ್ಲಿ ಮಗಳ ಹೊಟ್ಟೆ ನೋವು ಕಡಿಮೆಯಾಯಿತು. ಆದರೆ ಸ್ಮೂದರ್ಸ್ ಮರಳಿ ಬರಲೇ ಇಲ್ಲ. ಅವನ ಮಡದಿ ಮೂರು ತಿಂಗಳು ಸ್ಮೂದರ್ಸ್ ದಾರಿ ಕಾದು ಅವನು ಬರದಿರಲು ಬೇರೊಬ್ಬನನ್ನು ಮದುವೆಯಾಗಿ ಸೆಂಟಿಯಾಗೋ ಪಟ್ಟಣ ಸೇರಿದಳು. ಕಾಲ ಕಳೆದು ಸ್ಮೂದರ್ಸ್ ಮಗಳು ಬೆಳೆದು 25 ವರ್ಷದ ತರುಣಿ ತನ್ನ ಮನಸ್ಸಿಗೆ ಬಂದ ಯುವಕನನ್ನು ಮದುವೆಯಾಗಿ ತನ್ನ ತಂದೆ ಇದ್ದ ಆಷ್ಟಿನ್ ಮನೆಗೆ ಬಂದು ನೆಲಿಸಿದಳು. ಒಂದು ದಿನ ರಾತ್ರಿ ಆಕೆಯ ಮಗಳಿಗೆ ಸಿಕ್ಕಾಪಟ್ಟೆ ಹೊಟ್ಟೆ ನೋವು. ಮಗು ಸಂಕಟದಿಂದ ಹೊರಳಾಡುವುದನ್ನು ನೋಡಲಾಗದೆ ಮಗುವಿನ ತಂದೆ "ಪಟ್ಟಣಕ್ಕೆ ಹೋಗಿ ಔಷಧಿ ತರುವೆ" ಅಂದ. ಆತನ ಮಡದಿಗೆ ತನ್ನ ತಂದೆ ಇಂಥದೇ ಪ್ರಸಂಗದಲ್ಲಿ ಹೋದವನು ಮರಳಿ ಬರಲಿಲ್ಲ. ಆದುದರಿಂದ ಗಂಡನಿಗೆ "ಬೇಡಿ, ಎಲ್ಲಿಗೂ ಹೋಗಬೇಕಿಲ್ಲ " ಎಂದು ಹೇಳಿ ತಡೆದಳು. ಮಗುವಿನ ಹೊಟ್ಟೆ ಮತ್ತಷ್ಟು ಸಂಕಟಕ್ಕಿಟ್ಟುಕೋಡಿತು. ತಂದೆಗೆ ತಡೆಯಲಾಗಲಿಲ್ಲ. ಔಷಧಿ ತರಲು ಹೊರಟೇಬಿಟ್ಟ. ಅಷ್ಟರಲ್ಲಿ ಬಾಗಿಲು ಶಬ್ದವಾಯಿತು. ಮಗಳು ಬಾಗಿಲು ತೆರೆದರೆ ಒಬ್ಬ ಗಡ್ಡ ಬೆಳಸಿದ ವಯಸ್ಸಾದ ಮುದುಕ ಔಷಧಿ ತೆಗೆದುಕೊಂಡು ಬಂದಿದ್ದ. ಇಪ್ಪತ್ತು ವರ್ಷಗಳ ಹಿಂದೆ ಮಗಳಿಗಾಗಿ ಔಷಧಿ ತರಲು ಹೋದವನು ಇಂದು ಮೊಮ್ಮಗಳಿಗೆ ಔಷಧಿ ತಂದಿದ್ದ ಮತ್ತು ಅದಕ್ಕೆ ಅವನು ಕೊಡುವ ಕಾರಣ ಸ್ಟ್ರೀಟ್ ಕಾರಿಗೆ ಕಾಯುತ್ತಲಿದ್ದೆ ಎಂಬುದಾಗಿರುತ್ತದೆ.

***

ಕನಿಷ್ಠ ಸತ್ಯ

- ಮಾಧುರಿ ಕೃಷ್ಣ

ಅದು ಭಾರತೀಯರು ಕಾಲಾಂತರದಿಂದ ಅನೂಚಾನವಾಗಿ ಆಚರಿಸಿಕೊಂಡು ಬಂದಿರುವ ದೇವಿಯ ಆರಾಧನೆಯ ನವರಾತ್ರಿಯ ಪೂಜಾಕಾಲ. ಅಂದು ಅವರಿಬ್ಬರನ್ನೂ ಎದುರುಬದುರಾಗಿ ಊಟಕ್ಕೆ ಕೂರಿಸಿದ್ದರು. ಕುಡಿಬಾಳೆಲೆಯಲ್ಲಿ ವಿವಿಧ ಭಕ್ಷ್ಯಭೋಜ್ಯಗಳು ಒಂದೊಂದಾಗಿ ಬಡಿಸಲ್ಪಡುತ್ತಿದ್ದುವು. ಎಲ್ಲರ ಕಣ್ಣೂ ಅಂದು ಈ ಎಳೆಯರ ಕಡೆಗೇ ಇತ್ತು. ವರಸಾಮ್ಯ ಸುಂದರವಾಗಿತ್ತು.. ಕುಲ ಸಂಪ್ರದಾಯಗಳು ಹೊಂದಾಣಿಕೆಯಾಗಿ ಜಾತಕಾನುಕೂಲವೂ ಆಗಿತ್ತು. ನಿಖರತೆಯಿಂದ ಕೂಡಿದ ದೈವಿಕ ಕೃಪೆಯು ರೋಮಾಂಚನದ ಹಗುರ ಖುಷಿಯಾಗಿ ಇಬ್ಬರನ್ನೂ ಸಾದ್ಯಂತ ಮುದಗೊಳಿಸುತಿತ್ತು.

ಅಂದು ದೇವಿಗೆ ಅತಿ ಪ್ರಿಯ ಭಕ್ಷ್ಯವಾದ 'ಅತಿಮಧುರ' ಎಂಬ ಸಿಹಿ ನೈವೇದ್ಯ! ಮನೆಯ ಯಜಮಾನರಾದ ಶ್ರೀಯುತ ಪುಟ್ಟು ಉಪಾಧ್ಯಾಯರು ತಾವೇ ಸ್ವತಹ ಬಂದು ಭವಿಷ್ಯದ ಈ ನವಜೋಡಿಗೆ ಸಿಹಿ ಬಡಿಸಿ ಹಾರೈಸಿದರು. ಲಜ್ಜೆಯಿಂದ ಕೆಂಪುಕೆಂಪಾದ ಎಳೆ ತರುಣಿ ನಾಚುತ್ತ ನಾಚುತ್ತಲೇ ಮೊದಲ ಮೂರು ಬೆರಳುಗಳಿಂದ 'ಅತಿಮಧುರ'ವನ್ನು ಮೃದುವಾಗಿ ಎತ್ತಿ ಭಕ್ತಿಯಿಂದ ಬಾಯಿಗಿಟ್ಟಳು. ಮರುಕ್ಷಣಕ್ಕೆ ಅವಳ ಕಣ್ಣು ಕೆನ್ನೆ ಮೂಗು ಕಾಮನಬಿಲ್ಲಿನಾಕಾರದ ಹುಬ್ಬುಗಳೆಲ್ಲ ಅಲಂಕಾರಿಕವಾಗಿ ಫಟಾಫಟ್ ಅರಳಿಬಿಟ್ಟವು. ಅಪೂರ್ವ ಸೌಂದರ್ಯರಾಶಿ ಆ ಮುಖಾರವಿಂದದಲ್ಲಿ ಕೊಹಿನೂರ್ ವಜ್ರದಂತೆ ಫಳಫಳಿಸ ತೊಡಗಿತು. ಅವಳನ್ನೇ ಗಮನಿಸುತ್ತಿದ್ದ ತರುಣ ಮೋಡಿಗೊಳಗಾದವನಂತೆ ತಾನೂ ಆ ಸಿಹಿಯನ್ನು ಬಾಯಿಗಿಟ್ಟುಕೊಂಡು ಒಲುಮೆಯನ್ನು ತೋರಿದ. ಇಬ್ಬರೂ ಖಚಿತ ಸಾತತ್ಯದ ತಾದ್ಯಾತ್ಮತೆಯಲ್ಲಿ ಒಬ್ಬರನ್ನೊಬ್ಬರು ಓರೆಗಣ್ಣಿನಲ್ಲಿ ವೀಕ್ಷಿಸಿಕೊಂಡು ಊಟವನ್ನು ಮುಗಿಸಿ ಪುಳಕಿತರಾಗುತ್ತ ಬೀಳ್ಕೊಂಡಿದ್ದೂ ಆಯಿತು.

ದಿನಗಳು ತಿಂಗಳುಗಳಾಗಿ, ತಿಂಗಳುಗಳು ವರ್ಷಗಳಾಗಿ ಇಂದು ಕಾಲಚಕ್ರದಲ್ಲಿ ಪೂರಾ ಐವತ್ತು ಸಂವತ್ಸರಗಳು ಕಳೆದೇಬಿಟ್ಟಿವೆ. ಭುವಿಯ ಮೇಲಿನ ಜೀವನ ಏಕಪ್ರಕಾರವಾಗಿ ತನ್ನ ಅಕ್ಷದಲ್ಲಿ ತಾನೇ ಪರಿಭ್ರಮಿಸುತ್ತ ಅದೇ ನವರಾತ್ರಿಯ ಕಾಲದ, ಅದೇ ದೇವಿಯ ಪ್ರಶಸ್ತ ಪೂಜಾ ಸಂದರ್ಭದಲ್ಲಿ ಮತ್ತದೇ ಸ್ತ್ರೀ ಪುರುಷನ ಮುಖಾಮುಖಿ ಒದಗಿಸಿತಂದಿದೆ. ಇಂದೂ, ಅದೇ ಕುಡಿ ಬಾಳೆಲೆಯಲ್ಲಿ ಅಂದಿನದೇ ಸಾಂಪ್ರದಾಯಿಕ ಪಂಚಭಕ್ಷ್ಯಾದಿಗಳು... ದೇವಿಯ ಅತ್ಯಾಪ್ತ 'ಅತಿಮಧುರ' ಭಕ್ಷ್ಯವು ಇಂದು ಕೂಡಾ ಆಸಕ್ತಿಯಿಂದ ಬಡಿಸಲ್ಪಟ್ಟಿದೆ. ಯಾಚಿತವೋ ಆಯಾಚಿತವೋ ಆ 'ಅತಿಮಧುರ' ಸಿಹಿ ಪ್ರಸಾದ ಜಿಹ್ವೆಗೊಡ್ಡಿಕೊಳ್ಳದೇ ಸೃಷ್ಟಿಯ ಸಕಲ ಸೌಭಾಗ್ಯದೊಳಗಿನ ಕೆಟ್ಟು ಹಳಸಿಹೋದ ಪದಾರ್ಥವಾಗಿ ವರ್ಷವರ್ಷಗಳ ಅರೆನಿದ್ದೆಯ ಕನವರಿಕೆಗಳು- ಅರ್ಥವಿಲ್ಲದ ಹಂಬಲಿಕೆಗಳು- ದೂರದೂರಕ್ಕೇ ಸರಿದು ಮತ್ತೆಂದೂ ಮೂಡಿಬರಲಾಗದ ಅಪ್ಯಾಯಮಾನತೆ ಅನುಬಂಧಗಳಲ್ಲಿ- 'ಅನ್ಯಾಯವಾಗಿ ಬಳಸಲ್ಪಟ್ಟೆ' ಎಂಬ ಭಾವಗೋಚಾರಕ್ಕೀಡಾಗಿ ಉಸಿರನ್ನು ಹೊಸಕಿಕೊಂಡು, ಧಮನಿಗಳನ್ನು ತಿರುಚಿಕೊಂಡು ಘೋರ ಕಟ್ಟಾಚಾರಕ್ಕೆ ಕಸಿ ಕಟ್ಟಲಾಗದೇ ಒಣಕಟ್ಟಿಗೆಯಂತೆ ಅಲ್ಲಿ ಊರಿಕೊಂಡಿದ್ದರು.

ಐವತ್ತು ಅತಿ ದೀರ್ಘ ಕಾಲಚಕ್ರದ ಹಿಂದೆಯೇ ವರನ ಕಡೆಯ ಹಿರಿಯರ ನಿರ್ದಾಕ್ಷಿಣ್ಯದ ವರದಕ್ಷಿಣೆಯ ಆಸೆಬುರುಕುತನಕ್ಕೆ ಸಾಕ್ಷಿಯಾಗಿ ನಿಂತ ಅದೇ ನವರಾತ್ರಿಯ ದೇವಿಯು ಇಂದು ಅವರಿಬ್ಬರ ಮುಂದೆ ನಿರ್ವಾಹವಿಲ್ಲದೇ ಅವನತಮುಖಿಯಾಗಿ ಮನುಷ್ಯ ಬದುಕುಗಳನ್ನು ಬದಲಿಸಲಾಗದ ತನ್ನ ಕನಿಷ್ಠ ಮಿತಿಯ ಬಗ್ಗೆ ಬೇಸರಪಟ್ಟುಕೊಂಡದ್ದನ್ನು ಕಂಡ ಲೇಖಕಿ ತನ್ನ ಲೇಖನಿಯನ್ನು ಹೊರತೆಗೆದು ತನ್ಮಯತೆಯಿಂದ ಬರೆಯತೊಡಗಿದಳು.

***

ಹನುಮಾನ್ ದಂಡಕ

– ರತ್ನಾ ಮೂರ್ತಿ

ಜಯತು ಹೇ ಹನುಮಂತ, ಜಯತು ಹೇ ಬಲವಂತ, ಜಯತು ಹೇ ಗುಣವಂತ, ಜಯ ಜಯತು ಕೀರ್ತಿವಂತ, ಜಯ ಜಯತು ಭಾಗ್ಯವಂತ. ಜಯ ಜಯತು ಧೈರ್ಯವಂತ.

ರಾಮ ಜಯ ಕಾರಣನೆ, ಕಾರಣದ ಜನ್ಮನೇ, ಬಿಂಕದಸುರರ ಸ್ಥೈರ್ಯ ಜಂಕಿಸಿದ ಮಲ್ಲನೇ, ಗೊಲ್ಲನ ಮೈದುನಗೆ ಒಲಿದು ವರವನ್ನಿತ್ತ ಲಂಕಾರಿಯೇ, ರಾವಣನ ಬಿಂಕಾರಿಯೇ, ಮಂಡೋದರೀ ಸುತನ ಸಂಹಾರಿಯೇ;*

ಬೃಹದ್ಬಲ ನೀನು, ಬೃಹದ್ಯಶ ನೀನು, ಬೃಹತ್ಕಾಯನು ನೀನು, ಬೃಹಚ್ಚರಿತನು ನೀನು ಪುಣ್ಯಶ್ಲೋಕ. ಗುಣನಿಧಿಯು ನೀನು, ತಮೋಹರ್ತನು ನೀನು, ಸತ್ಯವಾದಿಯು ನೀನು, ಬ್ರಹ್ಮವಾದಿಯು ನೀನು, ಸ್ವಪ್ರಕಾಶ. ಕಾಮಜಿತ ನೀನು, ಮಹಾತೇಜನು ನೀನು, ಲೋಕಸ್ವಾಮಿಯು ನೀನು, ಮುಕ್ತಿದಾತಾ. ಸದಾನಂದನು ನೀನು, ಜಿತಾರಾತಿಯು ನೀನು, ಸತ್ಯಕೇತುವು ನೀನು ಅಭಯಪ್ರದಾತಾ ವಜ್ರನಖ ಪ್ರಜ್ಞಾಯ ಭಯಂಕರಾಕಾರ, ದಾಂತಾಯ ಶಾಂತಾಯ ಕಪೀಶ್ವರಾಯ, ಮಾರುತನ ಅರ್ಭಕನೆ, ಸರ್ವಯಂತ್ರಾತ್ಮಕನೆ ಸತ್ಯಸಂಧಾ, ಮಹಾಕಾಯ ವಿಜಿತೇಂದ್ರ, ಪ್ರಸನ್ನಾತ್ಮ ಅನುಪಮ ಧರಾಧರಧರ ಲೋಕಪೂಜ್ಯ, ಸುಗ್ರೀವ ಸಚಿವನೆ, ಕಾಲ ರುದ್ರಸಮ, ಲೋಕೈಕಪೂಜ್ಯನೆ ಹರೀಶ್ವರ, ಜಗನ್ನೇತಾ ದೀನಬಂಧೋ ಜನೇಶ್ವರ.

ಪವಮಾನ ಸುತನೇ ಪರಶಿವನ ಸೂನುವೇ, ಅಂಜನಾ ತನಯನೇ, ಜಗತ್ಪಾವನನೆ ಪಾವನನೇ; ದಿನಮಣಿಯ ಫಲವೆಂದು ಭುಂಜಿಸಲು ಹಾರಿದ ಬಾಲಾರ್ಕ ಸಮತೇಜ ವಾತಾತ್ಮಜ, ಪುಲೋಮಜನು ಪವಿಯಿಂದ ಘಾತಿಸಲು ಧರೆಗೊರಗೆ, ತವ ಪಿತನು ಮುನಿದಿರಲು ಕಂಗೆಟ್ಟು ಜಗವೆಲ್ಲ ತ್ರಾಹಿ ತ್ರಾಹಿ ಎಂದೊರಲುತಿರಲು, ಪರಮೇಷ್ಠಿ ಸುರಶ್ರೇಷ್ಠರೆಲ್ಲರೊಡೆ ಧರೆಗಿಳಿಗಿದು, ಆಶುಗನ ಸಂತವಿಸಿ, ಹೇ! ಮರುತಾತ್ಮಜನೆ ಮುದದಿಂದ ವಿಧಿಯೊಡನೆ ನಿರ್ಜರರು ವರಗಳ ಮಳೆಗರೆಯೆ ನೀನಾದೆ ಅಪರಾಜಿತ, ಸಮರಾರು ನಿನಗಿನ್ನು ವಿಶ್ವನಾಥಾ. ಚಿರಂಜೀವಿಯು ಆಗಿ ಬ್ರಹ್ಮಚಾರಿಯು ಆದ ದಿನಕರನ ಶಿಷ್ಯನೇ, ಪುರುಹೂತ ಭಾತ್ರನೇ, ವಿಧೀಶ ವಂದ್ಯನೇ, ಕಾಲಯಮ ಸದೃಶನೇ, ವೇದಾಂಗ ಪಂಡಿತನೆ, ಮಹಾಕಾಯಾ.

ರವಿಕುಲಜ ಶ್ರೇಷ್ಠನ ನೇಹವನು ಇನಸುತಗೆ ದೊರಕಿಸಿದ ಅಪ್ರತಿಮ ವಾಗ್ಪಂಡಿತ, ಉದಧಿಯದು ಗೋಷ್ಪದಕೆ ಸಮನೆನುತ ಲಂಘಿಸಿದ ಲೋಕವಿನುತ, ನಾಗಮಾತೆಯ ಗೆಲ್ದು, ರಾಹುಜನನಿಯ ಕಳೆದು, ಶಿವೆಯನುಜನನು ಮುದದಿ ಸಂತೈಸಿ ಅರಿಪುರದಿ ಇಳಿದಂಥ ಅಪ್ರತಿಮ ಸಾಹಸಾಂಕ, ಗರುಡ ಸ್ಮಯ ಭಂಜಕ, ಸಂಸಾರ ಭಯ ನಾಶಕ.

ಹಗೆಯ ಬಗೆಯನ್ನರಿತು ಲಗುಬಗೆಯಲಿ ಜನಕ ನಂದಿನಿಯ ಸಂತೈಸಿ, ಉದ್ಯಾನವನು ಕೆಡಿಸಿ, ಸಾಸಿರದ ಸಂಖ್ಯೆಯ ಅಸುರರನು ಕಡಿದೊಕ್ಕಿ, ಸ್ವರ್ಣಪುರಿಯೌತಣವ ರೋಹಿತಾಶ್ವನಿಗಿಕ್ಕಿ, ಮರಳಿ ಕಪಿಸೇನೆಯೊಡೆ ಸ್ವಾಮಿಯನು ಕರೆತಂದು, ಬಿಂಕದಲಿ ಸಂಕವನು ವಿರಚಿಸುತ ಲಂಕೆಯಲಿ ದಳದೊಡನೆ ನಿಂದು, ಘೋರಾಂಕದಲಿ ನಿನ್ನ ಪಾತ್ರವೇ ಹಿರಿದಾಯ್ತು ಭಕುತಜನ ಬಂಧು, ಹರಿ ಹರಿಯ ಅನುಜನೊಡೆ ಸಕಲ ಹರಿ ಸೇನೆಯನು ಕಾಯ್ದವನು ನೀನೇ ಸಂಜೀವರಾಯ, ಧೀರಾಯ ಶೂರಾಯ ವಜ್ರಕಾಯಾ, ಕೇಸರೀ ನಂದನಾಯ, ಪರಶೌರ್ಯವಿನಾಶಾಯ ಭಕ್ತಾಭಯವರಪ್ರದಾಯ.

ರಾಮಜಯ ವಾರ್ತೆಯನು ಅನುಜ ಭರತನಿಗಿತ್ತು ಮುದವನ್ನು ಪಸರಿಸಿದ ಅಪ್ರತಿಮ ಕಿಂಕರನೆ, ಅಸುರ ಕುಲಾಂತಕನೆ, ಸಮರ ಭಯಂಕರನೆ, ಭೂಜಾತೆ ಸಂಕಷ್ಟಹರಣ ಕಾರಣನೆ, ಏನನೂ ಬೇಡದಲೆ ಸ್ವಾಮಿಯಾಲಿಂಗನವ ಪಡೆದ ಧನ್ಯಾತ್ಮನೆ, ದ್ವಾಪರದ ಸೋದರನ ಮದಹರಿಸಿ ಪ್ರೇಮದಲಿ ದಿವ್ಯದರ್ಶನವಿತ್ತ ಪರಮ ಕರುಣಾಳು, ಸವ್ಯಸಾಚಿಯ ಉರುವ ಕೇತನದಿ ನೆಲೆನಿಂತು ವಿಜಯ ಕಾರಣನಾದ ಲೋಕಪೂಜ್ಯ. ರಘುವರಗೆ ನೀನಾಳು, ನಾವೆಲ್ಲ ನಿನ್ನಾಳು, ನೀನಾಳುತೆಮ್ಮನ್ನು ರಾಮಪದದಲ್ಲೆಮ್ಮ ಚಿತ್ತವನ್ನಿರಿಸುತ್ತ ಕಾಪಾಡು ಕಾಪಾಡು ಭಕ್ತವತ್ಸಲನೆ, ಹಲವು ನಾಮಗಳಿಂದ ಪುರಪುರದಿ ಸ್ತುತಿಗೊಂಬ ವಾನರೇಶ, ನಿಜ ಭಕುತಿ ಕೋಶ.ತವ ಪದಕೆ ಶರಣೆಂಬೆ ಕಾಪಾಡು ಕಾಪಾಡು ಕಾಪಾಡು ಕಾಪಾಡು ದೀನಬಂಧೋ ಹೇ! ವಿಶ್ವಬಂಧೋ.

***

ಸೆಳೆತ

– ರಾಜನ್

ಸಾವಿತ್ರಮ್ಮನವರು ಪೇಪರ್ ಓದುತ್ತಾ ಕೂತಿದ್ರು. ಆದರೆ ಅವರ ತಲೆಯಲ್ಲಿ ಚಕ್ಲಿ ಮಾಡಬೇಕು, ಕೋಡ್ಬಳೆ ಮಾಡಬೇಕು, ಸಾರಿನ ಪುಡಿ ರೆಡಿ ಮಾಡಬೇಕು ಅಂತ ಯೋಚನೆಗಳು ಓಡಾಡ್ತಾ ಇದ್ದವು. ಅವರ ಮಗ ಅಮೆರಿಕದಿಂದ ಭಾರತಕ್ಕೆ ಬರ್ತಾ ಇದ್ದಾನೆ. ಒಬ್ಬನೇ ಮಗ ಇಂಜಿನಿಯರಿಂಗ್ ಮುಗಿಸಿಕೊಂಡು ಅಮೇರಿಕಾದಲ್ಲಿ ಓದಕ್ಕೆ ಅಂತ ಹೋದವನು ಅಲ್ಲೇ ಸೆಟಲ್ ಆಗ್ಬಿಟ್ಟ. ಇವರು ಒಂದು ಒಳ್ಳೆ ಹುಡುಗಿ ನೋಡಿ ಮದುವೆ ಮಾಡಿಕೊಟ್ರು. ಹುಡುಗಿನೂ ಸಾಫ್ಟ್ವೇರ್ ಇಂಜಿನಿಯರ್, ಅಮೆರಿಕದಲ್ಲೇ ಕೆಲಸ ಮಾಡುತ್ತಿದ್ದಾಳೆ. ಒಳ್ಳೆ ಸಂಬಳ. ಮನೆ ತಗೊಂಡಿದ್ದಾರೆ ಕಾರುಗಳಿವೆ. ಇಬ್ಬರೂ ಅವರ ಪಾಡಿಗೆ ಅವರು ಕೆಲಸಕ್ಕೆ ಹೋಗ್ಬಿಟ್ಟು ಬರ್ತಾರೆ.

ಭರತ್ ಅಂತ ಹೆಸರಿಟ್ಟಿದ್ದರು. ಶಕುಂತಲೆ ಮಗ ಭರತನಂತೆ ಅಮ್ಮನ ಜೊತೆ ಇರುತ್ತಾನೆ ಅಂತ ಅನ್ಕೊಂಡಿದ್ರು. ಆದರೆ ಅಮ್ಮ ಅಂದ್ಕೊಂಡ ತರಾನೇ ಮಗನೂ ಅಂದ್ಕೋಳೋಕಾಗುತ್ತಾ? ಚೆನ್ನಾಗಿ ಓದಿದ್ದ. ಅಮೆರಿಕಾದಲ್ಲೂ ಒಳ್ಳೆ ಕೆಲಸ ಸಿಕ್ತು. ಕೈ ತುಂಬಾ ಸಂಬಳ. ಪ್ರಮೋಷನ್‌ಗಳು ಬರೋದಿಕ್ಕೆ ಶುರುವಾಯಿತು. ಕಂಪನೀನಲ್ಲೂ ಒಳ್ಳೇ ಹೆಸರು ಸಂಪಾದಿಸಿಕೊಂಡಿದ್ದ. ಅಷ್ಟು ಒಳ್ಳೆ ಕೆಲಸಾನ ಯಾರಾದರೂ ಬಿಟ್ಟು ಬರ್ತಾರಾ?

ರಾಮರಾವ್ ರೈಲ್ವೆಯಲ್ಲಿ ಕೆಲಸದಲ್ಲಿದ್ರು. ಸ್ಟೇಷನ್ ಮಾಸ್ಟರ್ ಆಗಿದ್ರು. ಟ್ರಾನ್ಸ್‌ಫರ್ ಕೆಲಸ. ಸಾವಿತ್ರಮ್ಮನವರೂ ಅವರ ಜೊತೆಯಲ್ಲಿ ಊರೂರು ಸುತ್ತುತ್ತಾ ಇದ್ದರು. ಮದುವೆಯಾಗಿ ಎರಡು ವರ್ಷಕ್ಕೆ ಭರತ್ ಹುಟ್ಟಿದ. ಇಬ್ಬರಿಗೂ ತುಂಬಾ ಸಂತೋಷ. ಮಗನು ಬೆಳ್ಳಗೆ ಚೆನ್ನಾಗಿದ್ದ. ಅವನ ಆಟಗಳನ್ನು ನೋಡಿಕೊಂಡು ಇವರು ಸಂತೋಷಪಡ್ತಾ ಇದ್ರು. ರಾಮರಾವ್ ಅವರಿಗೆ ಮನೆ ಕಟ್ಟಿಸಬೇಕು ಅಂತ ಆಸೆ ಆಯ್ತು. ಬ್ಯಾಂಕಿನಲ್ಲಿ ಸಾಲ ಸಿಗುತ್ತೆ, ಮನೆ ಕಟ್ಟಿಸಿಬಿಡೋಣ ಅಂತ ನಿರ್ಧಾರ ಮಾಡಿದ್ರು. ಅವರಿರೋ ಊರಲ್ಲಿ ಒಂದು ಹಳೆ ಮನೆ ಇತ್ತು. ಅದನ್ನ ಒಡೆಸ್ಬಿಟ್ಟು ಮನೆ ಕಟ್ಟಿಸಬೇಕು ಅಂತ ತೀರ್ಮಾನ ತಗೊಂಡ್ರು. ಆದರೆ ಇವರ ಊರಲ್ಲಿ ರೈಲ್ವೇ ಸ್ಟೇಷನ್ ಇರಲಿಲ್ಲ. ಅದಕ್ಕೆ ಹೆಂಡ್ತಿ ಮಗನನ್ನು ಊರಲ್ಲಿ ಬಿಟ್ಟು ಇವರು ಮಾತ್ರ ಊರೂರು ಸುತ್ತೋದಿಕ್ಕೆ ಶುರುಮಾಡಿದ್ರು. ಮನೆ ಕೆಲಸ ಶುರುವಾಯಿತು. ರಾಮರಾಯರು ಅವಾಗಾವಾಗ ಬಂದು ನೋಡ್ಕೊತಿದ್ರು. ಮನೇಲಿ ಅಡುಗೆ ಮಾಡಿಟ್ಟು, ಮಗ ಭರತ ಸ್ಕೂಲಿಗೆ ಹೋದಮೇಲೆ ಮನೆ ಕಟ್ಟುತ್ತಿದ್ದ ಜಾಗಕ್ಕೆ ಹೋಗಿ ಸಾವಿತ್ರಮ್ಮ ನಿಂತ್ಕೋತಿದ್ದರು. ಬೇಸಿಗೆ ಸಮಯ, ಬಿಸಿಲು ಜೋರಿತ್ತು. ತಲೆಮೇಲೆ ಸೆರಗು ಹಾಕಿಕೊಂಡು ನಿಂತ್ಕೋತಿದ್ದರು. ಕಣ್ಣೆದುರಿಗೆ ಸೂರು ಸಿದ್ಧವಾಗ್ತಿದ್ರೆ ಸಂತೋಷವಾಗಲ್ವೆ? ಆ ಖುಷಿಯಲ್ಲಿ ಯಾವುದೂ ಕಷ್ಟ ಅಂತ ಅವರಿಗೆ ಅನ್ನಿಸಲೇ ಇಲ್ಲ.

ಮನೆ ಕಟ್ಟಿಸಿ ಒಳ್ಳೇ ದಿವಸ ಗೃಹಪ್ರವೇಶ ಮಾಡಿ ರಾಮರಾಯರು ಹೆಂಡ್ತಿ ಮಗನ ಜೊತೆ ಗೂಡು ಸೇರಿಕೊಂಡ್ರು. ಯಾಕೋ ಹಳೆಯ ನೆನಪುಗಳು ಸಾವಿತ್ರಮ್ಮನ ತಲೆ ತುಂಬಾ ಸುತ್ತೋದಿಕ್ಕೆ ಶುರುವಾಯ್ತು. ಹಾಗೇ ಯೋಚಿಸುತ್ತಾ ಪೇಪರ್ ಮಡಿಸಿಟ್ಟು ಕಿಟಕಿಯಿಂದ ಹೊರಗಡೆ ನೋಡಿದರು. ಎದುರಿನ ಮರದ ಕೊಂಬೆಯ ಮೇಲೆ ಗಿಳಿಗರೆಡು ಕುಳಿತಿತ್ತು. ಪೊಟರೆಯಲ್ಲಿದ್ದ ಮರಿಗೆ ತಾಯಿ ಗಿಣಿ ಎಲ್ಲಿಂದಲೋ ತಂದ ತುತ್ತುಣಿಸುತ್ತಿತ್ತು. ಸಾವಿತ್ರಮ್ಮನಿಗೆ ಅದನ್ನು ನೋಡಿ ಅನ್ನಿಸಿತು, ಮರಿ ಗಿಣಿ ದೊಡ್ಡದಾದ ಮೇಲೆ ಪೊಟರೆ ಬಿಟ್ಟು ಹಾರಿಹೋಗುತ್ತೆ. ಆಗ ಈ ತಾಯಿ ಗಿಣಿ ಯಾರೋ? ತಂದೆ ಗಿಣಿ ಯಾರೋ! ಸಾವಿತ್ರಮ್ಮ ಚಿಕ್ಕದಾಗಿ ನಕ್ಕರು. ಆ ನಗುವಿನಲ್ಲಿ ಒಂದು ಸಣ್ಣ ವಿಷಾದದ ಎಳೆಯೊಂದು ತೇಲಿಹೋಯಿತು.

ಭರತ ಬಂದ್ರೂ, ಒಂದು ವಾರ ಅಥವಾ ಹತ್ತು ದಿವಸ ಇದ್ದು ಹೋಗ್ತಾನೆ. ಈ ಸಲ ಬಂದಾಗ ಎಷ್ಟು ದಿವಸ ಇರ್ತಾನೋ ಗೊತ್ತಿಲ್ಲ ಎಂದು ಯೋಚಿಸುತ್ತಾ, ಚಟ್ನಿ ಪುಡಿಗೆ ಹುರಿಯಲು ಅಡುಗೆಮನೆ ಕಡೆ ಹೆಜ್ಜೆಹಾಕಿದರು.

ರಾಮರಾಯರು ಕೆಲಸದಲ್ಲಿದ್ದಾಗ ಬೇರೆ ಊರುಗಳಲ್ಲಿ ವಾಸ. ನಿವೃತ್ತಿಯಾಗಿ ಮನೆಗೆ ಬಂದಾಗ ಭರತ ಅಮೇರಿಕದಲ್ಲಿ ಸೆಟ್ಲ್ ಆಗಿಬಿಟ್ಟಿದ್ದ. ಮಗನ ಜೊತೆ ಮಾತನಾಡುತ್ತಾ, ಅವನ ಆಟ ಪಾಠ ನೋಡುತ್ತಾ ಸಮಯ ಕಳೆದದ್ದೇ ಕಡಿಮೆ. ತಂದೆಯರ

ಪಾಡೇ ಇದು! ಮಗ ಅಮೇರಿಕಾದಿಂದ ಬರುತ್ತಾನೆ ಅಂದ್ರೆ ರಾಮರಾಯರಿಗೆ ಏನೋ ಸಡಗರ. ಅವನ ಕೋಣೆಯನ್ನು ಸ್ವಚ್ಛಮಾಡಿ ಹಾಸಿಗೆಯೆಲ್ಲಾ ಬಿಸಲಿಗೆ ಹಾಕಿ ತೆಗೆದಿಟ್ಟು, ಒಂದು ಜೊತೆ ಬೆಡ್ ಶೀಟನ್ನು ಒಗೆದು ಮಡಿಸಿಡುತ್ತಿದ್ದರು. ಅವನಿಗಾಗಿ ಟವಲ್ಗಳು, ಪಂಚೆಗಳನ್ನು ಡ್ರೈ ಕ್ಲೀನ್ ಮಾಡಿಸಿಡುತ್ತಿದ್ದರು. ಅವನು ಊರಿಗೆ ಬಂದಿದ್ದಾಗ, ದಿನಾಗಲೂ ಗಂಟೆಗಟ್ಟಲೆ ಪೇಪರ್ ಓದುತ್ತಿದ್ದವರು, ಟಿವಿ ನೋಡುತ್ತಿದ್ದವರು, ಅವನು ಮನೆಯಲ್ಲಿದ್ದಾಗ ಅವನ ಜೊತೆಯಲ್ಲೇ ಕೂತಿರುತ್ತಿದ್ದರು. ಜಾಸ್ತಿ ಮಾತಾಡುತ್ತಿರಲಿಲ್ಲ. ಆದರೆ ಅವನು ಹೇಳುವುದನ್ನೆಲ್ಲಾ ಕೇಳುತ್ತಿದ್ದರು. ಅವನು ಬಂದಿದ್ದಾಗ, ರಾಯರ ಮಠಕ್ಕೂ ಜಾಸ್ತಿ ಹೋಗುತ್ತಿರಲಿಲ್ಲ. ಅವರ ಗೆಳೆಯರು, "ಓಹೋ ಮಗ ಬಂದಿದ್ದಾನೆ. ರಾಯರು ಲೀವ್ ಸಾಂಕ್ಷನ್ ಮಾಡಿದ್ದಾರೆ!" ಅಂತ ಹಾಸ್ಯಮಾಡುತ್ತಿದ್ದರು. ಭರತ ಹೊರಗಡೆ ಹೋದರೆ ತಾನೂ ಜೊತೆಯಲ್ಲಿ ಹೊರಟುಬಿಡುತ್ತಿದ್ದರು. ಬಾಯಲ್ಲಿ ಮಾತು ಕಡಿಮೆಯಿದ್ದರೂ, ಮನಸಲ್ಲಿ ಸಂತೋಷ ತುಂಬಿರುತ್ತಿತ್ತು. ಸಾವಿತ್ರಮ್ಮ, "ಏನ್ರೀ ತುಂಬಾ ಖುಷಿಯಾಗಿದ್ದೀರಿ" ಎಂದಾಗ, ರಾಮರಾಯರು, " ಏನಿಲ್ಲ., ಹಾಗೇ ಇದ್ದೀನಲ್ಲ" ಎನ್ನುತ್ತಿದ್ದರು. "ಮೂವತ್ತು ವರ್ಷ ನಿಮ್ಮ ಜೊತೆ ಸಂಸಾರ ಮಾಡಿದ್ದೀನಿ. ನೀವು ಹೇಳದಿದ್ದರೂ ನಿಮ್ಮ ವಿಚಾರವೆಲ್ಲಾ ಗೊತ್ತಾಗುತ್ತೆ" ಎಂದು ಸಾವಿತ್ರಮ್ಮ ರೇಗಿಸುತ್ತಿದ್ದರು. ಅಡುಗೆಮನೆಗೆ ಹೋಗಿ, ಮಗನಿಗೆ ಇಷ್ಟವಾದ ತಿಂಡಿ ತಿನಿಸುಗಳನ್ನು ಮಾಡಿಕೊಡುತ್ತಿದ್ದರು. ಭರತ ತಂದೆ ತಾಯಿಯರಿಗೆ ಅಮೇರಿಕಾಗೆ ಬಂದುಬಿಡಿ ಎಂದು ಕರೆದಾಗಲೆಲ್ಲಾ "ಇಲ್ಲೇ ಚೆನ್ನಾಗಿದೆ. ರಾಯರ ಮಠಕ್ಕೆ ಹೋಗಿ ಇದ್ದು ಬಂದರೆ ಏನೋ ನೆಮ್ಮದಿ" ಎನ್ನುತ್ತಿದ್ದರು ರಾಮರಾಯರು. ಸಾವಿತ್ರಮ್ಮನವರೋ ಸೀತೆಯಂತೆ!

ಹೆಮ್ಮಾರಿ ಕೋವಿಡ್ ಬಂದು ಇಡೀ ಪ್ರಪಂಚವನ್ನೇ ಅಲುಗಾಡಿಸಿಬಿಟ್ಟಿತು. ಎಷ್ಟೋ ಕುಟುಂಬಗಳಿಗೆ ಬಹಳ ಹಾನಿಯಾಯಿತು. ಸಾವಿತ್ರಮ್ಮನವರ ಸಂಸಾರದಲ್ಲೂ ಸುನಾಮಿಯೆದ್ದಿತು. ಅವರ ಪಾಡಿಗೆ ಮಠ, ಪೇಪರ್, ಟಿವಿ ಎಂದು ಜೀವನ ಸಾಗಿಸುತ್ತಿದ್ದ ರಾಮರಾಯರು, ಒಂದು ದಿನ ರಾಯರ ಪಾದ ಸೇರಿಬಿಟ್ಟರು. ಸಾವಿತ್ರಮ್ಮ ಒಬ್ಬರೇ ಆಗಿಹೋದರು. ಮಗ ಬಂದು ತಂದೆಯ ಕಾರ್ಯಗಳನ್ನೆಲ್ಲಾ ಮಾಡಿದ ಮೇಲೆ, "ಅಮ್ಮ ನನ್ನ ಜೊತೆ ಬಂದುಬಿಡು. ಒಬ್ಳೇ ಏನು ಮಾಡ್ತೀಯ?" ಎಂದ. "ಅವರಿದ್ದಾಗಲೇ ಬರ್ಲಿಲ್ಲ. ಈಗ ಬಂದು ಏನು ಮಾಡ್ಲಿ? ಅವರು ಕಷ್ಟಪಟ್ಟು ಕಟ್ಟಿಸಿದ ಮನೆ. ನಾನು ಎದುರು ನಿಂತು ಕಟ್ಟಿಸಿದ ಮನೆ. ಇದನ್ನು ಬಿಟ್ಟು ನಮ್ಮದಲ್ಲದ ಊರಿಗೆ ಬರೋದು ಹೇಗೋ?" ಎಂದು ನೊಂದು ನುಡಿದರು.

ಮುಂದಿನ ವರ್ಷ ಭರತ ಸಂತೋಷದಿಂದ ಫೋನ್ ಮಾಡಿದ್ದ, "ಅಮ್ಮ ನಿನ್ನ ಆಶೀರ್ವಾದದಿಂದ ಮಗ ಹುಟ್ಟಿದ್ದಾನೆ". ನನ್ನ ಮಗನಿಗೆ ಮಗ! ಅವರಿದ್ದರೆ ಎಷ್ಟು ಸಂತೋಷ ಪಡುತ್ತಿದ್ದರೋ! "ತುಂಬಾ ಸಂತೋಷ ಭರತ! ರೇಖಾ ಆರೋಗ್ಯವಾಗಿದ್ದಾಳಾ? ಅವರಮ್ಮ ಜೊತೆಗೆ ಇದ್ದಾರೆತಾನೆ? ಹದಿನೈದು ದಿನ ಆದ ಮೇಲೆ ಮಗು ಫೋಟೋ ತೆಗೆದು ಕಳುಹಿಸು" ಎಂದರು. "ಅಮ್ಮಾ, ನೀ ಇನ್ನೂ ಹಳೇ ಕಾಲದಲ್ಲೇ ಇದ್ದೀಯಲ್ಲಮ್ಮ. ನಾಳೆ ವಿಡಿಯೋ ಕಾಲ್ ಮಾಡ್ತೀನಿ. ನಿನ್ನ ಮೊಮ್ಮಗನನ್ನು ನೋಡು" ಎಂದ.



ನಾಳೆ ಮಗ ಬರ್ತಾ ಇದ್ದಾನೆ. ಒಬ್ನೇ ಬರ್ತಾನೋ ಇಲ್ಲ ಹೆಂಡತಿ ಮಗನನ್ನೂ ಕರ್ಕೊಂಡು ಬರ್ತಾನೋ ಗೊತ್ತಿಲ್ಲ. ಆವಾಗಾವಾಗ ವಿಡಿಯೋ ಕಾಲ್ ಗಳಲ್ಲಿ ಮೊಮ್ಮಗನನ್ನು ನೋಡ್ತಾಯಿದ್ದದ್ದು. ಈಗ ಅವನಿಗೆ ಮೂರು ವರ್ಷ. ತುಂಟಾಟ ಶುರುಮಾಡಿರಬಹುದು. ಅವನಿಗೆ ಸಿಹಿ ಇಷ್ಟಾನೋ ಇಲ್ಲ ಖಾರ ಇಷ್ಟಾನೋ? ಅವನಿಗೆ ಬಾದಾಮಿ ಹಲ್ವ ಮಾಡಿಡಬೇಕು ಎಂದು ಸಾವಿತ್ರಮ್ಮ ಯೋಚಿಸುತ್ತಿದ್ದರು.

ಮಾರನೇ ದಿನ ಬೇಗ ಎದ್ದಿದ್ದರು. ಬಾಗಿಲ ಗಂಟೆ ಬಾರಿಸಿತು. 'ಅಮ್ಮಾ' ಭರತನ ಧ್ವನಿ. ಮಗನ ಧ್ವನಿ ಕೇಳಿದರೆ ಸಾಕು ನಡೆಯೋಕೆ ಕಷ್ಟ ಆಗ್ತಿದ್ರೂ ಪಿ.ಟಿ.ಉಷಾ ತರಹ ಓಡಿ ಹೋಗಿ ಬಾಗಿಲು ತೆಗೆದ್ರು ಸಾವಿತ್ರಮ್ಮ. ಬಾಗಿಲ ಎದುರಿಗೆ ಭರತ, ರೇಖಾ ಮಗನನ್ನು ಎತ್ತಿಕೊಂಡು ನಿಂತಿದ್ದರು. "ಬನ್ನಿ..ಬನ್ನಿ" ಎಂದು ಕರೆದರು ಸಾವಿತ್ರಮ್ಮ. ಕಣ್ಣಿಳಲ್ಲಿ ಹನಿಗಳು ಮೂಡಿದ್ದವು.

ಆವತ್ತು ರಾತ್ರಿ ಊಟ ಆದ ಮೇಲೆ ಎಲ್ಲರೂ ಕುಳಿತುಕೊಂಡು ಮಾತನಾಡುತ್ತಿದ್ದರು. ಮೊಮ್ಮಗ ಸಾತ್ವಿಕ್ ಸಾವಿತ್ರಮ್ಮನವರ ತೊಡೆಯ ಮೇಲೆ ಕುಳಿತಿದ್ದ. ಸಾವಿತ್ರಮ್ಮ ಸೊಸೆಯನ್ನು ಕೇಳಿದರು, "ಊರಿಗೆ ಏನೇನು ಮಾಡಿಕೊಡಲಿ?". ರೇಖಾ ನಗುತ್ತಾ ಭರತನನ್ನು ನೋಡಿದಳು. ಭರತ, "ಅಮ್ಮ, ನಾವು ಕರೆದರೆ ನೀನಂತೂ ಅಮೇರಿಕಾಗೆ ಬರೋದಿಲ್ಲ. ಮೊಮ್ಮಗನನ್ನು ನೋಡಬೇಕು ಅಂತ ಅನ್ನಿಸಲಿಲ್ಲವಾ?" "ದಿನಾಲೂ ಅವನನ್ನು ನೋಡಬೇಕು ಅವನ ಹತ್ರ ಅಜ್ಜಿ ಅಂತ ಕರೆಸ್ಕೋಬೇಕು ಅಂತ ಎಷ್ಟು ಆಸೆ ಆಗ್ತಾಯಿತ್ತು ಗೊತ್ತಾ?" ಎಂದರು ಸಾವಿತ್ರಮ್ಮ. "ಅಮ್ಮಾ, ಅದಕ್ಕೇ ನಿನ್ನ ಜೊತೇನೇ ಇರೋಣ ಅಂತ ಅಲ್ಲಿ ಕೆಲಸ ಬಿಟ್ಟು ಇಲ್ಲಿಗೇ ಬಂದುಬಿಟ್ವೆ" ಎಂದ. ಸಾವಿತ್ರಮ್ಮನವರಿಗೆ ಏನು ಹೇಳಬೇಕು ಅಂತ ತೋರಲಿಲ್ಲ. ಆ ಸಂತೋಷದಲ್ಲಿ ಮೊಮ್ಮಗನ ಮುಖ ನೋಡಿದರು. ಸಾತ್ವಿಕ್ ಇವರನ್ನು ನೋಡಿ "ಅಜ್ಜಿ" ಎಂದು ಕರೆದು ನಕ್ಕನು. ಸಾವಿತ್ರಮ್ಮ ಅವನ ಕಣ್ಣುಗಳನ್ನು ನೋಡಿದರು. ಅವರಿಗೆ ಅದು ಪರಿಚಯದ ಕಣ್ಣುಗಳು ಅನ್ನಿಸಿದವು. ಆ ಪ್ರೀತಿಯನ್ನು ಮೊದಲೂ ಕಂಡಿದ್ದರು. ಅವನನ್ನು ಬಾಚಿ ತಬ್ಬಿ ಮುತ್ತು ಕೊಟ್ಟು, "ಮುದ್ದು ರಾಜಾ, ಇಲ್ಲೇ ಇರೋ. ಇದು ನಿಂದೇ ಮನೆ" ಎಂದರು.

***

ದಾಮೋದರನ ಆಹಾರ ಪ್ರೀತಿ

– ಮಹಾಬಲ

ಅದೇಕೋ ಬಹಳ ದಿನಗಳಿಂದ ನಮ್ಮ ಕಾಫಿ ಕಟ್ಟೆಗೆ ದಾಮೋದರ ಭೇಟಿ ನೀಡಿರಲಿಲ್ಲ. ದರಿದ್ರನಿಗೆ ಹೊಟ್ಟೆ ದಾಮೋದರನಿಗೆ ನಿದ್ದೆ ಎಂಬ ಗಾದೆಯ ಮಾತಿನ ಅರ್ಥ ಹೇಗೋ ಏನೋ? ಹೊಟ್ಟೆಯ ವಿಚಾರದಲ್ಲಂತೂ ನಮ್ಮ ದಾಮೋದರ ಒಂದು ಹೆಜ್ಜೆ ಮುಂದೆ ಅನ್ನಿ. ''ದಾಮು, ಕಾಫಿ ಜತೆ ಒಂದು ಇಡ್ಲಿ ಹೇಳಲಾ?'' ಎಂದು ಯಾರಾದರೂ ಕೇಳಿದರೆ, ''ನೀನು ಬೇಕಾದರೆ ಒಂದು ತಗೋ. ನನಗೆ ಎರಡು ಇಡ್ಲಿ ಜತೆಗೆ ಒಂದು ವಡೆ '' ಎಂಬ ಉತ್ತರ ಬರದಿದ್ದರೆ ಕೇಳಿ.

''ಹಾಗಾದರೆ ಮನೆಯಲ್ಲಿ ಉಪಾಹಾರ ಇಲ್ಲವೇ ದಾಮೂ?'' ಎಂದು ಪ್ರಶ್ನಿಸಿದರೆ, ''ಯಾಕಿಲ್ಲ ಗುರೂ, ಮನೆಯಲ್ಲಿ ಸರೂ ಪೂರಿ ಜತೆಗೆ ಸಾಗು ಮಾಡ್ತಾ ಇದಾಳೆ. ಅದಿನ್ನೂ ಒಂಬತ್ತೂವರೆಗೆ. ಅಷ್ಟೊತ್ತಿಗೆ ಇವೆಲ್ಲ ಭಸ್ಮ ಆಗತ್ತೆ'' ಎಂದಿದ್ದ ಒಮ್ಮೆ.

ಇದೇ ರೀತಿ ಒಮ್ಮೆ ನಾಲ್ಕು ಜನ ಸಹೋದ್ಯೋಗಿಗಳು ಬ್ಯಾಂಕ್ ಶಾಖೆಯ ಎದುರಿಗಿದ್ದ ಹೋಟೆಲಿಗೆ ಮಧ್ಯಾಹ್ನ ಉಪಾಹಾರಕ್ಕೆ ಹೋಗಿದ್ದರಂತೆ. ಅಲ್ಲಿ ಅಚಾನಕ್ಕಾಗಿ ನುಗ್ಗಿದ ದಾಮುವಿಗೆ ಆತಿಥೇಯ, ''ಬಾ ದಾಮೂ. ನೀನೂ ಏನಾದ್ರೂ ಕಬಳಿಸು.'' ಎಂದು ಉಪಚಾರಕ್ಕೆ ಕರೆದಾಗ ಈ ಮಹಾಶಯ ''ಈಗ ತಾನೇ ಎಂಟಿಆರ್‌ನಲ್ಲಿ ಊಟ ಆಯ್ತು,. ಆದರೂ ನೀನು ಪ್ರೀತಿಯಿಂದ ಕರೆದಮೇಲೆ ಇಲ್ಲ ಅನ್ನೋಕೆ ಮನಸ್ಸಾಗಲ್ಲ. ಏನಾದ್ರೂ ಲೈಟ್‌ಆಗಿ ತೊಗೋತೀನಿ'' ಎನ್ನುತ್ತಾ ಮಾಣಿಯನ್ನು ಕರೆದು ಏನೇನಿದೆ ಅಂತ ಕೇಳಿ, ಎಲ್ಲಾ ಐಟಮ್ ಆರ್ಡರ್ ಮಾಡಿದನಂತೆ. ಪಾಪ! ಆತಿಥೇಯ ಜೇಬು ಮುಟ್ಟಿ ನೋಡಿಕೊಳ್ಳುವಂತಾಯಿತು ಎಂಬುದಂತೂ ನಿಜ.

ಇಂಥ ಹಿನ್ನೆಲೆಯ ದಾಮೂ ಒಂದು ದಿನ ಇದ್ದಕ್ಕಿದ್ದಂತೆ ಕಾಫಿ ಕಟ್ಟೆಯಲ್ಲಿ ಪ್ರತ್ಯಕ್ಷನಾದ. ''ಏನು ದಾಮೂ, ದರ್ಶನವಿಲ್ಲ ಹೇಳಿಬಿಟ್ಟು ಹೊಗೋದಲ್ವ ?'' ಆಕ್ಷೇಪಿಸಿದೆ.

''ಇದ್ದಕ್ಕಿದ್ದಂತೆ ಯೂರೋಪ್ ಟೂರ್ ಫಿಕ್ಸ್ ಆಗಿ ಹೊರಟುಬಿಟ್ಟೆ ಶಿಷ್ಯ, ಹೇಳೋಕ್ಕೂ ಟೈಮ್ ಇರಲಿಲ್ಲ'' ಎಂಬ ಉತ್ತರ ಅವನಿಂದ ಬಂತು.

ಜನಾರ್ದನ ಗುಪ್ತ ''ಅಲ್ಲಯ್ಯ, ಹದಿನೈದು ದಿನ ಫಾರಿನ್ ಟೂರ್ ಅಂದ್ರೆ ನಮ್ಮ ಹಳೇ ಮೈಸೂರಿನ ಹೈಕ್ಳು ತಿನ್ನಲು ಏನೂ ಸಿಗಲ್ಲ ಅಂತ ಗೊಣಗಿಕೊಂಡು ಮತ್ತೆ ಒಣಗಿಕೊಂಡು ಕರಿಬೇವ ಕಡ್ಡಿ ಥರಾ ಆಗಿ ಬರ್ತಾರೆ. ಇದೇನು ನೀನು ಮಾತ್ರ ನಾಲಕ್ ಕೆಜಿ ತೂಕ ಏರಿಸಿಕೊಂಡ ಹಾಗಿದೆ? '' ಬಹಿರಂಗವಾಗಿಯೇ ಪ್ರಶ್ನಿಸಿಬಿಟ್ಟ.

''ಯಾಕೆ ತೆಳ್ಳಗಾಗಬೇಕು? ಮನೆಯಲ್ಲಿ ಸಿಗದಷ್ಟು ಕವಳ ಹೊತ್ತುಹೊತ್ತಿಗೆ ಸಿಕ್ಕಾಗ?'' ದಾಮುವಿಗೆ ಪ್ರಶ್ನೆರೂಪದಲ್ಲೇ ಉತ್ತರಿಸಿದ.

''ಮತ್ತೆ ವಿದೇಶದಲ್ಲಿ ಅದರಲ್ಲೂ ಇಟಲಿಯಂಥ ದೇಶದಲ್ಲಿ ನಮ್ಮ ಥರ ಇಡ್ಲಿ, ವಡೆ, ದೋಸೆ, ಪೂರಿ ಇಂಥವು ಸಿಗೋದು ಕನಸು ಅಂತಾರಲ್ಲಯ್ಯ?'' ಸಂದೇಹವಾದಿ ಶಾಂತಯ್ಯ ಕೇಳಿದ.

''ಅದಿಲ್ಲದಿದ್ರೆ ಏನಯ್ಯ ಅದರಪ್ಪನಂಥವು ಸಿಗತ್ತೆ. ನೀನೂ ಒಂದ್ಸರಿ ಹೋಗಿ ಬಂದು ನೋಡು.'' ಅದೇ ಆತ್ಮವಿಶ್ವಾಸ ದಾಮುವಿನ ದನಿಯಲ್ಲಿ.

''ಆಯ್ತಪ್ಪ ಧೀರ, ನಮಗೂ ಸ್ವಲ್ಪ ವಿವರಿಸು. ಮುಂದೆ ಯಾರಾದರೂ ಫಾರಿನ್ ಟೂರ್ ಮಾಡೋವ್ರಿಗೆ ಧೈರ್ಯ ಕೊಡೋಕ್ಕೆ ಬರತ್ತೆ'' ಎಂದೆ ಸೋತು ಶರಣಾದವನಂತೆ.

“ಕೇಳ್ರಯ್ಯ, ಅಲ್ಲಿ ಅಲ್ಲಿ ಲಾಡ್ಜ್ ತಲುಪಿದ ಕೂಡಲೇ ರೂಮಿನ ಕೀ ಸಿಗತ್ತೆ, ಅಲ್ಲಿ ಬಾಗಿಲಲ್ಲೇ ಫ್ರಿಜ್.ತೆಗೆದು ನೋಡಿದ್ರೆ ಹಾಲಿನ ಪ್ಯಾಕೆಟ್, ಅದರ ಮೇಲೆ ಟ್ರೇನಲ್ಲಿ ಬಿಸ್ಕತ್, ಚಿಪ್ಸ್, ಕಾಫಿಪುಡಿ, ಸಕ್ಕರೆ ಇತ್ಯಾದಿ. ಮೂಲೆಯಲಿ ಕೆಟಲ್.

“ಬೆಳಗಾಗೆದ್ದು ಹಲ್ಲುಜ್ಜಿದ ತಕ್ಷಣ ಯಾವೋನ್ನೂ ಕರೀದೇ ನಮ್ಮ ಕಾಫಿ ನಾವೇ ಮಾಡಿಕೊಳ್ಳೋ ಸೌಭಾಗ್ಯ. ಸ್ವಲ್ಪ ಹೊತ್ತಿನಲ್ಲೇ ದೂರವಾಣಿಯಲ್ಲಿ ಕೋಕಿಲ ಕಂಠದ ಸ್ವರ– 'ಉಪಾಹಾರ ಸಿದ್ಧವಿದೆ ಬನ್ನಿ ಅತಿಥಿಗಳೇ' ರಿಸೆಪ್ಷನ್ನಿನಿಂದ ಕರೆ. ಸ್ನಾನ ಆಯ್ತಾ ಅಂತ ಅಪ್ಪಿತಪ್ಪಿಯೂ ಕೇಳೋದೇ ಇಲ್ಲ”.

ಸ್ವಲ್ಪ ವಿರಾಮ ಪಡೆದು ಪ್ರವರ ಮುಂದುವರೆಸಿದ. “ಅಲ್ಲಿಗೆ ಹೋದ ತಕ್ಷಣ ಸ್ವಾಗತಕಾರಿಣಿಯಿಂದ 'ಬನ್ನಿ ಬನ್ನಿ, ನಿಮ್ಮ ಟೇಬಲ್ ನಂಬರ್ ನಾಲ್ಕು' ಎಂಬ ಇನಿದನಿಯ ಮಾರ್ಗದರ್ಶನ. ಅಲ್ಲಂತೂ ಅಣಿಗೊಂಡ ಮೇಜುಗಳಲ್ಲಿ ಕಾಫಿ, ಟೀ, ಹಾಲು, ಬಸಿಯುವ ಯಂತ್ರಗಳು ಮಧುಪಾನಿಗಳನ್ನು ಕೈಬೀಸಿ ಕರೆವ ಬೀರ್ ಪೀಪಾಯಿ. ಇಡೀ ಹಣ್ಣುಗಳು, ಕತ್ತರಿಸಿದ ಘನೀಕೃತ ಹಣ್ಣುಗಳು, ಜಾಮ್, ಜೇನುತುಪ್ಪ, ಬೆಣ್ಣೆ ಇತ್ಯಾದಿಗಳ ಟ್ರೇ, ಬ್ರೆಡ್ ಜತೆಗೆ ಅದನ್ನು ಗರಿಗರಿಮಾಡಿಕೊಳ್ಳಲು ಯಂತ್ರ, ಬೇಯಿಸಿದ ಆಲೂಗಡ್ಡೆ, ಮೊಟ್ಟೆ, ಲೆಕ್ಕವಿಲ್ಲದಷ್ಟು ಚರಪುಗಳು. ನಿಧಾನವಾಗಿ ಸವಿಯುತ್ತ, ತಂಪಾದ ಪ್ರಕೃತಿ ಆಸ್ವಾದಿಸುತ್ತ, ಸುತ್ತ ಸುಳಿಯುವ ಬಣ್ಣದ ಬೀಸಣಿಗೆಗಳ ನೋಡುತ್ತ ಹೊಟ್ಟೆ ಸೇರಿದ್ದೆಷ್ಟೋ ಲೆಕ್ಕವಿಟ್ಟವರು ಯಾರು”. ಅವನಿನ್ನೂ ಆ ಲೋಕದಲ್ಲೇ ಇದ್ದ.

“ಇದು ಉಪಾಹಾರದ ವೈಭವ ಆಯ್ತು. ಊಟದ್ದೇನು? ಅಲ್ಲೇ ಅಲ್ವೇ ಎಡವಟ್ಟು?” ಸಿದ್ದಪ್ಪನ ಕೋಟಿ ವರಹದ ಪ್ರಶ್ನೆ.

“ತಾಳು ಅದನ್ನೂ ವಿವರಿಸ್ತೀನಿ. ಮಧ್ಯಾಹ್ನ ಮತ್ತೆ ರಾತ್ರಿ ಊಟಕ್ಕೆ ಯಾವುದಾದರೂ ಇಂಡಿಯನ್ ರೆಸ್ಟೋರೆಂಟ್ ಅಂತ ಬೋರ್ಡ್ ಇರೋ ಹೋಟೆಲಿಗೆ ಕರೆದುಕೊಂಡು ಹೋಗ್ತಾನೆ ಟೂರ್ ಮ್ಯಾನೇಜರು. ಯಾರೋ ಪಂಜಾಬಿಗಳೋ, ಗುಜರಾತಿಗಳೋ ತಲೆಮಾರುಗಳಿಂದ ನಡೆಸಿಕೊಂಡುಬಂದ ಹೋಟೆಲುಗಳು ಅವು. ಮದ್ಯ, ಮಾಂಸಾಹಾರ, ಸಸ್ಯಾಹಾರ ಎಲ್ಲ ಒಂದೇಕಡೆ ಇರುತ್ತೆ.”

“ಸಸ್ಯಾಹಾರ ಎಂದರೆ?” ಮತ್ತೆ ಸಿದ್ದಪ್ಪನ ಸಂದೇಹ.

“ಅಲ್ಲಿ ಘಮಘಮಿಸುವ ಬಾಸ್ಮತಿ ಅಕ್ಕಿ ಅನ್ನ, ಗೋಧಿ ರೊಟ್ಟಿ, ಕಾಬೂಲ್ ಕಡಲೆ ಕುರ್ಮ, ಸಲಾಡ್, ಆಲೂಗಡ್ಡೆ ಫ್ರೈ ಎಲ್ಲ ಇರತ್ತೆ. ಒಳ್ಳೆ ಮೊಸರು, ರಾತ್ರಿ ಸ್ವೀಟು ಅಥವಾ ಐಸ್ಕ್ರೀಮು, ಹೇಳ್ರಯ್ಯ ಇದರಲ್ಲಿ ತಿನ್ನಬಾರದ್ದು ಏನಿದೆ? ನೀವೂ ಶನಿವಾರ ರಾತ್ರಿ ಈಟ್ ಔಟ್ ಅಂತ ಸಂಸಾರಸಮೇತ ಹೋಗಿ ಇಂಥವನ್ನೇ ಅಲ್ಲವೇ ಆರ್ಡರ್ ಮಾಡೋದು?” ಪ್ರಶ್ನಿಸಿದ ದಾಮೂ.

“ಮತ್ತೆ ಪಿಜ್ಜಾ ಬರ್ಗರ್ ಇತ್ಯಾದಿ” ಮತ್ತೊಂದು ಅನುಮಾನ ಗುಪ್ತನಿಗೆ.

“ಅದೂ ಮಜವಾಗಿರತ್ತೆ ಬಿಡ್ರಯ್ಯ. ಪಿಜ್ಜಾ ನಮ್ಮಲ್ಲಿ ಪದರ ಚಪಾತಿ ಇದ್ದ ಹಾಗೆ. ಬರ್ಗರ್ ಕೂಡ ಬೊಂಬಾಟೇ. ಬಾಯಿ ತೆರೆದ ಬನ್ನಿನಲ್ಲಿ ಚೀಸ್, ತರಕಾರಿ ಇತ್ಯಾದಿ ತುರುಕಿ ಮುಂದಿಡುತ್ತಾರೆ. ಅದನ್ನು ತಿನ್ನಲು ಬಾಯಿ ದೊಡ್ಡದಿರಬೇಕು ಅಷ್ಟೆ! ಇನ್ನು ಫ್ರೆಂಚ್ ಫ್ರೈ ಕರಿ ಅಲೂಗೆಡ್ಡೆ ಅಂದರೆ ಚಿಪ್ಸ್ ತರಹ .ತಿನ್ನಬಾರದ್ದೇನೂ ಅಲ್ಲ.” ಸಮಜಾಯಿಷಿ ನೀಡಿದ ದಾಮೂ.

ನಾನು ಚರ್ಚೆ ಸಮಾಪ್ತಿಗೊಳಿಸುವ ದನಿಯಲ್ಲಿ, “ಹಾಗಾದ್ರೆ ಅಲ್ಲಿನ ಆಹಾರ ಏನೂ ತೊಂದರೆ ಇಲ್ಲ ಅನ್ನು “ ಎಂದೆ

“ಹಾಗನ್ನೋವ್ರನ್ನ ನನ್ನೆದುರು ತಂದು ನಿಲ್ಲಿಸು. ಸರಿಯಾಗಿ ಬೆಂಡೆತ್ತಿಬಿಡ್ತೇನೆ” ಎಂದು ಅಬ್ಬರಿಸಿ ಅಲ್ಲಿಂದ ಹೊರಟ ದಾಮೂ.

ವಿದೇಶಯಾತ್ರೆ ಏರ್ಪಡಿಸುವ ಪ್ರವಾಸಿ ಸಂಸ್ಥೆಗಳು ಆಹಾರ ಸೇವನೆ ವಿಷಯದಲ್ಲಿ ನಮ್ಮ ದಾಮೋದರನನ್ನೇ ಏಕೆ ಬ್ರಾಂಡ್ ರಾಯಭಾರಿಯನ್ನಾಗಿ ನೇಮಿಸಿಕೊಳ್ಳಬಾರದು ಅಂತ ನಮ್ಮ ಕಾಫಿಕಟ್ಟೆ ಗುಂಪಿಗೆ ಅಂದು ಅನ್ನಿಸಿದ್ದು ಅಚ್ಚರಿಯೇನಲ್ಲ.

***



ಇರುವು ಮತ್ತು ಇರುವೆ

– ಜಾನಕಿರಾಮ

1
ವಿಭಾತ ಕಾಲದಿ ಅಶ್ವತ್ಥದ ಒಣಗೆಲೆಯ ಆಸ್ತರದ
ಮೇಲೆ ಇರುವೆಯದೊಂದು ಸಾಗುತಿತ್ತು
ಕಡುಗಪ್ಪು ಮೈಬಣ್ಣ ಅಗಸೆ ಗಾತ್ರದ ದೇಹ
ತುಂಡು ವ್ರೀಹಿಯ ಹೊದ್ದು ಹೋಗುತಿತ್ತು
ನೆಲಕೆ ಕಂಗಳನೆಟ್ಟು ಉಸಿರ ತುಸು ತುಸು ಬಿಟ್ಟು
ತರುವಿನಲಿ ಬ್ರಹ್ಮನನು ಪರಿಕಲ್ಪಿಸಿ
ಹೇಳಿತೆಂತಹ ಮಾತು ವಿನಯದಲಿ ತಲೆವಾಗಿ
ಮನಸಿರುವ ಮನುಜರೇ ಸರಿಯಾಲಿಸಿ

2
"ನಾನೊಂದು ಕಿರುಜೀವ ಕೀಟಯೋನಿಯ ಜಾತ
ಸಾಭಾರ ನಮನವನು ಸಲ್ಲಿಸುವೆನು
ಶ್ವಾಸಕೆ ಗಾಳಿಯನು ಹೊಟ್ಟೆಗೆ ಅನ್ನವನು
ದಾಹಕ್ಕೆ ಜಲವನ್ನು ಈ ದೇಹ ಆತ್ಮವನು
ವದಗಿಸಿದ ಪರಮಾತ್ಮಗೆ ವಂದಿಸುವೆನು
ಭಾವಗಳ ಭಾವಿಸುವ ಅರಿವಸಿರಿ ನೀಡಿರುವೆ
ವಿಹರಿಸಲು ಭೋಗಿಸಲು ಸೃಷ್ಟಿ ರಚಿಸಿರುವೆ
ನಿನ್ನ ಕರಿನೆರಳಲ್ಲಿ ಸಿಹಿ ಶಾಂತಿ ಇಟ್ಟಿರುವೆ
ಈ ತುಚ್ಛ ಜೀವದಲು ಪ್ರೀತಿ ಇಟ್ಟಿರುವೆ
ಮೂಲಮೂಲದಲಿ ಶುಂಡ ಕಾಂಡದಲಿ
ಪತ್ರ ಪತ್ರದಲಿ ಪರ್ಣಶಾದದಲಿ
ರೆಂಬೆ ಕೊಂಬೆಯಲಿ ಫಲ್ಯ ಮಾಲ್ಯದಲಿ
ಪುಟ್ಟ ಗೂಡಿನಲಿ ದಟ್ಟ ಕಾಡಿನಲಿ
ನಿನ್ನುಸಿರ ಕಂಡಿರುವೆ ಶಿರಸಿ ನಮಿಸಿರುವೆ

ಎನಗಿತ್ತ ಭಾಗ್ಯಕೇ ನೆನೆಸುತಿಲ್ಲ ಹೇ ಭಗವನ್
ನನಗೆಂದೂ ದೊರೆಯದ ಅನ್ಯರಿಗೆ ನೀನಿತ್ತ
ದತ್ತವರಗಳಿಗಾಗಿಯೂ ನಮಿಸುತಿರುವೆ
ಭಾಗ್ಯ ಅವರವರ ಪಾಲಿಗೆ ಎಂದೆಣಿಸುತಿರುವೆ

3
ಸಂಹತಾಶ್ವಗಳ ವೇಗವನು ನಾ ಕಂಡೆ
ಸುಪರ್ಣನ ಕಂಡೆ ಮರುದ್ವೇಗ ಸಂಚಾರಿ
ಸೌಂದರ್ಯ ವರ್ಣಖಣಿ ಮಯೂರನ ಕಂಡೆ
ಸ್ಫೀತಗಾತ್ರ ಕರಿರಾಜನ ಶಕ್ತಿಯನೂ ನಾ ಕಂಡೆ
ಅವರವರ ಕರ್ಮಕೆ ಪುಣ್ಯಕೆ ನಿನ್ನ ದಾನವೆಂದುಕೊಂಡೆ
ತನ್ನ ಚಕ್ರ, ಬೆಂಕಿ, ಬುದ್ಧಿ, ವಿಚಾರ, ಕಲೆ,
ಆಸೆಗಳೊಂದಿಗೆ ನರನನೂ ಕಂಡೆ ನಾ
ಬಡವನಾಗಿ ಹಸಿವ ಬೆಂಕಿಯಲಿ ಬೆಂದ ನರ
ಸಿರಿವಂತನಾಗಿ ನೆಮ್ಮದಿಗಾಗಿ ಹಪಹಪಿಸುವ ನರ
ಕಿರೀಟಗಳ ಭಾರದಲಿ ಬಾಗಿದ ಕುತ್ತಿಗೆಯ ನರ
ಎಲ್ಲವೂ ಬೇಕೆಂದು ಸಕಲಕೂ ದೂರವಾಗುವ ನರ
ನೋವು ಗರ್ವಗಳಿಂದ ಭರಿತ ಮಾನಸ ನರ
ಆದರೂ ಶೂನ್ಯ... ಶೂನ್ಯನಾಗಿಹ ನರ
ಬಂಗಾರದರಮನೆಯಲಿ ರಾವಣರ ಸಾಕ್ಷಿಸಿದೆ
ದಂಡಕದ ಘನವನದಿ ರಾಮರಿರುವುದ ಕಂಡೆ
ದೇಹವಿದ್ದೂ ರುಂಡವಿಲ್ಲದ ಕಬಂಧರ ಕಂಡೆ
ಪರರ ಒಳಿತನು ಬಯಸಿ ಮನೆ ಮುರಿವ
ಕುಬ್ಜ ಮಾನಸ ಮಂಥರೆಯರ ಕಂಡೆ

4
ದಕ್ಕಿದ್ದನ್ನು ಗಳಿಸಿದ್ದನ್ನು ಉಳಿಸಿಕೊಳ್ಳಲಾಗದ ಜನರನು
ನಿತ್ಯವೆಂದು ನಂಬಿ ಮೆರೆದವರ ಗೋರಿಗಳನು
ನಿನ್ನ ಚರಣಕೆ ಅರ್ಪಣೆಗೊಂಡು ಬಾಡಿದ ಹೂಗಳನು
ನೆರಳನಿತ್ತ ಮರಗಳನು, ಜ್ಞಾನವಿತ್ತ ಗುರುಗಳನು
ಕಂಡೆ ಎಲ್ಲವೂ ಧೂಳಾಗುವುದನು, ನಶ್ವರತೆಯನು
ಯಾವ ಮಸಿಯಲೂ ಬರೆಯದ ನಿನ್ನ ನಿಯಮಗಳಿಗೆ
ಪ್ರೀತಿ ವಿಶ್ವಾಸದಿಂದ ತಲೆಬಾಗುವುದ ಕಲಿತಿರುವೆ
ದೇಶಕಾಲದಿಂದಾಚೆ ಕಿಂಚಿತ್ ವಿಸ್ತಾರ ದೃಷ್ಟಿಸಲು
ಪರದುಃಖಾನುಭವದಿಂದ ತಿಳಿದು ಬಲಿತಿರುವೆ
ಇರುವುದೆಲ್ಲ ಸೌಭಾಗ್ಯ ಇಲ್ಲದಿರುವುದೂ ಭಾಗ್ಯ
ಎಂದು ಭಾವಿಸಿ ವ್ರೀಹಿಯನು, ಜನುಮವನು ಸಾಗಿಸುತ್ತಿರುವೆ
ಧನ್ಯ ಧನ್ಯ ಹೇ ಮಹಾದ್ರುಮ ! ಧನ್ಯ ಧನ್ಯ"

5
ವಿಚಾರದಲಿ ಮಗ್ನ ವಮ್ರ ತಾ ಸಾಗುತಿರೆ
ಓಡುತಿಹ ದನಗಳ ಗೊರಸಿನಡಿಗೆ
ಸಿಕ್ಕು ಹತವಾಯಿತು ಗತವಾಯಿತು ಪುಟ್ಟಜೀವ
ಆ ತುಂಡು ಅಕ್ಕಿ ಅಲ್ಲಿಯೇ ಇದೆ ಈಗಲೂ
ಭಗವಂತನಿಗೆ ನೈವೇದ್ಯವಾಗಿ.... ವೇದ್ಯವಾಗಿ

***

ಪುಸ್ತಕ ಪರಿಚಯ

“ಪದ್ದಣ – ಮನೋರಮೆ”

ಪ್ರಕಾರ : ಲಘು ಪ್ರಸಂಗ-ಕಥೆಗಳು

(ಮುದ್ದಣ ಮನೋರಮೆ ಅವರ ಕ್ಷಮೆ ಕೋರಿ)

– ಎನ್.ವಿ. ರಘುರಾಂ.

ಮುದ್ದಣ – ಮನೋರಮೆಯ ಸಲ್ಲಾಪದ ಬಗ್ಗೆ ಕೇಳದೆ ಇರುವವರು ಬಹುಶಃ ಯಾರೂ ಇಲ್ಲ. ಇದಕ್ಕೆ ಕಾರಣವೆಂದರೆ ಇದು ಶಾಲೆಯಲ್ಲಿ ಇರುವಾಗಲೇ ಪಠ್ಯದ ಪುಸ್ತಕದಲ್ಲಿ ಬಂದಿರುವುದು. ಅದಕ್ಕಿಂತ ಹೆಚ್ಚಾಗಿ ಆ ಪಾಠದಲ್ಲಿ ಬರುವ "ಪದ್ಯಂ ವದ್ಯಂ ಗದ್ಯಂ ಹೃದ್ಯಂ" ಮತ್ತು "ನೀರಿಬಿಯದ ಗಂಟಲೊಳ್ ಕಡುಬಂ ತುಱುಕಿದಂತಾಯ್ತು", "ಕನ್ನಡ ಕತ್ತುರಿಯಲ್ತೆ." ಸಾಲುಗಳು ಎಲ್ಲ ಓದುಗರಿಗೂ ಆಪ್ತವಾಯಿತು. "ನೀರಿಳಿದ ಗಂಟಲಲ್ಲಿ....." ಸಾಲುಗಳನ್ನು ನಾವು ಇಂಗ್ಲಿಷ್ ಕಲಿಯುವಾಗಲೂ ಮನಸ್ಸಿನಲ್ಲಿ ಅಂದುಕೊಂಡಿದ್ದು ನೆನಪಿದೆ. ಹಾಗಾಗಿ "ಪದ್ದಣ – ಮನೋರಮೆ" ಶೀರ್ಷಿಕೆಯ ಪುಸ್ತಕವೊಂದನ್ನು ನೋಡಿದ ತಕ್ಷಣ ತನ್ನ ಶೀರ್ಷಿಕೆಯಿಂದಲೇ ಅದು ಕುತೂಹಲ ಮೂಡಿಸುತ್ತದೆ. ಲೇಖಕಿ ಶ್ರೀಮತಿ ಶಾಲಿನಿ ಹೂಲಿ ಪ್ರದೀಪ್ ಬರೆದು ಪ್ರಕಟಿಸಿದ ಮೊದಲ ಪುಸ್ತಕವಿದು.



ಪುಸ್ತಕವೊಂದು ಚೆನ್ನಾಗಿದೆ ಎಂದು ಹೇಳಲು ಒಬ್ಬೊಬ್ಬರು ಒಂದೊಂದು ರೀತಿಯ ಮಾನದಂಡ ಇಟ್ಟುಕೊಂಡಿರುತ್ತಾರೆ. ನನ್ನ ಪ್ರಕಾರ ಪುಸ್ತಕವೊಂದು ಸಾಧ್ಯವಾದರೆ ಒಂದೆರಡು ಗುಕ್ಕಿಗೆ ಓದಿಸಿಕೊಂಡು ಹೋಗಬೇಕು. ನಂತರ ಪುಸ್ತಕದಲ್ಲಿ ಬರುವ ಪ್ರಸಂಗಗಳು ಓದುಗ ತಾನು ಕೇಳಿದ, ನೋಡಿದ, ಅನುಭವಿಸಿದ ಪ್ರಸಂಗಗಳ ಜೊತೆ ಗುರುತಿಸಿಕೊಳ್ಳುವಂತೆ ಇರಬೇಕು. ಆನಂತರ ಪ್ರಸಂಗಗಳಿಂದ ಕಲಿಯುವ ಪಾಠಗಳು ನಿಧಾನವಾಗಿಯಾದರೂ ಓದುಗನ ಮನಸ್ಸಿನಲ್ಲಿ ಅರಳುತ್ತಾ ಹೋಗಬೇಕು. ಈ ಮೂರೂ ಗುಣಗಳು ಈ ಪುಸ್ತಕದಲ್ಲಿರುವ ಪ್ರಸಂಗ-ಕಥೆಗಳಲ್ಲಿವೆ. ಹಾಗಾಗಿ ಇದೊಂದು ಚೆನ್ನಾಗಿರುವ ಪುಸ್ತಕ.

ಮುದ್ದಣ ತನ್ನ ಉತ್ತರ ರಾಮಾಯಣದ ಬೃಹತ್ ಕಥೆಯನ್ನು ಹೇಳುವಾಗ ಮುದ್ದಣ-ಮನೋರಮೆ ಸಲ್ಲಾಪದ ವಿಷಯ ಬರುತ್ತದೆ. ಆದರೆ ಈ ಪುಸ್ತಕ ಬೃಹತ್ ಕಥೆಯಿರುವ ಕಾದಂಬರಿಯಲ್ಲ. ಇದೊಂದು ೨೪ ಲಘು ಬರಹಗಳನ್ನು ಒಳಗೊಂಡ ಪುಸ್ತಕ. ಆದರೆ ಮುದ್ದಣ-ಮನೋರಮೆಯ ಸಲ್ಲಾಪದಂತೆ ಸರಳ ಕಸ್ತೂರಿ ಕನ್ನಡದಲ್ಲಿ ಬಂದಿದೆ. ಅಲ್ಲಲ್ಲಿ ಹಾರ್ಟ್, ಸೆಲೆಬ್ರಟಿ ಎನ್ನುವ ಇಂಗ್ಲಿಷ್ ಪದಗಳು ಬಂದಿದ್ದರೂ, ಕಡುಬು ತುರಿಕಿದಂತೆ ಆಗದೆ, ಮನಸ್ಸಿನಲ್ಲಿ ಸರಾಗವಾಗಿ ಇಳಿಯುತ್ತದೆ. ಇದರ ಜೊತೆಗೆ ಸಣ್ಣ ಕಥೆಗಿಂತ ಸ್ವಲ್ಪ ಸಣ್ಣ, ಪುಟ್ಟ ಕಥೆಗಿಂತ ಸ್ವಲ್ಪ ದೊಡ್ಡದಾಗಿರುವ ಬರಹಗಳು ನೇರವಾದ ನಿರೂಪಣಾ ಶೈಲಿಯಿಂದ ಈಗೀನ ಸಾಮಾಜಿಕ ಜಾಲತಾಣಗಳಲ್ಲಿ ಬರುವ 'ಶಾರ್ಟ್ಸ್'ಗಳಿಗೆ ಒಗ್ಗಿಕೊಂಡಿರುವ ಓದುಗರನ್ನು ಕೂಡ ತನ್ನ ತೆಕ್ಕೆಗೆ ತೆಗೆದುಕೊಳ್ಳುವುದರಲ್ಲಿ ಅನುಮಾನವಿಲ್ಲ.

ಅಲ್ಲಿ ಮುದ್ದಣ ಮೆಚ್ಚಿನ ಮಡದಿಯ ಆಸೆಯಂತೆ ಕಥೆ ಹೇಳಿದರೆ, ಇಲ್ಲಿ ಮನೋರಮೆಯೇ ಎಲ್ಲರಿಗೂ ಅನೇಕ ಪ್ರಸಂಗಗಳನ್ನು ಮತ್ತು ಕಥೆಗಳನ್ನು ಹೇಳುತ್ತಾಳೆ.

ಪದ್ದಣ- ಮನೋರಮೆ
(ಮುದ್ದಣ ಮನೋರಮೆ ಅವರ ಕ್ಷಮೆ ಕೋರಿ)
ಪ್ರಕಾರ : ಲಘು ಪ್ರಸಂಗ-ಕಥೆಗಳು
ಲೇಖಕಿ: ಶಾಲಿನಿ ಹೂಲಿ ಪ್ರದೀಪ್.
ಪ್ರಕಾಶನ: ಆಕೃತಿ ಕನ್ನಡ ಪ್ರಕಾಶನ.
ಬೆಲೆ: ರೂ.೧೫೦.

ಮರಣ ಹೊಂದಿದ ಪರಿಚಯಸ್ತರ ಮನೆಗೆ ಹೋದಾಗ ಮೃತದೇಹಕ್ಕೆ ಉಡುಸಿರುವ ಬೆಲೆಬಾಳುವ ಕಾಜೀವರಂ ಸೀರೆ ಮತ್ತು ವಜ್ರದ ಮೂಗುಬಟ್ಟು ಒಂದು ಕಥೆ ಹೇಳಿದರೆ, ದಪ್ಪಗಿರುವ ಗಂಡನ ಆಸೆ ಈಡೇರಿಸಲು ಸಣ್ಣ ಆಗಲು ಹೋಗಿ ಮರಣ ಹೊಂದಿದ ಆ ಹೆಂಗಸಿನ ಕಥೆ ತೆರೆದುಕೊಳ್ಳುತ್ತದೆ. ಈ ತರಹದ ಗಂಭೀರವಾದ ವಿಷಯಗಳನ್ನು ಕೂಡ "ಗೆಳೆಯನ ಹೆಂಡತಿ ರೈಟ್ ಹೇಳಿದಾಗ" ಎಂಬ ಶೀರ್ಷಿಕೆಯ ಅಡಿಯಲ್ಲಿ ಪದ್ದಣ-ಮನೋರಮೆಯ ಲಘು ಸಂಭಾಷಣೆಯ ಜೊತೆ, ಜೊತೆಯಲ್ಲಿ ತೆರೆದಿಟ್ಟಿರುವ ರೀತಿ ಅನನ್ಯ.

ಇದೇ ರೀತಿ ಈಗಿನ ಸಾಮಾಜಿಕ ಜಾಲತಾಣಗಳಲ್ಲಿ ಕಾರಣವಿಲ್ಲದೇ ಅರಳುವ ಪ್ರೀತಿಯ ಬಗ್ಗೆ ಒಂದಿಷ್ಟು ಪ್ರಸಂಗಗಳು ನಗು ತರಿಸದೇ ಇರುವುದಿಲ್ಲ. ಇನ್ನೊಂದು ಕಡೆ ಹೆಣ್ಣಿನ ಬಣ್ಣ, ಆಕಾರ, ಅಲಂಕಾರಗಳ ಬಗ್ಗೆ ಹೇಳುತ್ತಾ ಸಾಗುವ ಪ್ರಸಂಗಗಳು ಪದ್ದಣನನ್ನು ಆಗಾಗ ಪೇಚಿಗೆ ಸಿಲುಕಿಸಿದರೂ, ಆ ಬಗ್ಗೆ ಹೆಣ್ಣಿಗೆ ಕೀಳರಿಮೆ ಬೇಡ ಎಂದು ಹೇಳುವುದರಲ್ಲಿ ಯಶಸ್ವಿಯಾಗಿವೆ. ಪದ್ದಣ ಜೋಳದ ರೊಟ್ಟಿ ಜೊತೆ ಖಾರದ ಪಲ್ಯ ತಿಂದು ಒದ್ದಾಡುವ ಸಂದರ್ಭದಲ್ಲಿ ಹಳ್ಳಿಯ ಜನರ ನಿಷ್ಕಲ್ಮಶ ಪ್ರೀತಿಯ ಅನಾವರಣವಾದರೆ, ಶಾಲೆಯ ಪರೀಕ್ಷೆಗಳಲ್ಲಿ ಹಿಂದಿದ್ದ ಕಥೆಗಾರ್ತಿ ಜೀವನದ ಪರೀಕ್ಷೆಯಲ್ಲಿ ಮುಂದೆ ಬಂದಿರುವ ವಿಷಯ ಇನ್ನೊಂದು ಕಥೆಯಲ್ಲಿ ತೆರೆದುಕೊಳ್ಳುತ್ತದೆ.

ಹೆಣ್ಣಿನ ಭ್ರಮೆ, ಕನಸು, ದುಡಿಮೆ, ದಾಂಪತ್ಯದಲ್ಲಿ ಹೊಂದಾಣಿಕೆ, ಮಕ್ಕಳ ಜವಾಬ್ದಾರಿ ಹೀಗೆ ಹತ್ತು ಹಲವು ವಿಷಯಗಳ ಸುತ್ತ ಬಂದಿರುವ ಕಥೆಗಳು ಓದುಗರನ್ನು ಬರಹಗಳಲ್ಲಿರುವ ಪಾತ್ರಗಳನ್ನಾಗಿ ಮಾಡಿಕೊಳ್ಳುವುದರಲ್ಲಿ ಯಶಸ್ವಿಯಾಗಿವೆ. ಅದರ ಜೊತೆಗೆ ಪದ್ದಣನಿಗೆ ಮನೋರಮೆ ಮೇಲಿರುವ ಪ್ರೀತಿ, ಆಗಾಗ ಬರುವ ಕೋಪ, ಆತ ಮಾಡಿಕೊಳ್ಳುವ ಹೊಂದಾಣಿಕೆ ಜೊತೆಗೆ ಆಕೆಗೆ ಕೊಡುವ ಗೌರವ ಕೂಡ ತೆರೆದುಕೊಂಡು ಬರಹದಲ್ಲಿ ಸಾಕಷ್ಟು ಸಮತೋಲನವನ್ನು ಕಾಪಾಡಿಕೊಳ್ಳುತ್ತದೆ. ಹಾಗಾಗಿ ಪುಸ್ತಕದ ಶೀರ್ಷಿಕೆಯು ಓದುಗರ ಮನದಲ್ಲಿ ಹೊತ್ತು ತರು ವನಿರೀಕ್ಷೆಗಳನ್ನು ಮುಟ್ಟುವುದರಲ್ಲಿ ಸಾಕಷ್ಟು ಯಶಸ್ವಿಯಾಗುತ್ತದೆ.

ಲಘು ಬರಹಕ್ಕೆ ತಕ್ಕಂತ ಶೀರ್ಷಿಕೆಗಳೂ ಕೂಡ ಗಮನ ಸೆಳೆಯುತ್ತದೆ. "ಹಾರ್ಟ್ ಢಂ ಅಂದ್ರೇ.....", "ಲಿಲ್ಲಿ ಗಂಡನ ಕಥೆ", "ಅಬ್ಬಾ...! ಆದಿನ", "ಸೆಲೆಬ್ರಟಿ ಗಂಡಾ-ಗುಂಡಿ ಕೈ ಕೈ" ಮುಂತಾದ ಶೀರ್ಷಿಕೆಗಳು ಅರ್ಥವತ್ತಾಗಿದೆ.


"ಆಕೃತಿ ಕನ್ನಡ" ಎಂಬ ಸಾಮಾಜಿಕ ಜಾಲತಾಣದ ಸಂಪಾದಕರಾಗಿ ಕನ್ನಡ ಭಾಷೆಗೆ ತನ್ನದೇ ಆದ ಕೊಡುಗೆ ನೀಡುತ್ತಿರುವ ಶ್ರೀಮತಿ ಶಾಲಿನಿ ಹೂಲಿ ಪ್ರದೀಪರ ಮೊದಲ ಈ ಪುಸ್ತಕ ಆಕೃತಿ ಕನ್ನಡ ಪ್ರಕಾಶನದಿಂದ ಪ್ರಕಟವಾಗಿದೆ. ಇಲ್ಲಿನ ಬಹುಪಾಲು ಕಥೆಗಳು ಈಗಿನ ಸಮಾಜದಲ್ಲಿ ಕಾಣುವ ಸತ್ಯತೆಯನ್ನು ಹಿಡಿದಿಟ್ಟಿವೆ. ಲೇಖಕಿಯ ನಿರೂಪಣಾ ಶೈಲಿ ಸರಳ, ನೇರ, ಹಾಗೆಯೇ ಗಂಭೀರವಾದ ಸಂಗತಿಗಳನ್ನು ತಿಳಿ ಹಾಸ್ಯದ ಹೊದಿಕೆಯಲ್ಲಿ ಹೇಳುವಲ್ಲಿ ಚಾತುರ್ಯ ತೋರಿಸಿದ್ದಾರೆ. ಲೇಖಕಿ ತಮ್ಮ ಮೊದಲ ಸಂಕಲನದಲ್ಲಿ ಸಾಹಿತ್ಯದ ಅಂಗಳಕ್ಕೆ ಭರವಸೆಯ ಹೆಜ್ಜೆ ಇಟ್ಟಿದ್ದಾರೆ. ಈ ಲಘು ಬರಹಗಳ ಹಿಂದಿನ ಗಂಭೀರ ಚಿಂತನೆ, ಕಲಾತ್ಮಕ ದೃಷ್ಟಿಕೋನ ಮತ್ತು ಸಮಕಾಲೀನ ಸಮಾಜದ ಪ್ರತಿಫಲನಗಳು ಬರಹಗಳಲ್ಲಿ ಕಂಡು ಬಂದಿದೆ. ಅಲ್ಲಲ್ಲಿ ವಿಸ್ತರಿಸಲು ಕೂಡ ಸಾಕಷ್ಟು ಅವಕಾಶವಿದೆ. ಮುಂದಿನ ದಿನಗಳಲ್ಲಿ ಇವರಿಂದ ಕನ್ನಡ ಸಾರಸ್ವತ ಲೋಕ ಇನ್ನಷ್ಟು ಸಂಪದ್ಭರಿತವಾಗಲಿ ಎಂದು ಆಶಿಸುತ್ತೇನೆ.

ಮುದ್ದಣ-ಮನೋರಮೆಯ ಸಲ್ಲಾಪದಲ್ಲಿ "ಒಂದು ಒಳ್ಳೆಯ ಕಥೆ ಹೇಳಿದರೆ ಅರಮನೆಯಲ್ಲಾದರೆ ರತ್ನದ ಕಡಗ, ಹೊನ್ನಿನ ಹಾರವನ್ನು ಮೆಚ್ಚುಗೆಯೆಂದು ಕೊಡುವರು. ನೀನೇನು ಕೊಡುತ್ತೀ?" ಎಂದು ಮುದ್ದಣ ಮನೋರಮೆಗೆ ಕೇಳುತ್ತಾನೆ. ಆಗ

"ಅರಮನೆಯವರಾದರೂ ಕಾವ್ಯ ಹೇಗಿದೆ ಎಂದು ನೋಡಿದ ಮೇಲೆಯೇ ಅಲ್ಲವೇ ಉಡುಗೊರೆ ಕೊಡುವುದು? ಹಾಗೆಯೇ ನಾನು ಸಹ ಕಥೆ ಕೇಳಿದಮೇಲೆ ಸೊಗಸಾಗಿದ್ದರೆ ಸನ್ಮಾನಿಸುವೆ" ಎಂದು ಮನೋರಮೆ ಹೇಳುವ ಮಾತು ಬರುತ್ತದೆ. ಈಗ ನಾನು "ಪದ್ದಣ-ಮನೋರಮೆ" ಎನ್ನುವ ಸೊಗಸಾದ ಪುಸ್ತಕ ಓದಿರುವುದರಿಂದ, ಕಥೆ ಹೇಳಿದ ಲೇಖಕಿಗೆ ಅಭಿನಂದನೆಗಳನ್ನು ಸಲ್ಲಿಸುವ ಸಮಯ ಬಂದಿದೆ. ಉತ್ತಮ ಪುಸ್ತಕ ಕೊಟ್ಟ ಲೇಖಕಿಗೆ ಧನ್ಯವಾದಗಳು.

***

ಮಧುರಾಂತರಂಗ



ಮುಖಪುಟ ಚಿತ್ರಕ್ಕೊಂದು ಭಾವಗೀತೆ

ಮುಖಪುಟಕ್ಕಾಗಿ ವರ್ಣಚಿತ್ರ ರಚಿಸಿದ ವೇದಿಕೆಯ ಹಿರಿಯ ಸದಸ್ಯರೂ ಸ್ವತಃ ಕಲಾವಿದರೂ ಆದ ಶ್ರೀ ಕೆ.ಆರ್.ಎಸ್. ಮೂರ್ತಿಯವರು ಈ ಚಿತ್ರಕ್ಕೊಂದು ಭಾವಗೀತೆಯನ್ನೂ ರಚಿಸಿದ್ದಾರೆ. ಅವರ ಕಲಾಕೃತಿ ಮತ್ತು ಕವನಕ್ಕಾಗಿ ಶ್ರೀ ಮೂರ್ತಿಯವರಿಗೆ ವಿಶೇಷ ಧನ್ಯವಾದಗಳು. (ಇದು ದಾಸೋಹದಲ್ಲಿ ಪ್ರಸ್ತುತಿ ಪಡಿಸಿದ ಕವನವಲ್ಲ)

ರಾಧೆ

-ಕೆ.ಆರ್.ಎಸ್. ಮೂರ್ತಿ

ಮಧುರ ಸಂಜೆಯ ಸಮಯ ಸರಸಕೆ
ಮುರಳಿ ಮೋಹನ ವನದಲಿ
ಬಯಸಿ ರಾಧೆಯ ತವಕ ಮುಖದಲಿ
ಪುಳಕಕಂಕುರ ಮನದಲಿ

ಕರೆಯು ಹೋಯಿತು ಗೀತೆ ಗಾನದಿ
ಸಲಿಲಸ್ವರದಲಿ ಲಲನೆಗೆ
ಮುಗುದೆ ಓಗೊಡುತಲವನ ಕರೆಗೆ
ರಾಧೆ ಬಂದಳು ಮೆಲ್ಲಗೆ!

ಬಂದ ರಾಧೆಯು ಮೆಲ್ಲಗಲ್ಲಿಗೆ
ಅಪ್ಪಿ ಬೆಚ್ಚಗೆ ನಿಂದಳು
ನೀಲಮುಖದಳಗಳಲಿ ಅರಳುತ
ರಾಧೆ ಅಲ್ಲೇ ಮರೆಯೊಳು!

ಸ್ವರವನೂಡಿಸಿ ಬಿದಿರ ಕೊಳಲಲಿ
ಅಧರ ಕಂಪನವಾದಳು
ಗಾಳಿಯಲೆಯಲಿ ಲಹರಿಯಾಗುತ
ರಾಧೆ ನಕ್ಕಳು ಮರೆಯೊಳು!

ಗೋಪಿ, ಗೋಪಗೆ ಮುದವ ನೀಡುತ
ರಾಧೆ ನಲಿವಲಿ ನಗುವಳು
ಘನತೆ ಪೊಂದಿಹ ರಾಧೆ ಬನದೊಳು
ಗುಪ್ತಗಾಮಿನಿ ಚೆಲುವೊಳು!

ಶುದ್ಧ ಪ್ರೇಮವೆ ರಾಧೆಯಂದದಿ
ಮಿಲನ ಶಾಶ್ವತ ಅವನೊಳು
ಮರೆಯಲತಿಶಯದೊಲವ ರೂಪದ
ಭಾವ ಬಿಂಬವೆ ಜಗದೊಳು!

***

ಮನೆ ಮನೆ ಕತೆ

– ಟಿ.ಎಸ್.ಶ್ರವಣ ಕುಮಾರಿ

ರಾಮಣ್ಣ ಮತ್ತು ಸೀತಕ್ಕ ಮೂವತ್ತು ವರ್ಷದ ಹಿಂದೆ ಬೆಂಗಳೂರಿಗೆ ಬಂದಾಗ ಹುಮ್ಮಸ್ಸಿನಲ್ಲಿ ಓಡಾಡುವ ಪ್ರಾಯವಲ್ಲ. ಮಗನೇ ಕರೆಸಿಕೊಂಡದ್ದಕ್ಕೆ ಊರು ಬಿಟ್ಟು ಬಂದವರಿಗೆ ಇಲ್ಲಿ ಸ್ವಂತ ಜನರಿಲ್ಲ. ಮಲೆನಾಡಿನ ಒಂದು ಮೂಲೆಯಲ್ಲಿ ಜೀವನವನ್ನು ಕಳೆದವರಿಗೆ, ಈ ವಿಶಾಲವಾದ ಬೆಂಗಳೂರಿನಲ್ಲಿ ಹೇಗೆ ಕಾಲ ಕಳೆಯಬಹುದೆಂದು ತಿಳಿಯದು. ಮೊಮ್ಮಕ್ಕಳೊಡನೆ ಸಂತಸದಿಂದ ಕಳೆದ ಒಂದೈದು ವರ್ಷವಷ್ಟೇ ಅವರಿಗೆ ಸುಖವೆನಿಸಿತ್ತು. ಆದರೆ ಈಗ್ಗೆ ಇಪ್ಪತ್ತೈದು ವರ್ಷಗಳ ಹಿಂದೆ ಒಂದೆರೆಡು ವರ್ಷಕ್ಕೆಂದು ಅಮೇರಿಕಾದ ದಾರಿ ಹಿಡಿದ ಮಗ, ಹೆಂಡತಿ–ಮಕ್ಕಳನ್ನು ಕರೆಸಿಕೊಂಡ ಮೇಲೆ ಒಂದೆರೆಡಿದ್ದದ್ದು ನಾಲ್ಕೈದಾಗಿ, ಅದು ಎಂಟು ಹತ್ತಾಗಿ ಕಡೆಗೆ ಲೆಕ್ಕ ತಪ್ಪಿಹೋಯಿತೆನ್ನಿ. ಇವರಿಬ್ಬರಿಗೂ ಬದುಕಿನಲ್ಲಿ ಆಸಕ್ತಿ ಕುಂದತೊಡಗಿತಷ್ಟೇ.

ಕರ್ತವ್ಯವೆಂಬಂತೆ ವರ್ಷ, ಎರಡು ವರ್ಷಕ್ಕೊಮ್ಮೆ ಮುಖ ತೋರಿಸಿ ಹೋಗುತ್ತಿದ್ದ ಮಗನ ಸಂಸಾರಕ್ಕೆ ಅಲ್ಲಿನ ಪೌರತ್ವ ಸಿಕ್ಕು, ಅಲ್ಲಿಯೇ ಮನೆ ಕೊಂಡು ಮಕ್ಕಳೂ ಅಲ್ಲಿನ ಸಂಸ್ಕೃತಿಗೆ ಒಗ್ಗಿಹೋದಮೇಲೆ ಮರಳುವರೆಂಬ ಕನಸನ್ನಾದರೂ ಕಾಣಲು ಸಾಧ್ಯವೇ! ಇಲ್ಲಿದ್ದಾಗ ಅಜ್ಜಿ, ತಾತನ ಹಿಂದೆಮುಂದೇ ಸುತ್ತುತ್ತಿದ್ದ ಮೊಮ್ಮಕ್ಕಳೂ ಕಾಲಕ್ರಮೇಣ ಅವರನ್ನು ಮರೆತುಬಿಟ್ಟರು. ಆದರೆ ಇವರಿಬ್ಬರಿಗೂ ವಯಸ್ಸಾಗುತ್ತಿತ್ತಲ್ಲ. ಜೊತೆಗೆ ವಯೋಸಹಜವಾಗಿ ಬಿ.ಪಿ., ಶುಗರ್, ಅಸಿಡಿಟಿ, ಸುಸ್ತು, ಕೈಕಾಲು ನೋವು ಎಲ್ಲವೂ ಕರೆಯದೆ ಬರುವಂತವೇ. ಇಬ್ಬರೂ ಒಂದಷ್ಟನ್ನು ಹಂಚಿಕೊಂಡರು, ಇನ್ನಷ್ಟನ್ನು ಒಟ್ಟಿಗೇ ಅನುಭವಿಸಿದರು. ತಮ್ಮ ಮನೆಯ ಅಕ್ಕಪಕ್ಕದ ಜನರನ್ನೇ ತಮ್ಮ, ತಂಗಿ ಎಂದು ಬಂಧುಗಳನ್ನಾಗಿ ಮಾಡಿಕೊಂಡು, ಮನೆಗೆಲಸದ ಚೆನ್ನಿಯನ್ನೇ ಗೃಹಕೃತ್ಯದ ಆಡಳಿತಗಾರ್ತಿಯನ್ನಾಗಿಸಿಕೊಂಡು, ಅಪಾರ್ಟ್‌ಮೆಂಟಿನ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದ ಸೀನಪ್ಪನಿಗೇ ತಮ್ಮ ಮನೆಯ ಉಸ್ತುವಾರಿಯನ್ನೂ ವಹಿಸಿಕೊಟ್ಟು ಪ್ರತಿಫಲವಾಗಿ ಇಬ್ಬರಿಗೂ ಒಂದಿಷ್ಟು ದುಡ್ಡು, ಮನೆಯಲ್ಲೇ ಕಾಫಿ, ತಿಂಡಿ, ಊಟವನ್ನು ಕೊಟ್ಟುಕೊಂಡು ಬದುಕನ್ನು ಸ್ವಲ್ಪಮಟ್ಟಿಗೆ ಸಹನೀಯವನ್ನಾಗಿ ಮಾಡಿಕೊಂಡಿದ್ದರು.

ಯಾವಾಗಲೋ ವರ್ಷಕ್ಕೊಂದೆರೆಡು ಬಾರಿ ಕೆಲಸದ ಮೇಲೆ ಬಂದು ಹೋಗುತ್ತಿದ್ದ, ವಾರಕ್ಕೋ, ಹದಿನೈದು ದಿನಕ್ಕೋ ಒಮ್ಮೆ ಕರೆಮಾಡುತ್ತಿದ್ದ ಮಗನಿಗೇಕೋ ಮುದುಕರಿಬ್ಬರನ್ನೂ ತಮ್ಮೊಂದಿಗೆ ಕರೆದೊಯ್ಯಬೇಕೆಂದು ಅನ್ನಿಸಲೇ ಇಲ್ಲ. ಖಾಯಮ್ಮಾಗಿ ಅಲ್ಲದಿದ್ದರೂ, ವರ್ಷದಲ್ಲೊಂದು ಆರು ತಿಂಗಳ ಮಟ್ಟಿಗಾದರೂ, ಕರೆದೊಯ್ಯಬಹುದಿತ್ತೇನೋ; ಆದರೆ ಅಲ್ಲಿ ಮುದುಕರು ಹುಷಾರು ತಪ್ಪಿದರೆ ಗತಿಯೇನು?! ಅವರ ವೈದ್ಯಕೀಯ ಖರ್ಚನ್ನು ಭರಿಸಲು ಸಾಧ್ಯವೇ! ಒಬ್ಬನ ದುಡಿಮೆಯಲ್ಲಿ ಅಲ್ಲಿ ಸಂಸಾರ ಸಾಗುತ್ತಿದೆ. ದುಡಿಯುತ್ತಿರುವ ಮಕ್ಕಳು ಮದುವೆ ಮಾಡಿಕೊಂಡು ದೂರದಲ್ಲಿದ್ದಾರೆ. ಅದು ಅಮೇರಿಕಾ; ಭಾರತವಲ್ಲ. ಎಲ್ಲಾ ಭಾವನಾತ್ಮಕ ಸಂಬಂಧಗಳನ್ನೂ ಹಣದ ಮುಂದೆ ಹತ್ತಿಕ್ಕಿಬಿಡುವ ಭೂಮಿ; ಹಾಗಾಗಿ ಇವರಿಲ್ಲಿಯೇ... ಅವರಲ್ಲಿಯೇ...

ಈ ಬಾರಿ ಮಗ ಬರುವಾಗ ಸೀತಕ್ಕನಿಗೆ ಎಂಭತ್ತು ದಾಟಿ, ಖಾಯಿಲೆಗಳಿಂದ ಸಾಕಷ್ಟು ಬಳಲಿಹೋಗಿದ್ದರು. ಅಡುಗೆ ಕೆಲಸವೂ ಕೈಸಾಗದಂತಾಗಿಹೋಗಿತ್ತು. ರಾಮಣ್ಣನವರಿಗೆ ಜೀವಮಾನದಲ್ಲಿಯೇ ಅಡುಗೆಮನೆಗೆ ಹೊಕ್ಕು ಅಭ್ಯಾಸವಿಲ್ಲದಿದ್ದರೂ ಈಗ ಬೇರೆ ಉಪಾಯವಿಲ್ಲದೆ, ತಿಂಡಿಗೆ ಬ್ರೆಡ್ಡನ್ನು ತಿಂದುಕೊಂಡು ಚೆನ್ನಿಯ ನೆರವಿನಿಂದ ದಿನ ಸಾಗಿಸಲು ಒಂದಿಷ್ಟು ಅನ್ನವನ್ನು ಬೇಯಿಸುತ್ತಿದ್ದರು. ಮಗನೇನೋ ಅಲ್ಲಿಂದ ಬರುವಾಗೆಲ್ಲಾ ಬೇಕಾದಷ್ಟು ಒಣಹಣ್ಣುಗಳನ್ನು, ಶಕ್ತಿ ತುಂಬುವ ಗುಳಿಗೆಗಳನ್ನು ತಂದಿಡುತ್ತಿದ್ದ. ಆದರೆ ತೆಗೆದು ತಿನ್ನುವ ಮನಸ್ಸನ್ನು ತಂದುಕೊಡಲು ಸಾಧ್ಯವೇ!

ಸೀತಕ್ಕನಿಗಂತೂ ಶೌಚಾಲಯಕ್ಕೆ ಹೋಗಲೂ ನೆರವು ಬೇಕಾದ ಸ್ಥಿತಿಯಾಗಿಹೋಯಿತು. ಚೆನ್ನಿ ಇಲ್ಲದಾಗ ಯಮಯಾತನೆ! ಅವಳಾದರೂ ಮಿಕ್ಕೆಲ್ಲಾ ಮನೆಗಳ ಕೆಲಸ ಬಿಟ್ಟು ಇಲ್ಲಿರಲು ಸಾಧ್ಯವೇ?! ಯಾವ ಆಳುಕಾಳುಗಳ ನೆರವಿಲ್ಲದೇ ತಮ್ಮ ಮನೆಯ ಎಲ್ಲಾ ಕೆಲಸಗಳನ್ನೂ ತಾವೇ ಮಾಡಿಕೊಳ್ಳುವ ಅಮೇರಿಕಾದ ಮಗನಿಗೆ ಕಡೆಗೂ ಈಗ ತಂದೆಗೂ ತೊಂಭತ್ತರ ಸಮೀಪ,

ಅವರೇನಾದರೂ ಸಹಾಯ ಮಾಡಲು ಹೋಗಿ ಎದ್ದೋಬಿದ್ದೋ ಕೈಕಾಲು ಮುರಿದುಕೊಂಡರೆ ಪರಿಸ್ಥಿತಿ ಇನ್ನೂ ಭೀಕರ ಎನ್ನುವ ಜ್ಞಾನೋದಯವಾಯಿತು.

ಅಲ್ಲಿನ ರಿವಾಜಿನಂತೆ ಯಾವುದಾದರೂ ವೃದ್ಧ ಕುಟೀರಕ್ಕೆ ಇಬ್ಬರನ್ನೂ ಸೇರಿಸಿಬಿಡಲು ಹಿಂಜರಿಕೆ. ತಾನು ಕೆಲಸದ ಮೇಲೆ ಯಾವಾಗಲಾದರೂ ಬಂದು ವಾರ, ಹದಿನೈದು ದಿನ ಇರುವಾಗ ವಾಸ್ತವ್ಯಕ್ಕೆ ಒಂದು ಮನೆ ಬೇಡವೇ. ಜೊತೆಗೆ ಲೋಕೋಪವಾದದ ಭೀತಿ ಬೇರೆ! ಒಬ್ಬನೇ ಮಗನೆಂದು ತನ್ನ ಆಸೆಗೆ ನೀರೆರೆದು ಬದುಕಿಗಾಧಾರವಾಗಿದ್ದ ಎರಡೆಕರೆ ಹೊಲವನ್ನೂ ಮಾರಿ ತನ್ನನ್ನು ಓದಿಸಿದ್ದವರು ಅವರು; ಈಗವರನ್ನು ಮುದಿ ದನವನ್ನು ದೊಡ್ಡಿಗಟ್ಟುವಂತೆ ಅಟ್ಟಲು ಸಾಧ್ಯವೇ?! ಒಳ್ಳೆಯ ಮಗನೆಂದು ಹೆಸರು ಪಡೆದುಕೊಂಡಿದ್ದವನಲ್ಲವೇ! ಕಡೆಗೊಂದು ಪರಿಹಾರದಂತೆ ಅಮ್ಮನನ್ನು ನೋಡಿಕೊಳ್ಳಲು ಹಗಲಿರುಳೂ ಮನೆಯಲ್ಲೇ ಇರುವ ದಾದಿಯೊಬ್ಬಳನ್ನು ನೇಮಿಸಿದ. ಬೆಳಗಿನ ತಿಂಡಿ, ಮಧ್ಯಾಹ್ನದ ಊಟ, ರಾತ್ರಿಯ ಊಟ ಎಲ್ಲವನ್ನೂ ಬೆಳಗ್ಗೆಯೇ ಒಬ್ಬರು ಮನೆಗೆ ತಂದುಕೊಡುವ ವ್ಯವಸ್ಥೆ ಮಾಡಿದ. ಚೆನ್ನಿಗೂ ಮತ್ತು ಸೀನಪ್ಪನಿಗೂ ಎಂದಿನಂತೆಯೇ ಸಹಕರಿಸಬೇಕೆಂದು ಕೋರಿಕೊಂಡು ತನ್ನ ಕರ್ತವ್ಯವನ್ನು ಪೂರೈಸಿದ ನೆಮ್ಮದಿಯಿಂದ ಅಮೇರಿಕಾಗೆ ಮರಳಿದ.

ಅಂತೂ ಏಜೆನ್ಸಿಯ ಮೂಲಕ ಬಲಗಾಲಿಟ್ಟು ಒಳಗೆ ಬಂದ ಮಂಜುಳಾ ನಿಧಾನವಾಗಿ ಇಡೀ ಮನೆಯನ್ನು ಆಕ್ರಮಿಸಿಕೊಳ್ಳ ತೊಡಗಿದಳು. ಮಗ ಬಂದಾಗ ಉಳಿದುಕೊಳ್ಳುವುದಕ್ಕೆ ಬೇಕೆಂದು ಬಿಡುವಾಗಿ ಇರಿಸಿಕೊಂಡಿದ್ದ ದೊಡ್ಡ ಕೊಠಡಿ ಅವಳದ್ದಾಯಿತು. ಕೋಣೆಯಲ್ಲಿದ್ದ ಮಂಚ, ಬೀರು, ಕನ್ನಡಿ, ಪುಟ್ಟ ಟೀವಿ ಎಲ್ಲವೂ ಕ್ರಮೇಣ ಅವಳದ್ದೇ ಆಗಿಹೋದವು. ಮುದುಕರಿಬ್ಬರಿಗೆ ಸಾಮಾನ್ಯ ಸ್ನಾನದ ಕೋಣೆಯಾದರೆ ಅವಳಿಗೆ ಆ ಕೋಣೆಗೆ ಹೊಂದಿಕೊಂಡಿದ್ದ ಖಾಸಗಿ ಶೌಚಾಲಯ. ನಲಿಯುತ್ತಾ ಮೊಬೈಲಲ್ಲಿ ಮಾತನಾಡಲು ಬಾಲ್ಕನಿ ಬೇರೆ. ಅವರಿಬ್ಬರಿಗೆ ತಂದಿಟ್ಟ ಅಡುಗೆಯಾದರೆ ಇವಳು ಹೊತ್ತುಹೊತ್ತಿಗೆ ಬಿಸಿಬಿಸಿಯಾಗಿ ತಾನೇ ಮಾಡಿಕೊಂಡು ತಿನ್ನಲು ಬೇಕಾದ್ದೆಲ್ಲವನ್ನೂ ತರಿಸಿಕೊಳ್ಳುತ್ತಿದ್ದಳು.

ಬೆಳಗ್ಗೆ ಮನೆಕೆಲಸಕ್ಕೆ ಚೆನ್ನಿ ಬೇಗ ಬರುವುದರಿಂದ ಸೀತಕ್ಕನ ಶೌಚ ಕಾರ್ಯಕ್ರಮಕ್ಕೆ ಒದ್ದಾಡಬೇಕಿರಲಿಲ್ಲ. ರಾತ್ರಿ ಬಾಗಿಲು ಜಡಿದು ಮಲಗಿದ ಮಂಜುಳಾ ಆರಾಮಾಗಿ ಎಂಟಕ್ಕೆದ್ದು ಆಕಳಿಸುತ್ತಾ ಹೊರಬರುತ್ತಿದ್ದಳು. ಬಿಸಿಯಾಗಿ ಸ್ಟ್ರಾಂಗ್ ಕಾಫಿ ಮಾಡಿಕೊಂಡು ಬಾಲ್ಕನಿಯ ಕುರ್ಚಿಯಲ್ಲಿ ಕುಳಿತು ಕುಡಿಯುತ್ತಾ, ಬೆಳಗಿನ ಮೊಬೈಲ್ ಶುಭೋದಯವನ್ನೆಲ್ಲಾ ಮುಗಿಸಿ ಬರುವಾಗಲೇ ಒಂಭತ್ತು ಗಂಟೆ ಹೊಡೆದಿರುತ್ತಿತ್ತು. ನಂತರ ಸಾವಕಾಶವಾಗಿ "ಸ್ನಾನಕ್ಕೇಳ್ತೀರಾಮ್ಮಾ" ಎಂದು ರಾಗವಾಗಿ ಹಾಡುತ್ತಾ ಬಕೇಟಿಗೆ ನೀರನ್ನು ತೋಡುತ್ತಿದ್ದಳು. ಬೆಳಗ್ಗೆ ಬೇಗನೇ ಸ್ನಾನ ಮಾಡಿ ತಿಂಡಿ ತಿನ್ನುವ ಅಭ್ಯಾಸದ ಸೀತಕ್ಕನಿಗೆ ಈಗ ವೇಳೆ ತಪ್ಪಿಹೋಗಿ ಅಸಿಡಿಟಿ ಹೆಚ್ಚಾಗುತ್ತಿತ್ತು. ರಾಮಣ್ಣನವರೂ ಹೇಳಿಕೇಳಿ ಶುಗರ್ ಪೇಶೆಂಟ್. ರಾತ್ರಿ ಎಂಟಕ್ಕೆ ಊಟ ಮುಗಿಸಿರುತ್ತಿದ್ದವರಿಗೆ ಬೆಳಗ್ಗೆ ಏಳುವಾಗಲೇ ಹಸಿವೆ. ಬೆಳಗಿನ ತಿಂಡಿ ತಿಂದು ಔಷಧಿ ತೆಗೆದುಕೊಳ್ಳುವ ವೇಳೆಗೇ ಇಬ್ಬರೂ ಬಳಲಿಹೋಗಿರುತ್ತಿದ್ದರು. "ನೀನು ಸ್ವಲ್ಪ ಬೇಗೆದ್ದು ನಮ್ಮ ಸ್ನಾನ, ತಿಂಡಿ ಕಡೆ ನಿಗಾ ಕೊಡಬೇಕಮ್ಮ" ಎಂದರೆ "ಆಗ್ಲೀಮ್ಮಾ" ಎಂದು ಹೇಳಿದ ಎರಡೇ ದಿನಕ್ಕೇ ಮತ್ತೆ ಮೊದಲಿನ ಚಾಳಿಯೇ. ಇದು ಅವಳು ನೀಡುತ್ತಿದ್ದ ಸೇವೆಯ ಒಂದು ಸ್ಯಾಂಪಲ್ ಅಷ್ಟೇ. ನಂತರ ದಿನವಿಡೀ ಇದೇ ಕತೆಯೇ...

ಅಷ್ಟು ಹೊತ್ತಿಗೆ ದಿನದ ಅಭ್ಯಾಸದಂತೆ ತಿಂಡಿ ತಿನ್ನಲು ಬರುವ ಚೆನ್ನಿಗೂ, ಮಂಜುಳಾನಿಗೂ ಯಾವುದಾದರೂ ಒಂದು ಕಾರಣಕ್ಕೆ ಸಣ್ಣ ಕದನ. ಕೆಲವೊಮ್ಮೆ ಅದು ದೊಡ್ಡದಾಗಿ ಅಕ್ಕಪಕ್ಕದ ಮನೆಗೂ ದಾಟಿಹೋಗುತ್ತಿತ್ತು. ಚೆನ್ನಿಗೆ ತಾನು ಆ ಮನೆಯಲ್ಲಿ ಮೂವತ್ತು ವರ್ಷದಿಂದ ದುಡಿಯುತ್ತಿರುವ ಸೀನಿಯಾರಿಟಿಯ ಹಿರಿಮೆ. ಇವಳಿಗೋ ತಾನು ಇಪ್ಪತ್ನಾಲ್ಕು ಗಂಟೆಯೂ ಮನೆಯಲ್ಲಿದ್ದುಕೊಂಡು ಮುದುಕರ ಶುಶ್ರೂಷೆ(?) ನೋಡುತ್ತಿರುವ ಗರಿಮೆ. ಇಬ್ಬರೂ ಅರಚಾಡಿ, ಜಗಳವಾಡುತ್ತಿದ್ದರೆ ಬಿಡಿಸಲು ಸಾಧ್ಯವಿಲ್ಲದೆ ಮುದುಕರಿಬ್ಬರೂ ತಲೆಮೇಲೆ ಕೈಹೊತ್ತು ಬಡವಾಗಿಬಿಡುತ್ತಿದ್ದರು. ತಲೆಕೆಟ್ಟು ಮಗನಿಗೆ ಕರೆಮಾಡಿ ಹೇಳಿದರೆ, ಅವನು "ನೀವಿಬ್ರೂ ವಯಸ್ಸಾಗಿರೋರು. ಅವ್ರು ನಿಮಗೆ ಸಹಾಯ ಮಾಡಕ್ಕೆ ಬಂದಿರೋವ್ರು.

ಅವ್ನ ಜಗ್ಗ ಅವ್ನಾಡ್ಕೊಳ್ಳಿ. ದೊಡ್ಡವ್ರು ನೀವು ಅನುಸರಿಸಿಕೊಂಡು ಹೋಗ್ಬೇಕು'' ಎಂದು ಇವರನ್ನೇ ದೂಷಿಸುತ್ತಿದ್ದ. ಮಗನ ಬಳಿ ಹೇಳುವುದನ್ನೇ ಬಿಟ್ಟುಬಿಟ್ಟರು.

ಈ ಬಾರಿ ಮಗನೊಂದಿಗೆ ಸೊಸೆಯೂ ಬಂದಿದ್ದಳು. ತಮ್ಮ ಕೋಣೆಯನ್ನು ಮಂಜುಳಾ ಆಕ್ರಮಿಸಿಕೊಂಡಿರುವುದರಿಂದ ಬೇರೆಡೆಯಲ್ಲಿ ವಾಸ್ತವ್ಯ ಹೂಡಿ ಆಗೀಗ ಮನೆಗೆ ಬರುತ್ತಿದ್ದರು. ಚೆನ್ನಿಯ ಮೇಲೆ ಮಂಜುಳಾನೂ, ಮಂಜುಳಾ ಮೇಲೆ ಚೆನ್ನಿಯೂ ಅವರಿಬ್ಬರೂ ಮುದುಕರ ಮೇಲೂ ಒಂದು ದೂರಿನ ಪಟ್ಟಿಯನ್ನು ತಯಾರಿಸಿಕೊಂಡಿದ್ದರು. ಕೇಳಿ ತಲೆಕೆಟ್ಟ ಮಗನೊಂದಿಗೆ ಸೊಸೆಯೂ "ನಾವು ನಿಮಗೋಸ್ಕರ ಎಷ್ಟೆಷ್ಟು, ಏನೇನು ತಂದುಕೊಟ್ಟರೂ, ನೀವು ಒಂದನ್ನೂ ಉಪಯೋಗಿಸಲ್ಲ. ನಾವು ಬಂದು ಬಾಯಿಗಿಡಕ್ಕಾಗತ್ತಾ? ದಾದಿಯ ವ್ಯವಸ್ಥೆ ಮಾಡಿದರೂ ಅವರನ್ನೇ ದೂರ್ತೀರ. ನಾವೆಷ್ಟು ಮಾಡಿದರೂ ನಿಮಗೆ ಬೆಲೆಯಿಲ್ಲ'' ಎಂದು ಮಗನೊಂದಿಗೆ ತನ್ನ ಹಾಡನ್ನೂ ಹಾಡಿದಳು. ಅಂದು ಮೌನವಾದ ಸೀತಕ್ಕ ವಾರದೊಳಗೆ ಚಿರಮೌನಕ್ಕೇ ಜಾರಿಬಿಟ್ಟರು... ರಾಮಣ್ಣನವರನ್ನು ಕರೆದೊಯ್ಯದೆ ಗೋಕರ್ಣಕ್ಕೆ ಹೋಗಿ ಕರ್ಮಾಂತರ ಮುಗಿಸಿ ಬಂದ ಮಗ-ಸೊಸೆ "ಎಲ್ಲಾ ವ್ಯವಸ್ಥೆ ಮಾಡಿದೀವಿ. ನಿಮ್ಮ ಆರೋಗ್ಯ ಚೆನ್ನಾಗಿ ನೋಡಿಕೊಳ್ಳಿ'' ಎಂದು ಸಲಹೆಯಿತ್ತು ವಿಮಾನವನ್ನು ಹತ್ತಿದರು.

ಸೀತಕ್ಕ ಕಾಲವಾದ ನಂತರ ರಾಮಣ್ಣ ತೀರಾ ಒಬ್ಬಂಟಿಯಾಗಿಬಿಟ್ಟರು. ಇಬ್ಬರಲ್ಲಿ ಯಾರು ಮೊದಲು ಎನ್ನುವ ಪ್ರಶ್ನೆಗೆ ಎಂಭತ್ತೊಂಭತ್ತು ವರ್ಷದ ಸೀತಕ್ಕ ಉತ್ತರವನ್ನು ಕೊಟ್ಟು ಹೊರಟಿದ್ದರು. ಸರಿಸುಮಾರು ಎಪ್ಪತ್ತು ವರ್ಷಗಳ ಸುಧೀರ್ಘ ದಾಂಪತ್ಯ ಜೀವನವನ್ನು ಒಟ್ಟಾಗಿ ಸಾಗಿಸಿದ್ದವರಿಗೆ ಈಗ ತಮ್ಮ ಜೀವನದ ಒಂದು ಭಾಗವೇ ಖಾಲಿಯಾಗಿಹೋಯಿತು ಅನ್ನಿಸಿದ್ದರಲ್ಲಿ ಅಚ್ಚರಿಯೇನಿಲ್ಲ. ದಿನವಿಡೀ ಮಂಕಾಗಿ ಕುಳಿತಿರುತ್ತಾರೆ. ಎಂದಿನಂತೆ ಚೆನ್ನಿ, ಮಂಜುಳಾ ಕಿತ್ತಾಡತೊಡಗಿದರೆ ಮೆಲ್ಲನೆದ್ದು ಹೊರಬಂದು ಒಂಟಿ ಸ್ಟೂಲಿನ ಮೇಲೆ ಕೂರುತ್ತಾರೆ. ಅವರಪ್ಪಣೆಗೆ ಮಣಿಯದೆ ಕಣ್ಣಹನಿ ಉದುರತೊಡಗುತ್ತದೆ...


***



ನೋಡಿಯೋ ಸಾಹಿತ್ಯ ದಾಸೋಹದಲ್ಲಿ ತಲ್ಲೀನನಾದ ಗಣಪ

ಹರಿ ಅನಂತ ಹರಿಕಥಾ ಅನಂತ...

– ಜಿ.ವಿ.ಅರುಣ



"ಹರಿ ಅನಂತ, ಹರಿಕಥಾ ಅನಂತ..." ಗೋಸ್ವಾಮಿ ತುಳಸಿದಾಸರ ಶ್ರೀರಾಮಚರಿತಮಾನಸದ ಅತ್ಯಂತ ಪ್ರಸಿದ್ಧವೂ ಲೊಕಪ್ರಿಯವೂ ಆದ ಚೌಪಾಯಿ – ನಮ್ಮ ಚೌಪದಿ ಇದ್ದಂತೆ. ಅಂತ್ಯವಿಲ್ಲದಾತನ ಕಥೆಗಳಿಗೂ ಅಂತ್ಯವಿಲ್ಲ ಅಲ್ಲವೇ? ತುಳಸಿದಾಸರ ಈ ಸಾಲುಗಳನ್ನು ನಾನು ನೆನೆಸಿಕೊಳ್ಳಲು ಕಾರಣ ಇತ್ತೀಚೆಗೆ ನಾನು ಕೇಳಿದ ಪ್ರೊ॥ ಅನಂತರಾವ್ ಅವರ ಕಥಾಕಾಲಕ್ಷೇಪ. ಅವರು ನನ್ನ ಹಿತೈಷಿಗಳು; ಕಿರಿಯರನ್ನು ನಾಚಿಸುವಂಥ ಲವಲವಿಕೆಯ 82 ವರ್ಷಗಳ ಆ ಹಿರಿಯರ ಆಹ್ವಾನ ನನಗೆ ಬಹುದಿನಗಳ ಒಂದು ಆಸೆಯನ್ನು ತಣಿಸಿತ್ತು. ಅದಕ್ಕೆ ಕಾರಣ ಅವರು ಇಂಗ್ಲಿಷ್ ಭಾಷೆಯಲ್ಲಿ ಮಾಡಿದ ಅಶ್ವಘೋಷನ ಬುದ್ಧಚರಿತದ ಕಥಾಕಾಲಕ್ಷೇಪ.

ಪ್ರೊ॥ ಅನಂತರಾವ್ ಆನ್ವಯಿಕ ಗಣಿತಶಾಸ್ತ್ರವನ್ನು ಆಸ್ಟ್ರೇಲಿಯಾದ ಹಾಗು ಹಲವು ಅಂತರರಾಷ್ಟ್ರೀಯ ವಿಶ್ವವಿದ್ಯಾಲಯಗಳಲ್ಲಿ ಬೋಧನೆ ಮಾಡಿದವರು. ಎಲಾಸ್ಟೋ ಡೈನಾಮಿಕ್ಸ್ ಕುರಿತ ಸಂಶೋಧನೆಗಳನ್ನು ಮಾಡಿದ್ದಾರೆ. ಭಾರತೀಯ ಕಲೆ, ಸಾಹಿತ್ಯಗಳಲ್ಲಿ ಅವರ ಅಪಾರ ಆಸಕ್ತಿಯನ್ನು ಗಮನಿಸಿ, ಆಸ್ಟ್ರೇಲಿಯಾದ ರಾಷ್ಟ್ರೀಯ ವಿಶ್ವವಿದ್ಯಾನಿಲಯವು ತನ್ನ ಸ್ಕೂಲ್ ಆಫ್ ಕಲ್ಚರ್, ಹಿಸ್ಟರಿ ಅಂಡ್ ಲ್ಯಾಂಗ್ವೇಜ್‌ನಲ್ಲಿ ಭಾರತೀಯ ಸಾಹಿತ್ಯ ಮತ್ತು ಕಲೆಗಳಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆರಿಸಿಕೊಂಡಿದೆ. ಈಗ ಸಿಡ್ನಿಯಲ್ಲಿ ನೆಲೆಸಿದ್ದಾರೆ.

ಗಣಿತಶಾಸ್ತ್ರದ ವೃತ್ತಿಯ ಜೊತೆಗೆ ಅವರ ಪಾಂಡಿತ್ಯಪೂರ್ಣ ಪ್ರವೃತ್ತಿಯ ಒಲವು ಕನ್ನಡ ಹಾಗೂ ಸಂಸ್ಕೃತ ಭಾಷೆಗಳಲ್ಲಿರುವ ಮಹಾಕಾವ್ಯಗಳ ಮೇಲೆ. ಹಾಗಾಗಿ ತಮಗೆ ಇಷ್ಟವಾದ ಮಹಾಕಾವ್ಯಗಳ ಅಧ್ಯಯನವನ್ನು ನಿರಂತರವಾಗಿ ಮಾಡಿಕೊಂಡು ಬರುತ್ತಿದ್ದಾರೆ. ಅವುಗಳಿಂದ ಆರಿಸಿದ ಕಥೆಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಹರಿಕಥೆಯ ರೂಪದಲ್ಲಿ ಹೇಳುವುದನ್ನು ರೂಢಿಸಿಕೊಂಡಿದ್ದಾರೆ. ಆಸ್ಟ್ರೇಲಿಯಾ, ಸಿಂಗಾಪುರ್, ಇಂಗ್ಲೆಂಡ್, ಜರ್ಮನಿ ದೇಶಗಳಲ್ಲಿ ತಮ್ಮ ವಿಶೇಷ ಹರಿಕಥಾ ಶೈಲಿಯನ್ನು ಪರಿಚಯಿಸಿದ್ದಾರೆ.

ಇವರ ಕಥೆ ಹೇಳುವ ವಿಧಾನ ಅನುಕರಣೀಯ. ಅದು ಮೂಲ ಸಂಸ್ಕೃತ ಶ್ಲೋಕಗಳನ್ನು ಸಂಗೀತಕ್ಕೆ ಅಳವಡಿಸಿಕೊಂಡು ಶ್ರುತಿಬದ್ಧವಾಗಿ, ಸುಶ್ರಾವ್ಯವಾಗಿ ಹಾಡಿ ಅದರ ವಿವರಣೆಯನ್ನು ಇಂಗ್ಲಿಷ್ ಭಾಷೆಯಲ್ಲಿ ಮಾಡುವುದು. ಬೆಂಗಳೂರಿನಲ್ಲಿ ಕಾರ್ಯಕ್ರಮಗಳನ್ನು ಕೊಟ್ಟಾಗ ಇಂಗ್ಲಿಷ್ ಜೊತೆಗೆ ಕನ್ನಡ ಭಾಷೆಯನ್ನು ಉಪಯೋಗಿಸುತ್ತಾರೆ.

ಒಮ್ಮೆ ಜರ್ಮನಿಯ ಲೈಪ್‌ಜ಼ಿಗ್ ವಿಶ್ವವಿದ್ಯಾನಿಲಯದಲ್ಲಿ ಒಂದು ಹರಿಕಥೆಯನ್ನು ಪ್ರಸ್ತುತ ಮಾಡಿದ್ದರು. ಆ ಸಂದರ್ಭದಲ್ಲಿ ಅಲ್ಲಿಗೆ ಬಂದಿದ್ದ ಪ್ರಾಧ್ಯಾಪಕರೊಬ್ಬರು 'ಭಗವಾನ್ ಬುದ್ಧ ಕೂಡ ಭಾರತದವನು. ಅವನ ಕಥೆಯನ್ನು ನೀವು ಏಕೆ ಹೇಳಬಾರದು?' ಎಂದು ವಿಚಾರಿಸಿದರು. ಅದನ್ನು ಗಂಭೀರವಾಗಿ ಪರಿಗಣಿಸಿದ ಶ್ರೀ ಅನಂತರಾವ್, ಪ್ರಶಕ್ತ ಶಕೆ ಎರಡನೇ ಶತಮಾನದಲ್ಲಿ ಅಶ್ವಘೋಷನು ಬರೆದ ಸಂಸ್ಕೃತ ಮಹಾಕಾವ್ಯ ಬುದ್ಧಚರಿತವನ್ನು ಅಭ್ಯಾಸ ಮಾಡಿದರು.

ಇದರ ಫಲವನ್ನು ಏಪ್ರಿಲ್ ತಿಂಗಳ ಕೊನೆಗೆ ಬೆಂಗಳೂರಿನಲ್ಲಿ ಆಹ್ವಾನಿತ ಶ್ರೋತೃಗಳ ಎದುರು ತೆರೆದಿಟ್ಟರು. ಅವರು ಶ್ರುತಿಬದ್ಧವಾಗಿ, ರಾಗಸಹಿತ ಅಶ್ವಘೋಷನ ಸಂಸ್ಕೃತ ಕಾವ್ಯವನ್ನು ಹಾಡಿದಾಗ ಅದರ ಮಾಧುರ್ಯದ ಅರಿವಾಯಿತು. ಅತಿ

ಪ್ರಾಚೀನ ಕಾವ್ಯವಾದರೂ ಅದರಲ್ಲಿನ ಸಂಸ್ಕೃತ ಭಾಷೆಯು ಸುಲಲಿತವಾಗಿದೆ ಎಂಬುದು ಅನಂತರಾವ್ ಅವರ ಮಾತುಗಳನ್ನು ಕೇಳಿದಾಗ ಉಂಟಾಯಿತು.

ಅವರ ಪ್ರವಚನದಲ್ಲಿ ಉದ್ವೇಗವಿರುವುದಿಲ್ಲ. ಮಾತಿನ ಜೊತೆಗೆ ಹಾಡುವುದು ಸಮ್ಮಿಳಿತವಾಗಿರುವುದರಿಂದ ಏಕತಾನತೆ ಇರುವುದಿಲ್ಲ. ಕಾವ್ಯದಲ್ಲಿರುವ ವಿವಿಧ ರಸಗಳನ್ನು ಸೊಗಸಾಗಿ ನಮಗೆ ದಾಟಿಸಿಬಿಡುತ್ತಾರೆ. ಕಾವ್ಯದ ಒಟ್ಟಂದ ಮನದಟ್ಟಾಗಿರುತ್ತದೆ. ವಿವಿಧ ಪಾತ್ರಗಳ ಹಿರಿಮೆ, ಅವುಗಳ ಪರಸ್ಪರ ಸಂಬಂಧಗಳು, ಕಥೆಯ ಹಂದರದಲ್ಲಿ ಅವುಗಳ ಸ್ಥಾನ ಇವುಗಳ ಪರಿಚಯವಾಗಿರುತ್ತವೆ. ಒಳ್ಳೆಯ ಕಾವ್ಯವನ್ನು ಆಸ್ವಾದಿಸಿದ ಆನಂದದ ಜೊತೆಗೆ ಮೂಲ ಕಾವ್ಯವನ್ನು ಓದಬೇಕೆಂಬ ಆಕಾಂಕ್ಷೆಯೂ ಮೂಡಿರುತ್ತದೆ. ಇದು ಅವರ ವ್ಯಾಖ್ಯಾನದ ಅನುಕರಣೀಯ ಶೈಲಿ.

ಆಸ್ಟ್ರೇಲಿಯಾದಲ್ಲಿ ಪ್ರೊ॥ ಅನಂತರಾವ್ ಅವರು ಕಥಾಕಾಲಕ್ಷೇಪವನ್ನು ಒಲಿಸಿಕೊಂಡ ಪರಿ ರೋಚಕವಾಗಿದೆ. 1983ರ ಆಸುಪಾಸಿನಲ್ಲಿ ಅವರು ಅಡಿಲೇಡ್ ನಗರದಲ್ಲಿದ್ದರು. ಆಗ ಅಲ್ಲಿ ದೇವಸ್ಥಾನವು ಇರಲಿಲ್ಲ. ಅಲ್ಲಿ ವಿವಿಧ ಭಾಷೆಗಳನ್ನು ಮಾತನಾಡುವ, ಶ್ರೀಲಂಕಾ, ಸಿಂಗಾಪುರ್, ಮಲೇಶಿಯಾ, ಫಿಜಿ, ದಕ್ಷಿಣ ಆಫ್ರಿಕಾ, ವೆಸ್ಟ್ ಇಂಡೀಸ್ ಮುಂತಾದ ಕಡೆಗಳಿಂದ ಬಂದಿದ್ದ ಹಿಂದೂಗಳು ವಾಸವಾಗಿದ್ದರು. ಅವರುಗಳು ಭಾನುವಾರ ಬೆಳಗ್ಗೆ ಯಾರದ್ದಾದರೂ ಒಬ್ಬರ ಮನೆಯಲ್ಲಿ ಸೇರುತ್ತಿದ್ದರು.

ಸೇರಿದ ಕಡೆ ಭಜನೆ ಮುಂತಾದ ಕಾರ್ಯಕ್ರಮಗಳು ನಡೆಯುತ್ತಿದ್ದವು. ಮಕ್ಕಳಿಗೆ ಹಿಂದೂಧರ್ಮದ ನೀತಿಬೋಧಕ ಕಥೆಗಳನ್ನು ಹೇಳುತ್ತಿದ್ದರು. ಒಮ್ಮೆ ನಿರ್ವಾಹಕರು ಅನಂತರಾವ್ ಅವರನ್ನು ಕಥೆ ಹೇಳಲು ಕೇಳಿಕೊಂಡರು. ಸುಮ್ಮನೆ ನಮ್ಮ ಪುರಾಣ ಇತಿಹಾಸಗಳ ಕಥೆ ಹೇಳುವುದರ ಬದಲು 'ಹರಿಕಥೆಯ ವಿಧಾನವನ್ನು ಅಳವಡಿಸಿಕೊಂಡರೆ ಹೇಗೆ?' ಎಂದು ಆಲೋಚಿಸಿ ಅದಕ್ಕೆ ತಯಾರಿ ಮಾಡಿಕೊಂಡರು.

ಅವರಿಗೆ ಈ ಯೋಚನೆಗೆ ಬಲವಾದ ಕಾರಣವಿತ್ತು. ಅವರು ಚಿಕ್ಕ ವಯಸ್ಸಿನಲ್ಲಿ ಚಾಮರಾಜಪೇಟೆಯಲ್ಲಿ ಬೆಳೆದವರು. ಸುತ್ತಮುತ್ತ ನಡೆಯುತ್ತಿದ್ದ ಹರಿಕಥೆ, ಪುರಾಣ ಪ್ರವಚನಗಳನ್ನು ಕೇಳುತ್ತಾ ಬೆಳೆದವರು. ವೇಣುಗೋಪಾಲದಾಸರು, ವೆಂಕೋಬದಾಸರು ಮೊದಲಾದ ಪ್ರಸಿದ್ಧ ಕೀರ್ತನಕಾರರ ಹರಿಕಥೆಗಳಿಂದ ಅವರು ಪ್ರಭಾವಿತರಾಗಿದ್ದರು. ಅವರ ಶೈಲಿ, ಹಾಡುಗಳನ್ನು ಹೇಳುತ್ತಿದ್ದ ಧಾಟಿ ಬಾಲಕ ಅನಂತರಾವ್ ಅವರನ್ನು ಮಂತ್ರಮುಗ್ಧಗೊಳಿಸಿಬಿಡುತ್ತಿತ್ತು. ಅವರೆಲ್ಲರೂ ತಮ್ಮತಮ್ಮ ವಿಶಿಷ್ಟ ವೈಯಕ್ತಿಕ ಶೈಲಿಯ ವಾಕ್ಚಾತುರ್ಯದಿಂದ, ಕಥೆ ಹೇಳುವ ರೀತಿಯಿಂದ, ಹಾಡುವ ಮಟ್ಟುಗಳಿಂದ ಸುಮಾರು ಮೂರು ಗಂಟೆಗಳ ಕಾಲ ಕೇಳುಗರ ಗಮನವನ್ನು ಸೆಳೆದು ಇಟ್ಟುಕೊಳ್ಳುತ್ತಿದ್ದರು.

ಆ ಸೆಳೆತ ಶ್ರೀ ಅನಂತರಾವ್ ಅವರಲ್ಲಿ ಇಂದಿಗೂ ಇದೆ. ಆದ್ದರಿಂದ ಹರಿಕಥೆಯನ್ನು ಮಾಡುವ ಆಲೋಚನೆ ಅವರಿಗೆ ಬಂದೊಡನೆ, ಆ ಕಲಾ ಪ್ರಕಾರದ ಹಿರಿಮೆ ಅವರಿಗೆ ಹೊಳೆಯಿತು. ಮೂಲ ಸಾಹಿತ್ಯ, ಸೂಕ್ತ ಹಾಡುಗಳು ಮತ್ತು ಇಂಗ್ಲಿಷ್ ಭಾಷೆಯಲ್ಲಿ ವಿವರಣೆ ನೀಡುವುದರಿಂದ ಸುಮ್ಮನೆ ಕಥೆ ಹೇಳುವುದಕ್ಕಿಂತ ಸಾಂಸ್ಕೃತಿಕವಾಗಿ ಹೆಚ್ಚಿನದನ್ನು ಸಾಧಿಸಬಹುದು ಎಂದು ಅವರಿಗೆ ಹೊಳೆದಿದ್ದರಲ್ಲಿ ಆಶ್ಚರ್ಯವೇನು ಇಲ್ಲ.


ಆ ಜನರಿಗೆ ಸಂಸ್ಕೃತಿ ಹಾಗೂ ಮನರಂಜನೆಯ ದೃಷ್ಟಿಯಿಂದ ಹರಿಕಥೆ ಏನೋ ಒಂದು ಒಳ್ಳೆಯ ಕಲಾಮಾಧ್ಯಮ. ಆದರೆ ಶ್ರೀ ಅನಂತರಾವ್ ಎಂದೂ ಹರಿಕಥೆಯನ್ನು ಮಾಡಿರಲಿಲ್ಲ. ಆದರೆ ಇದಕ್ಕೆ ಅವರು ಮೊದಲು ಆರಿಸಿಕೊಂಡ ಕಥೆ ಭಾಗವತದ ಗಜೇಂದ್ರ ಮೋಕ್ಷ. ಹರಿಕಥೆಗೆ ತಕ್ಕ ಹಸ್ತಪ್ರತಿಯನ್ನು ತಯಾರಿಸಿಕೊಂಡರು. 1983ರ ಫೆಬ್ರವರಿಯಲ್ಲಿ ಅವರ ಮೊದಲ ಕಾರ್ಯಕ್ರಮವನ್ನು ಎಲ್ಲ ಶ್ರೋತೃಗಳು ಇಷ್ಟಪಟ್ಟರು, ಬಹಳವಾಗಿ ಮೆಚ್ಚಿಕೊಂಡರು. ಆ ಆಕರ್ಷಣೆಯೇ ಅಲ್ಲಿನ ಜನರು ಇನ್ನಷ್ಟು, ಮತ್ತಷ್ಟು ಹರಿಕಥೆಗಳನ್ನು ಶ್ರೀ ಅನಂತರಾವ್ ಅವರ ಮೂಲಕ ಕೇಳುವಂತೆ ಮಾಡಿತು.

ಒಮ್ಮೆ 1996ರಲ್ಲಿ ದಕ್ಷಿಣ ಆಸ್ಟ್ರೇಲಿಯಾ ರಾಜ್ಯ ಲೈಬ್ರರಿಯಲ್ಲಿ ಪ್ರಪಂಚದ ಬೇರೆಬೇರೆ ಭಾಗಗಳ ಕಾವ್ಯಗಳ ಬಗ್ಗೆ ಸರಣಿ ಉಪನ್ಯಾಸವನ್ನು ಏರ್ಪಡಿಸಿದ್ದರು. ಪ್ರೊ॥ ಅನಂತರಾವ್ ಅವರು ಆದಿಕಾವ್ಯ ಹುಟ್ಟಿದ ಕಥೆ ರಾಮಾಯಣದ ಕ್ರೌಂಚವಧೆ ಪ್ರಕರಣವನ್ನು ಆರಿಸಿಕೊಂಡರು.

ಇದೇರೀತಿ ಸುಮಾರು ಇಪ್ಪತ್ತು ವಿವಿಧ ಕಥೆಗಳನ್ನು ಅವರು ಭಾಗವತ, ರಾಮಾಯಣ, ಮಹಾಭಾರತಗಳಿಂದ ಆರಿಸಿಕೊಂಡರು. ಜೊತೆಗೆ ಕಾಳಿದಾಸನ ರಘುವಂಶ ಮತ್ತು ಕುಮಾರಸಂಭವಗಳನ್ನು ಇಂಥ ಪ್ರಯೋಗಕ್ಕೆ ಅಳವಡಿಸಿಕೊಂಡರು.

ಪ್ರೊ॥ ಅನಂತರಾವ್ ಅವರ ಬುದ್ಧಚರಿತದ ಪರಿಚಯಾತ್ಮಕ ಪ್ರವಚನವನ್ನು ಯೂಟ್ಯೂಬ್‌ಗೆ ಅಳವಡಿಸುವುದಾದರೆ ಅನೇಕರಿಗೆ ತಲುಪಿಸಬಹುದು ಎಂದು ತಿಳಿಸಿದೆ. ಇದಕ್ಕೆ ಅವರು ಒಪ್ಪಿದಾಗ, ನಮ್ಮವರೇ ಆದ ಶ್ರೀ ಗುರುಪ್ರಸಾದ್ ಹಾಲ್ಕುರಿಕೆ ಅವರ ಭೇಟಿ ಮಾಡಿಸಿದೆ. ಅದರ ಪರಿಣಾಮವಾಗಿ "An introduction to Ashwaghosha's Buddhacharita" ಎಂಬ ಇಂಗ್ಲಿಷ್ ಭಾಷೆಯ ಪ್ರವಚನದ ವಿಡಿಯೋ ಸಿದ್ಧವಾಗಿದೆ. ಇದನ್ನು ಕೇಳಿದರೆ ಅಶ್ವಘೋಷನ ಮಹಾಕಾವ್ಯ ಬುದ್ಧಚರಿತದ ಬಗ್ಗೆ ತಿಳಿದುಕೊಂಡ ಸಂತೋಷವು ಆಗುತ್ತದೆ.

***



ಸಾಹಿತ್ಯ ದಾಸೋಹ – 239

ಅಧ್ಯಕ್ಷರ ಅನಿಸಿಕೆಗಳು



– ಕಮಲಾಕ್ಷಿ ಸಿ.ಆರ್.

ಎಲ್ಲರಿಗೂ ನಮಸ್ಕಾರ,
239ನೇ ನೋಡಿಯೋ ಸಾಹಿತ್ಯ ದಾಸೋಹದ ಅಧ್ಯಕ್ಷತೆಯನ್ನು ನನಗೆ ವಹಿಸಿದ ಸಮನ್ವಯ ಸಮಿತಿಯ ಎಲ್ಲ ಪದಾಧಕಾರಿಗಳಿಗೆ ಮೊದಲಿಗೆ ಧನ್ಯವಾದಗಳು.

ಸಮನ್ವಯ ಸಮಿತಿಯ ಬರೆಹಗಾರರೆಂದರೆ ಸೂರ್ಯ, ಚಂದ್ರ ತಾರೆಯರಂತೆ. ಅವರ ನಡುವೆ ನಾನೊಂದು ಪುಟ್ಟ ಹಣತೆ. ಇದೋ ಸೂರ್ಯ, ಇದೋ ಚಂದ್ರ, ಧೃವ ನಕ್ಷತ್ರ, ಎಂದು ಪರಿಚಯ ನೀಡುವಂತಿವೆ ಬರಹಗಳ ಕುರಿತು ವ್ಯಕ್ತಪಡಿಸುವ ಅಭಿಪ್ರಾಯಗಳು. ಎಂದಿನಂತೆ ಇಂದಿನ ಸಾಹಿತ್ಯ ದಾಸೋಹದಲ್ಲಿ ವೈವಿಧ್ಯಮಯ ಕವನ, ಕಥೆ, ಪುಸ್ತಕ ಪರಿಚಯ, ಪ್ರವಾಸ ಕಥನ, ವ್ಯಕ್ತಿ ಪರಿಚಯ ಬರೆಹಗಳನ್ನು ಒಳಗೊಂಡಿದ್ದವು. ಶಿಷ್ಟಾಚಾರದಂತೆ ಬರಹಗಳನ್ನು ನನ್ನ ಪರಿಮಿತಿಯಲ್ಲಿ ಅವಲೋಕಿಸಿ ಸಂಕ್ಷಿಪ್ತವಾಗಿ ಅಭಿಪ್ರಾಯವನ್ನು ಪ್ರಸ್ತುತ ಪಡಿಸುತ್ತಿರುವೆ.

೧. ಶ್ರೀ ಹು.ವಾ. ಶ್ರೀಪ್ರಕಾಶ್ – ಪತ್ರಲೇಖನ

'ಭಾರತ ಮಾತೆಗೆ ಇನ್‌ಲ್ಯಾಂಡ್ ಲೆಟರ್‌ನಲ್ಲಿ ಪತ್ರ ಬರೆಯಿರಿ' ಸ್ಪರ್ಧೆಯಿಂದ ಪ್ರೇರೇಪಿತರಾಗಿ ಹು.ವಾ. ಶ್ರೀಪ್ರಕಾಶ್ ಅವರು ಪ್ರಸ್ತುತಪಡಿಸಿರುವುದು ಪತ್ರಲೇಖನದ ಬರಹ.

ಕಾಗದ ಬಂದಿದೆ ಪದುಮನಾಭನದು ದಾಸರ ಸಾಲಿನಿಂದ ನೆಹರು ಅವರು ತಮ್ಮ ಪುತ್ರಿ ಇಂದಿರಾ ಅವರಿಗೆ ಬರೆದ ಪತ್ರಗಳನ್ನು ಉಲ್ಲೇಖಿಸಿರುವುದು ಮನ ಸೆಳೆಯುತ್ತದೆ. ದಿನವಿಡೀ ಮೊಬೈಲಿನಲ್ಲಿ ಅದೆಷ್ಟೇ ಚಾಟ್ ಮಾಡಿದರೂ ಪತ್ರ ಓದುವ ಖಂಡಿತ ಆಪ್ಯಾಯಮಾನತೆ ಸಿಗದು ಎಂಬ ಅಭಿಪ್ರಾಯ ಎಲ್ಲರೂ ಒಪ್ಪುವಂತಹದ್ದು. ತಮ್ಮ ಅಕ್ಕನ ಪತ್ರದ ಒಕ್ಕಣಿಕೆಯನ್ನು ಆಪ್ತತೆಯಿಂದ ವಾಚಿಸುವಾಗ ನಾವು ಕೂಡ ನಮ್ಮ ಪತ್ರಲೋಕಕ್ಕೆ ಹೋದದ್ದು ಸುಳ್ಳಲ್ಲ. ಅರ್ಥವತ್ತಾದ ಪತ್ರಲೇಖನಕ್ಕೆ ಹಾಗೂ ಸೊಗಸಾದ ಪ್ರಸ್ತುತಿಗೆ ಶ್ರೀ ಹುವಾಶ್ರೀ ಪ್ರಕಾಶ್ ಅವರಿಗೆ ಅಭಿನಂದನೆಗಳು.

೨. ಸ್ನೇಹ ಶಶಿಧರ್ – ಬ್ಯಾಂಕ್ ಹೇಳಿಕೊಟ್ಟ ಪಾಠ

ತಮ್ಮ ಅನ್ನದಾತ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಗೆ ಎಪ್ಪತ್ತರ ಹರೆಯ ಎಂದು ಪ್ರಾರಂಭಿಸಿ ಬ್ಯಾಂಕಿನ ಇತಿಹಾಸವನ್ನು ತಿಳಿಸಿ, ಕಾಲಕಾಲಕ್ಕೆ ಇಂದೀಕರಿಸಲ್ಪಡುತ್ತ ಬ್ಯಾಂಕ್ ದೇಶದ ಆರ್ಥಿಕತೆಗೆ ಸಾಕ್ಷಿಯಾಗಿದೆ. ಬ್ಯಾಂಕಿನ ಮೇಲೆ ಆರೋಪ ಬಂದಾಗಲೂ ಬ್ಯಾಂಕ್ ವಿಚಲಿತವಾಗದೆ ಪತ್ರಿಕಾಗೋಷ್ಠಿಯಲ್ಲಿ ಹೇಳಬೇಕಿದ್ದನ್ನು ಸ್ಪಷ್ಟಪಡಿಸಿ, ಬಳಿಕ ನಿರ್ಲಿಪ್ತತೆಯಿಂದ ಕಾರ್ಯೋನ್ಮುಖವಾಯಿತು. ಶ್ರೀ ಕೃಷ್ಣನ ಕರ್ಮ ಹಾಗೂ ಫಲಗಳ ಸಮಭಾವವನ್ನು ಪ್ರದರ್ಶಿಸುವ ಮೂಲಕ ತಮಗೆ ಪಾಠ ಕಲಿಸಿತು ಎನ್ನುತ್ತಾರೆ ಸ್ನೇಹ ಶಶಿಧರ್ ಅವರು. ಸೊಗಸಾದ ಲೇಖನ ಮತ್ತು ಪ್ರಸ್ತುತಿಗೆ ನಿಮಗೆ ಅಭಿನಂದನೆಗಳು.

ಕಮಲಾಕ್ಷಿ ಸಿ.ಆರ್.

ವೃತ್ತಿಯಲ್ಲಿ ಬೆಂಗಳೂರಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ರಸಾಯನ ಶಾಸ್ತ್ರದ ಉಪನ್ಯಾಸಕಿ. ಪ್ರವೃತ್ತಿಯಲ್ಲಿ ಹವ್ಯಾಸಿ ಬರಹಗಾರರು. ಕಥೆ, ಕವನ, ಲಲಿತ ಪ್ರಬಂಧ, ವೈಚಾರಿಕ ಬರಹಗಳು, ನಿರೂಪಣೆಲ್ಲಿ ತೊಡಗಿಸಿಕೊಂಡಿದ್ದಾರೆ, ಸುಗಮ ಸಂಗೀತದಲ್ಲಿ ಆಸಕ್ತಿ.

ಹಲವು ವೃತ್ತ ಪತ್ರಿಕೆಗಳಲ್ಲಿ, ಸಂಕಲನಗಳಲ್ಲಿ ಇವರ ಬರಹಗಳು, ಕಥೆ, ಕವನಗಳು ಪ್ರಕಟಗೊಂಡಿವೆ. ಜಿಲ್ಲಾ ಹಾಗೂ ರಾಜ್ಯ ಮಟ್ಟದ ಕವಿಗೋಷ್ಠಿಗಳಲ್ಲಿ ಭಾಗವಹಿಸಿ ಬಹುಮಾನ, ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ. ತಮ್ಮ ಶಿಕ್ಷಣ ಸಂಸ್ಥೆಯ ಗೋಡೆ ಪತ್ರಿಕೆ ಹಾಗೂ ವಾರ್ಷಿಕ ಸಂಚಿಕೆ ಸಮಿತಿಯ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಟೆಲಿಗ್ರಾಂ ಆಪ್ಲಿಕೇಷನ್‌ನಲ್ಲಿನ 'ಕಂಪನಾಂಕ ಟೆಲಿರೇಡಿಯೋ' ಖಾಸಗಿ ರೇಡಿಯೋ ವಾಹಿನಿಯಲ್ಲಿ ವಚನ ಸಿರಿಕಂಪು ಮಾಲಿಕೆಯಲ್ಲಿ 75ಕ್ಕೂ ಹೆಚ್ಚು ವಚನಕಾರರ ಜೀವನ ಚರಿತ್ರೆ ಹಾಗೂ ವಚನಗಳ ಪರಿಚಯ ಮಾಡಿಕೊಟ್ಟಿದ್ದಾರೆ. ಕಳೆದ ಎರಡು ವರ್ಷಗಳಿಂದ 'ಕಗ್ಗದೊಳ್ ವಚನಸಿರಿಕಂಪು' ಎಂಬ ಒಂದಕ್ಕೊಂದು ಸಾಮ್ಯತೆ ಇರುವ ಕಗ್ಗ ಹಾಗೂ ವಚನಗಳ ವಿಶ್ಲೇಷಣೆಯ ಕಾರ್ಯಕ್ರಮ ನಡೆಸಿಕೊಟ್ಟಿದ್ದು, ಪ್ರಸ್ತುತ ಕೆ.ಸಿ.ಶಿವಪ್ಪನವರ ಚೌಪದಿ ಆಧಾರಿತ 'ಮುದ್ದುರಾಮನ ಮನನ' ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ

೩. ಸಿಂಧು ಹರಿಥಸ್ – ಮಂಥರ ಮಂಥನ

ಇಂದು ಮತ್ತೊಂದು ಪತ್ರ ಬಂದದ್ದು ಬ್ರಹ್ಮಲೋಕದಿಂದ ಯಕ್ಷೇಂದ್ರನಿಗೆ. ಆ ಪತ್ರದಲ್ಲಿ ದುಂದುಭಿ ಯಕ್ಷಿಣಿಯ ಉಲ್ಲೇಖವೇ ಇಲ್ಲದಾಗ, ಬ್ರಹ್ಮನ ಬಳಿ ಹೋಗಿ, 'ನಾರಾಯಣ ರಾಮನಾಗಿ ಜನ್ಮ ತಳೆದಾಗ ತನಗೂ ಜನ್ಮ ಕೊಡುವಂತೆ' ಪ್ರಾರ್ಥಿಸುತ್ತಾಳೆ. ಅದರ ಫಲವಾಗಿ ದುಂಧುಬಿಗೆ ಕೈಕೇಯಿಯ ತಂದೆಗೆ ಶಾಪ ನೀಡುವ, ಮಂಥರೆಯ ನಾಲಿಗೆಯಲ್ಲಿ ನಿಂತು ವನವಾಸದ ಸಲಹೆ ನೀಡುವ ಪಾತ್ರ ದೊರೆತದ್ದು. ತೇನವಿನಾ ತೃಣಮಪಿ ನಚಲತಿ ಎನ್ನುವಂತೆ, ಪೌರಾಣಿಕ ಕಥೆಗಳಲ್ಲಿ ಪ್ರತಿ ಪಾತ್ರಕ್ಕೂ ಮಹತ್ವವಿದೆ ಎಂಬುದನ್ನು ಮನದಟ್ಟು ಮಾಡಿಕೊಡುವ ಸುಂದರ ನಿರೂಪಣೆಯ ಕಥೆ. ಮನಮುಟ್ಟುವ ಪ್ರಸ್ತುತಿಗೆ ಅಭಿನಂದನೆಗಳು ಸಿಂಧು ಹರಿಥಸ್ ಅವರಿಗೆ.

೪. ಪೂರ್ಣಿಮಾ ಭಗವಾನ್ – ತಾನೊಂದು ಬಗೆದರೆ ಮಾನವ

ತಮ್ಮ ಪ್ರವಾಸದ ಎರಡನೆಯ ಭಾಗದಲ್ಲಿ ಪೂರ್ಣಿಮಾ ಭಗವಾನ್ ಅವರು ಶ್ರೀನಗರದಲ್ಲಿ ಉಳಿದುಕೊಂಡಿದ್ದ ಹೋಟೆಲ್ ಆತಿಥ್ಯದ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಸೋನ್‌ಮಾರ್ಗ್ ಪ್ರವಾಸಕ್ಕೆ ಡ್ರೈವರ್ ತಡವಾಗಿ ಬಂದದ್ದು, ಮುಂದಕ್ಕೆ ಹೋಗುವುದಿಲ್ಲ ಎಂದು ಹೇಳಿ ಬಳಿಕ ಐನೂರು ರೂ ಪಡೆದು ಕರೆದುಕೊಂಡು ಹೋದ ಕಹಿ ಘಟನೆ ಪ್ರವಾಸಿಗರನ್ನು ಚಾಲಕರು ಶೋಷಣೆ ಮಾಡುತ್ತಾರೆ ಎಂದು ವಿವರಿಸಿದ್ದಾರೆ. ಅಲ್ಲಿನ ಪ್ರಕೃತಿ ಸೌಂದರ್ಯದ ಕುರಿತ ವರ್ಣನೆ ಕಣ್ಣಿಗೆ ಕಟ್ಟುವಂತಿದೆ.. ಮುಂದೇನಾಯಿತು ಎಂಬುದನ್ನು ಮುಂದಿನ ಭಾಗದಲ್ಲಿ ತಿಳಿಯೋಣ. ಸೊಗಸಾದ ಪ್ರಸ್ತುತಿಗೆ ಅಭಿನಂದನೆಗಳು ಪೂರ್ಣಿಮಾ ಭಗವಾನ್ ಅವರಿಗೆ.

೫. ಗಣಪತಿ ಹೆಗಡೆ – ಕರ್ನಾಟಕ ವೃತ್ತಗಳು

ಕಾವ್ಯ ಗೇಯವಾಗಿದ್ದರೆ ಓದುಗರನ್ನು ಬಹುಬೇಗ ಸೆಳೆಯುತ್ತದೆ. ಅಂತಹ ಕಾವ್ಯಕ್ಕೆ ಪೂರಕವಾಗಿ ಶಬ್ದ ಪ್ರಯೋಗವಾಗ ಬೇಕಾದರೆ ಛಂದಸ್ಸಿನ ಪ್ರಕಾರ ರಚನೆಯಾಗಬೇಕು. ಶ್ರೀ ಗಣಪತಿ ಹೆಗಡೆಯವರು ಛಂದಸ್ಸಿನಲ್ಲಿ ವೃತ್ತಗಳ ಕುರಿತು ಸೂಕ್ತ

ಉದಾಹರಣೆಗಳ ಮೂಲಕ ಪ್ರಸ್ತುತಪಡಿಸಿದ ಲೇಖನ ಸಂಗ್ರಹಯೋಗ್ಯವಾಗಿದೆ. ಕನ್ನಡ ಉಪನ್ಯಾಸಕರ ತರಗತಿಯಲ್ಲಿ ವ್ಯಾಕರಣ ಪಾಠ ಕೇಳಿದ ಭಾವ ಮೂಡಿಸಿತು. ಧನ್ಯವಾದಗಳು ಗಣಪತಿ ಹೆಗಡೆಯವರಿಗೆ

೬. ರೇಣುಕಾ ದೇಸಾಯಿ –ಗುರು ಪೂರ್ಣಿಮೆಯ ದಿನದಲ್ಲಿ ಗುರು ಸ್ಮರಣೆ

ಸಮನ್ವಯ ಸಮಿತಿಯ ಅತ್ಯಂತ ಕ್ರಿಯಾಶೀಲರೂ, ಬಹುಮುಖ ಪ್ರತಿಭೆಯ ಸದಸ್ಯರಲ್ಲಿ ಒಬ್ಬರಾದ ಬಿ.ಎಸ್ ಚಂದ್ರಶೇಖರ್ ಅವರ ಕುರಿತು ಲೇಖನ ರೇಣುಕಾ ದೇಸಾಯಿ ಅವರದ್ದು. ಓಹ್! ಇವರು ನಮ್ಮವರೇ ಎಂಬ ಉದ್ಗಾರದೊಡನೆ ಲೇಖನ ಪ್ರಾರಂಭಿಸಿ, ಚಂದ್ರಶೇಖರ್ ಅವರ ವ್ಯಕ್ತಿತ್ವ ಪರಿಚಯ ಮಾಡಿಕೊಡುವ ಪರಿ ಬಹಳ ಆಪ್ತವಾಗಿ ಮೂಡಿಬಂದಿದೆ. ಗುರುವೆಂದರೆ ಅನುಕರಣೀಯರು, ಅರಿವಿನ ಹಣತೆ ಬೆಳಗುವವರು ಎಂಬುದಕ್ಕೆ ರೇಣುಕಾ ಅವರು ನೀಡುವ ನಿದರ್ಶನಗಳು ಸಾಕ್ಷಿಯಾಗಿವೆ. ಗುರು ಶಿಷ್ಯರಿಬ್ಬರೂ ಪ್ರೇರಕ, ಅಸಮಾನ್ಯರು. ಇಂದಿನ ಪ್ರಸ್ತುತಿ ಕೂಡ ಮನಮುಟ್ಟುವಂತೆ ಮೂಡಿ ಬಂದಿತು. ಅಭಿನಂದನೆಗಳು ರೇಣುಕಾ ದೇಸಾಯಿ ಅವರಿಗೆ.

೭. ವಿಠ್ಠಲ ಇಜೇರಿ – ಒಂದು ಕಥೆಯ ಕಥೆ

ಓ ಹೆನ್ರಿಯವರು ತಮ್ಮ ಸಣ್ಣ ಕಥೆಗಳಿಂದ ಹೆಸರು ಮಾಡಿದವರು. ಇಂದು ವಿಠ್ಠಲ್ ಇಜೇರಿಯವರು ಓ ಹೆನ್ರಿಯವರ ಒಂದು ಪುಟ್ಟಕಥೆಯ ಕಾಲ ಎಷ್ಟಿರಬಹುದು? ಎನ್ನುವುದರ ಕುರಿತು ಹೇಳಲು ಆ ಕಥೆಯನ್ನು ಲೇಖನದಲ್ಲಿ ಪ್ರಸ್ತುತಪಡಿಸಿದ್ದಾರೆ. ಸಾಮಾನ್ಯವಾಗಿ ಒಂದು ಪುಟ್ಟ ಕಥೆಯನ್ನು ಅಕಸ್ಮಾತ್ ನಡೆಯುವ ಒಂದು ಸನ್ನಿವೇಶದ ಸುತ್ತ ಹೆಣೆಯಲಾಗಿರುತ್ತದೆ. 'ಎ ಸ್ಟ್ರೇಂಜ್ ಸ್ಟೋರಿ' ಕಥೆಯಲ್ಲಿ ಕಥಾನಾಯಕ ಸ್ಮೂದರ್ಸ್ ತನ್ನ ಮಗಳ ಹೊಟ್ಟೆನೋವಿಗೆ ಔಷಧ ತರಲು ಹೋಗಿ, ಇಪ್ಪತ್ತು ವರ್ಷಗಳ ನಂತರ ಬಂದು ತನ್ನ ಮೊಮ್ಮಗಳಿಗೆ ಔಷಧ ನೀಡುವಂತಾಗಿದ್ದು ವಿಪರ್ಯಾಸ. ಈಗಿನ ಕಾಲಮಾನವಾಗಿದ್ದರೆ ಆ ಔಷಧಿಯ ಎಕ್ಸ್‌ಪೈರಿ ಡೇಟ್ ಮೀರಿದ್ದನ್ನು ತರ್ಕಿಸುತ್ತಿದ್ದರು. ವಿಡಂಬನೆ, ವಿಷಾದವನ್ನು ಮೂಡಿಸುವ ಚೆಂದದ ಕಥೆಯನ್ನು ನೀಡಿದ್ದಕ್ಕೆ ಧನ್ಯವಾದಗಳು ಇಜೇರಿ ಸರ್.

೮. ಮಾಧುರಿ ಕೃಷ್ಣ – ಕನಿಷ್ಠ ಸತ್ಯ

ನವರಾತ್ರಿ ಸಮಯದಲ್ಲಿ ದೇವೀ ಆರಾಧನೆಯ ಸಮಯದಲ್ಲಿ ನವದಂಪತಿಗಳನ್ನು ಊಟಕ್ಕೆ ಕರೆದು ಅತಿ ಮಧುರ ಎಂಬ ಸಿಹಿ ನೈವೇದ್ಯ ಸೇವಿಸಿ ಅವರಿಬ್ಬರು ಪುಳಕಿತರಾಗುತ್ತಾರೆ. ಆದರೆ ವರನ ಕಡೆಯವರ ವರದಕ್ಷಿಣೆಯ ವ್ಯಾಮೋಹ, ಆಸೆ ಬುರುಕುತನದಿಂದ ಅವರ ವೈವಾಹಿಕ ಬದುಕು ಮೊಟಕಾಯಿತು. ಇದು ಅನಾವರಣವಾಗಿದ್ದು ಐವತ್ತು ವರ್ಷಗಳ ನಂತರ ಅದೇ ನವರಾತ್ರಿಯ ಅತಿ ಮಧುರ ಸಿಹಿ ಸಮ್ಮುಖದಲ್ಲಿ ಅದರ ಸವಿಯನ್ನು ಅವರಿಬ್ಬರು ಅನುಭವಿಸಲು ಸಾಧ್ಯವಾಗದೆ ಇದ್ದಾಗ. ಎರಡೂ ಸನ್ನಿವೇಶಗಳಿಗೂ ಸಾಕ್ಷಿಯಾಗಿದ್ದು ಅದೇ ನವರಾತ್ರಿಯ ದೇವಿ. ಮನುಷ್ಯ ಬದುಕನ್ನು ಬದಲಿಸಲಾಗದ ಕನಿಷ್ಠ ಮಿತಿಯ ಬಗ್ಗೆ ದೇವಿ ಬೇಸರಗೊಂಡದ್ದನ್ನು ಕಂಡು, ಈ ಲೇಖನ ಬರೆಯಲು ಹೊರಟೆ ಎಂದಿರುವುದು ವಿಷಾದ ಮೂಡಿಸುತ್ತದೆ. ಕನಿಷ್ಠ ಮಿತಿ ಹಾಕಿಕೊಂಡು ಬದುಕನ್ನು ಕಟ್ಟಿಕೊಳ್ಳುವ ಅವಶ್ಯಕತೆಯ ಕುರಿತು ಅರಿವು ಮೂಡಿಸುವ ಲೇಖನ.. ಮಾಧುರಿ ಕೃಷ್ಣ ಅವರ ಪ್ರಸ್ತುತಿಗೆ ಧನ್ಯವಾದಗಳು.

೯. ರತ್ನಾ ಮೂರ್ತಿ – ಹನುಮಾನ್ ದಂಡಕ

ರಾಮಭಕ್ತ ಹನುಮಂತನನ್ನು ಸ್ತುತಿಗೆ 'ಹನುಮಾನ್ ದಂಡಕ'ವನ್ನು ರಚಿಸಿ ಹೃನ್ಮನಗಳಿಗೆ ಭಕ್ತಿಯ ಸಿಂಚನವನ್ನು ಉಣಬಡಿಸಿದ್ದಾರೆ ರತ್ನಾ ಮೂರ್ತಿಯವರು. ಹನುಮಂತನನ್ನು ಬಗೆಬಗೆಯ ವಿಶೇಷಣಗಳಿಂದ ಚಾಕಚಕ್ಯತೆಯಿಂದ ಬಣ್ಣಿಸಿರುವ ದಂಡಕವು ಓದುಗರನ್ನು ಚಕಿತಗೊಳಿಸುತ್ತದೆ. ಒಂದೊಂದು ಸ್ತುತಿಯೂ ಮನಸ್ಸಿಗೆ ಹನುಮಂತನ ಲೀಲೆಗಳನ್ನು ಕಣ್ಣೆದುರು ನಿಲ್ಲಿಸುತ್ತದೆ.. ಹನುಮಂತನೇ ಪ್ರೇರೇಪಿಸಿ ಬರೆಸಿರುವುದು ಎನಿಸಿತು. ಭಕ್ತಿಪರವಶವಾಗುವಂತಹ ಪ್ರಸ್ತುತಿ ನೀಡಿದ್ದೀರಿ. ಅಭಿನಂದನೆಗಳು ಹಾಗೂ ಧನ್ಯವಾದಗಳು ರತ್ನಾ ಮೂರ್ತಿಯವರೆ.

೧೦. ಎಲ್. ಗಿರಿಜಾ ರಾಜ್ – ಎರಡು ಕವನಗಳು

'ಭಾವಗಳ ಬೆನ್ನೇರಿ' ಮತ್ತು 'ಮರಳಿ ಅರಳು' ಕವನಗಳ ಮೂಲಕ ಅರಳಿರಿ ಎಂಬ ಸಂದೇಶ ನೀಡಿದವರು ಎಲ್.ಗಿರಿಜಾ ರಾಜ್ ಅವರು. ಭಾವಗಳ ಬೆನ್ನೇರಿದವರಿಗೆ ಎಷ್ಟು ಕವನಗಳ ರಚಿಸಿದರೂ ಮತ್ತಷ್ಟು ಕವನಗಳ ರಚಿಸುವ ತವಕ ಇದ್ದೇ ಇರುತ್ತದೆ. ನೀವು ಬರೆಯುತ್ತಿರಿ.. ಓದುವ ಅಭಿಮಾನಿಗಳು ಖಂಡಿತ ನಿಮಗಿದ್ದಾರೆ.

ಮತ್ತೊಂದು ಕವನ 'ಮರಳಿ ಅರಳು' ಮುಪ್ಪಿನ ಕುರಿತಾಗಿದೆ. ಮುಪ್ಪಿನಲ್ಲಿ ಬದಲಾಗುವ ಚರ್ಮ ಮತ್ತು ಕೇಶವು ಪರಿಪಕ್ವತೆಯ ಕಾಲವೆಂದೂ, ಕರ್ಮ ಸವೆಯುವ ಸಮಯವೆಂದೂ ಅಭಿವ್ಯಕ್ತಿಸಿರುವುದು ವಿಶೇಷ. ವಯಸ್ಸು ದೇಹಕ್ಕಷ್ಟೇ ಮನಸಿಗಲ್ಲ, ಬಾಳ ಮುಸ್ಸಂಜೆಯಲಿ ಆತ್ಮಜ್ಞಾನ ಅರಳುತ್ತದೆ. ಅರಳು ಮರಳಾಗದೆ, ಮರಳಿ ಅರಳಬೇಕು ಎಂಬ ಸಂದೇಶವನ್ನು ನೀಡಿದ್ದಾರೆ ಗಿರಿಜಾ ಅವರು. ಸುಂದರ ಪದ ಪುಂಜಗಳ ಎರಡು ಕವನಗಳ ಪ್ರಸ್ತುತಿಗೆ ಅಭಿನಂದನೆಗಳು ಎಲ್.ಗಿರಿಜಾ ರಾಜ್ ಅವರಿಗೆ.

೧೧. ಕೆ.ಎನ್.ಮಹಾಬಲ – ದಾಮೋದರರ ಆಹಾರ ಪ್ರೀತಿ

ಊಟ ಬಲ್ಲವನಿಗೆ ರೋಗವಿಲ್ಲ ಎಂಬ ನುಡಿಯನ್ನು ಆಹಾರ ಪ್ರೀತಿ ಉಳ್ಳವನಿಗೆ ಹಸಿವಿಲ್ಲ ಎಂದು ಬದಲಿಸುವಂತಿದೆ ಕೆ.ಎನ್. ಮಹಾಬಲ ಅವರ ದಾಮೋದರರ ಆಹಾರ ಪ್ರೀತಿ. ಹೊಟ್ಟೆ ತುಂಬಿದ್ದರೂ ತನಗೆ ಬೇಕೆಂದಾಗ ರಾಜಮಾರ್ಗ ತೆರೆದುಕೊಂಡು ಸಂಚಾರಕ್ಕೆ ಅನುವು ಮಾಡಿಕೊಟ್ಟಂತಿದೆ ಆಹಾರ ಪ್ರೀತಿ. ಇಟಲಿ ಅಷ್ಟೇ ಏಕೆ ಯಾವುದೇ ವಿದೇಶ ಪ್ರವಾಸ ಹೋಗುವವರಿಗೆ ಸಸ್ಯಾಹಾರಿಯಾದವರು ಹೇಗೆಲ್ಲ ಹಸಿವು ನೀಗಿಸಿಕೊಳ್ಳಬಹುದು ಎಂದು ದಾಮೋದರರ ಮೂಲಕ ಸೊಗಸಾಗಿ ವಿವರಿಸಿದ್ದಾರೆ ಮಹಾಬಲ ಸರ್. ಈ ಲೇಖನ ಮೂರು ತಿಂಗಳ ಮೊದಲೇ ನನಗೆ ಸಿಗಬಾರದಿತ್ತೆ ಎನಿಸಿತು. ಚೆಂದದ ಲೇಖನ ಪ್ರಸ್ತುತಿಗೆ ಧನ್ಯವಾದಗಳು ಮಹಾಬಲ ಸರ್.

೧೨. ರಾಜನ್ – ಸೆಳೆತ

ಮಕ್ಕಳು ಎಷ್ಟೇ ದೊಡ್ಡವರಾದರೂ ಹೆತ್ತವರಿಗೆ ಅವರ ಮೇಲಿನ ಸೆಳೆತ ಸ್ವಲ್ಪವೂ ಕಡಿಮೆಯಾಗದು. ಶಿಕ್ಷಣ, ಉದ್ಯೋಗಕ್ಕಾಗಿ ವಿದೇಶದಕಡೆ ಸೆಳೆತವಾದರೂ ತಾಯ್ನೆಲ ಹಾಗೂ ಹೆತ್ತವರ ಸೆಳೆತ ಇದ್ದೇ ಇರುತ್ತದೆ. ಇಂತಹ ಕಥಾಹಂದರವಿರುವ ರಂಗರಾಜನ್ ಅವರ ಕಥೆ 'ಸೆಳೆತ'. ಸಾವಿತ್ರಮ್ಮ ಹಾಗೂ ರಾಮರಾಯರ ಪಾತ್ರಗಳು ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿದೆ. ಮಗ ಮನೆಗೆ ಬರುವನೆಂದರೆ ಹೆತ್ತವರಿಗೆ ಅನಿರ್ವಚನೀಯ ಆನಂದ ತರುತ್ತದೆ. ಇತ್ತೀಚೆಗೆ ಬಹುತೇಕ ಮನೆಗಳಲ್ಲಿ ನಡೆಯುವ ಮನೆ ಮನೆ ಕಥೆ ಇದು. ಮಗ ತನ್ನ ಕುಟುಂಬದೊಡನೆ ಹಿಂದಿರುಗುವ ಅಂತ್ಯ ನೀಡಿದ್ದು ಓದುಗರಿಗೆ ಸಮಾಧಾನ ತರುತ್ತದೆ. ನೈಜತೆಯುಳ್ಳ ಕಥೆ.. ರಂಗರಾಜನ್ ಅವರಿಗೆ ಅಭಿನಂದನೆಗಳು.

೧೩. ರಾಧಿಕಾ ಗುಜ್ಜಾರ್ – ತೆರೆದೆನೊಂದು ಕಿಟಕಿ

ಆಲೋಚನೆಗಳ ಹಸಿರನ್ನುಳಿಸಿಕೊಳ್ಳಲು ಕೊಂಚ ಬೆಳಕಿನ ಜಾಡು ಹುಡುಕಬೇಕಿದೆ.. ಅದಕ್ಕಾಗಿ 'ತೆರೆದೆನೊಂದು ಕಿಟಕಿ' ಎಂಬ ಕವನವನ್ನು ಪ್ರಸ್ತುತಪಡಿಸಿದವರು ರಾಧಿಕಾ ಗುಜ್ಜಾರ್. ಕವನದಲ್ಲಿ ಕಿಟಕಿಯನೇಕೆ ತೆರೆದೆ ಎಂಬ ಪ್ರಶ್ನೆಗಳಿಗೆ ಉತ್ತರವಾಗಿ ದಶಕಗಳ ಗಮಟು ಕಳೆಯಲು, ವಾಸ್ತವದೊಡನೆ ಸ್ನೇಹ ಬೆಸೆಯಲು ಕಿಟಕಿಯ ತೆರೆಯಬೇಕು ಎನ್ನುವ ಸಾಲುಗಳು ಚಿಂತನೆಗೀಡು ಮಾಡುತ್ತವೆ. ಅಂತರಂಗದ ಕಿಟಕಿಯ ತೆರೆದು ಸತ್ಯದೆಡೆಗೆ ಇಣುಕಬೇಕಾದ ಅಂತಿಮ ಸತ್ಯವನ್ನು ದರ್ಶಿಸುವ ಕನ್ನಡಿಯಂತಿದೆ ತೆರೆದೆನೊಂದು ಕಿಟಕಿ. ಪಾರಮಾರ್ಥಿಕ ಹಾಗೂ ವಾಸ್ತವತೆ ತೆರೆದಿಡುವ ಸುಂದರ ಕವನ ಪ್ರಸ್ತುತಿಗೆ ಅಭಿನಂದನೆಗಳು ರಾಧಿಕಾ ಗುಜ್ಜಾರ್ ಅವರಿಗೆ.

೧೪. ಎನ್.ವಿ.ರಘುರಾಂ – 'ಪದ್ದಂ–ಮನೋರಮೆ' ಪುಸ್ತಕ ಪರಿಚಯ

'ನೀರಿಳಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು' ಎಂಬ ಮಾತಿನೊಡನೆ ಮುದ್ದಣ ಮನೋರಮೆಯರು ನೆನಪಾಗುತ್ತಾರೆ. ಪುಸ್ತಕದ ಮುಖಪುಟದಲ್ಲಿ ಮುದ್ದಣ ಮನೋರಮೆ ಅವರ ಕ್ಷಮೆ ಕೋರಿ ಎಂಬ ಉಪಶೀರ್ಷಿಕೆಯ 'ಪದ್ದಣ ಮನೋರಮೆ' ಪುಸ್ತಕವನ್ನು ಪರಿಚಯಿಸಿದವರು ಎನ್.ವಿ.ರಘುರಾಂ ಅವರು.

ಉತ್ತಮ ಪುಸ್ತಕವೊಂದಕ್ಕೆ ಇವರು ಮೂರು ಗುಣಗಳನ್ನು ಉಲ್ಲೇಖಿಸಿದ್ದಾರೆ. ಅದರಂತೆ 'ಪದ್ದಣ ಮನೋರಮೆ' ಪುಸ್ತಕವೂ ಇದ್ದು, ಇದರಲ್ಲಕ ೨೪ ಲಘು ಬರಹಗಳಿವೆ. ಅವುಗಳಲ್ಲಿ ಮುದ್ದಣ ಮನೋರಮೆಯರ ಸಲ್ಲಾಪದಂತಹ ಸಂಭಾಷಣೆಗಳಿವೆ ಎಂದು ಪರಿಚಯಿಸಿದ್ದಾರೆ. ಬರಹಗಳ ಶೀರ್ಷಿಕೆ, ಕಥಾಹಂದರ, ವಿಸ್ತಾರಗಳನ್ನು ಸ್ಥೂಲವಾಗಿ ಪರಿಚಯಿಸಿ ಪದ್ದಣ ಮನೋರಮೆ ಪುಸ್ತಕದ ಬಗ್ಗೆ ಕುತೂಹಲ ಮೂಡಿಸಿದ್ದಾರೆ. ಪುಸ್ತಕದ ಸೊಗಸಾದ ಪರಿಚಯ ಮಾಡಿದ್ದಕ್ಕಾಗಿ ರಘುರಾಂ ಅವರಿಗೆ ಅಭಿನಂದನೆಗಳು.

೧೫. ಸೀತಾರಾಮ ಕಟ್ಟಿ – ಇರುವೆ ಮತ್ತು ಇರುವು

ಇರುವೆಯ ಸ್ವಗತದಲ್ಲಿನ ಚಿಂತನೆಯನ್ನು ಸೀತಾರಾಮಕಟ್ಟಿಯವರು ಪರಕಾಯ ಮಾಡಿ ಬರೆದಿರುವ ಗದ್ಯ ಕವನ 'ಇರುವು ಮತ್ತು ಇರುವೆ'. ಅಕ್ಕಿಕಾಳನ್ನು ವಿನಯದಿಂದ ತಲೆ ಬಾಗಿ ಹೊತ್ತು ಸಾಗುತ್ತ ತನ್ನ ಸುತ್ತಲಿನ ವಿದ್ಯಮಾನಗಳನ್ನು ವಿಶ್ಲೇಷಣೆ ಮಾಡುವ ಇರುವೆಯು ಎಲ್ಲವೂ ದೇವನ ಕೃಪೆ ಎಂದು ವಿನೀತ ಭಾವ ತೋರುತ್ತದೆ. ಸುಜನ-ದುರ್ಜನ, ದುರ್ಬಲ-ಪ್ರಬಲ, ಬಡವ-ಬಲ್ಲಿದ, ಸೌಂದರ್ಯ ಖಣಿ ನವಿಲು ಒಂದೆಡೆಯಾದರೆ ಭಾರೀ ಗಾತ್ರದ ಆನೆ ಇನ್ನೊಂದೆಡೆ ಕಂಡಿರುವೆ ಎಂದು ಧಾನ್ಯವನ್ನು ಸಾಗಿಸುತ್ತಿರುವ ತತ್ವಜ್ಞಾನಿ ಇರುವೆ. ಆದರೆ ಗೊರಸಿಗೆ ಸಿಕ್ಕು ಹತವಾಯಿತು ಎಂದಾಗ ಛೇ.. ಎನಿಸಿತು. ಆ ತುಂಡು ಅಕ್ಕಿ ಭಗವಂತನ ನೇವೈದ್ಯ.. ಅವನಿಗೇ ಮೀಸಲಾಯಿತೇನೋ. ಸಾವೊಂದೇ ಅಂತಿಮ ಸತ್ಯ ಎಂದು ಹೇಳುವ ಕವನ. ಉತ್ತಮ ಮೌಲ್ಯಗಳನ್ನು ಬಿತ್ತುವ ಕವನ. ಸೀತಾರಾಮ ಕಟ್ಟಿಯವರಿಗೆ ಧನ್ಯವಾದಗಳು ಹಾಗೂ ಅಭಿನಂದನೆಗಳು ಪ್ರಸ್ತುತಿಗೆ.

೧೬. ಟಿ.ಎಸ್. ಶ್ರವಣ ಕುಮಾರಿ – ಮನೆ ಮನೆ ಕಥೆ

ಮಕ್ಕಳ ಭವಿಷ್ಯಕ್ಕಾಗಿ ಹೆತ್ತವರ ತ್ಯಾಗ ಒಂದೆಡೆ, ಅದೇ ಹೆತ್ತವರು ವೃದ್ಧಾಪ್ಯ ತಲುಪಿದಾಗ ಊಟ, ವಸತಿ, ಔಷಧಿ ವ್ಯವಸ್ಥೆ ಮಾಡಿಕೊಡುವುದಷ್ಟೇ ತಮ್ಮ ಜವಾಬ್ದಾರಿ ಎಂದು ಭಾವಿಸುವ ಮಕ್ಕಳು ಇನ್ನೊಂದೆಡೆ. ಇದು ನಿಜಕ್ಕೂ ಮನೆ ಮನೆ ಕಥೆಯೇ.. ಮಕ್ಕಳು ವಿದೇಶದಲ್ಲಿರಲಿ ಇಲ್ಲವೇ ಸ್ವದೇಶದ ಪರಸ್ಥಳದಲ್ಲಿರಲಿ.. ವೃದ್ಧಾಪ್ಯದಲ್ಲಿರುವ ಹೆತ್ತವರ ಮೇಲೆ ಭಾವನಾತ್ಮಕ ಬಂಧ ಏಕಿರುವುದಿಲ್ಲವೋ ಎನಿಸುತ್ತದೆ. ಚೆನ್ನಿ, ಮಂಜುಳಾ ಅವರು ವೃದ್ಧರ ಮೇಲೆ ಹರಿಹಾಯುತ್ತ ನಿತ್ಯ ಕದನ ಮಾಡುವುದು ತಿಳಿದರೂ, ಮಗ ಸೊಸೆ ಅವರಿಗೆ ಹೊಂದಿಕೊಳ್ಳಲು ಹೇಳುವುದು. ವೃದ್ಧಾಪ್ಯದಲ್ಲಿ ಸ್ವಾಭಿಮಾನ, ಸ್ವಂತಿಕೆಯನ್ನೇ ತೊರೆದು ದಿನ ಸಾಗಿಸಬೇಕೆ ಎಂಬ ಪ್ರಶ್ನೆಗಳು ಕಾಡುತ್ತವೆ. ಕಥೆ ಓದಿದ ಬಳಿಕ ನಿಟ್ಟುಸಿರು, ವಿಷಾಧ ನಮಗರಿವಿಲ್ಲದೆ ಮೂಡುವುದು.. ಮುಂದಿನ ದಿನಗಳಲ್ಲಿ ವೃದ್ಧಾಪ್ಯ ಒಂದು ಶಾಪವಾಗಿ ಪರಿಣಮಿಸುತ್ತವೆ ಎನಿಸುವುದು. ನೈಜತೆಯ ಕಥಾಹಂದರ.. ಸೊಗಸಾಗಿ ಪ್ರಸ್ತುತಿಗೆ ಧನ್ಯವಾದಗಳು ಶ್ರವಣ ಕುಮಾರಿ ಅವರಿಗೆ.

೧೭. ಬೆಂ ಶ್ರೀ ರವೀಂದ್ರ- ದಲಾಯಿ ಎಂಬ ಸಾಗರ

ಕೈಲಾಸ ಬೆಟ್ಟದ ತಪ್ಪಲಿನ ಧರ್ಮಶಾಲಾ ಎಂದೊಡನೆ ಬೌದ್ಧ ಶಾಲೆ ನೆನಪಾಗುತ್ತದೆ. ಅದರ ಹಿಂದೆಯೇ ದಲಾಯಿ ಲಾಮ ನೆನಪಾಗುತ್ತಾರೆ. ಸಮನ್ವಯ ಸಮಿತಿಯ ಮುಖ್ಯ ಶಿಕ್ಷಕರಾದ ಬೆಂ.ಶ್ರೀ.ರವೀಂದ್ರ ಅವರು 'ದಲಾಯಿ ಎಂಬ ಸಾಗರ' ಕವನದಲ್ಲಿ ದಲಾಯಿ ಲಾಮ ಅವರು ಚೀನಿಯರ ದಬ್ಬಾಳಿಕೆಯಿಂದ ಹೊರಹಾಕಲ್ಪಟ್ಟಾಗ ಧರ್ಮಶಾಲೆಯನ್ನು ಸೇರಿದ ಕುರಿತು ಸುಂದರ ಕವನ ರಚಿಸಿದ್ದಾರೆ. ಡ್ರ್ಯಾಗನ್ ದೈತ್ಯನನ್ನು ಅಂಗುಲಿಮಾಲನಿಗೆ, ದಲಾಯಿ ಲಾಮನನ್ನು ಆಯಸ್ಕಾಂತಕ್ಕೆ ಹೋಲಿಸಿದ್ದು ಇಷ್ಟವಾಗುತ್ತದೆ. ದಲಾಯಿಯವರು ಮತ್ತೆ ಮತ್ತೆ ಜನುಮ ತಳೆದು ನಗಲಿ, ಹರಸಲಿ ಎಂದು ಕವಿಹೃದಯಿ ಬಯಸುತ್ತಾರೆ. ಮನಮುಟ್ಟುವ 'ದಲಾಯಿ ಎಂಬ ಸಾಗರ' ಕವನ ಪ್ರಸ್ತುತಿಗೆ ಧನ್ಯವಾದಗಳು ಬೆಂ. ಶ್ರೀ. ರವೀಂದ್ರ ಅವರಿಗೆ.

೧೮. ಜಿ.ವಿ. ಅರುಣ – ಹರಿ ಅನಂತ.. ಹರಿಕಥಾ ಅನಂತ

ಇಳೆಗೆ ಬಿದ್ದ ಮಳೆ, ಎದೆಗೆ ಬಿದ್ದ ಅಕ್ಷರ ಎಂದಿಗೂ ವ್ಯರ್ಥವಾಗದು ಎಂಬ ನುಡಿಯಂತೆ, ಬಾಲ್ಯದಲ್ಲಿ ಹರಿಕಥೆಗಳಿಂದ ಪ್ರಭಾವಿತರಾಗಿ ತಾವು ಕೂಡ ಹರಿಕಥೆ ಹೇಳುವಂತಾಗಬೇಕು ಎಂದುಕೊಂಡವರು ಪ್ರೊ. ಅನಂತರಾವ್. ಅದರಂತೆ ಬೆಳೆಸಿಕೊಂಡ ಪ್ರವೃತ್ತಿಯೇ ಹರಿಕಥೆ. ಮೂಲತಃ ಅನ್ವಯಿಕ ಗಣಿತಜ್ಞರಾಗಿದ್ದವರು ವಿದೇಶದಲ್ಲಿ ಸಂಸ್ಕೃತ ಶ್ಲೋಕಗಳನ್ನು

ರಾಗಬದ್ಧವಾಗಿ ಹಾಡಿ ಅದರ ವಿವರಣೆಯನ್ನು ಆಂಗ್ಲ ಭಾಷೆಯಲ್ಲಿ ನೀಡಿ ಕಿರಿಯರು, ಹಿರಿಯರೆನ್ನದೆ ಎಲ್ಲರಲ್ಲೂ ಹರಿಕಥೆಯ ಬಗ್ಗೆ ಆಸಕ್ತಿ ಮೂಡುವಂತೆ ಮಾಡಿದ್ದಾರೆ ಎಂಬುದು ಶ್ಲಾಘನೀಯ. ಹರಿಕಥೆಯಿಂದ ಪ್ರೇರೇಪಿತವಾಗಿ ಬುದ್ಧಚರಿತೆಯ ಅಧ್ಯಯನಕ್ಕೆ ತೊಡಗಿಕೊಂಡು, ಅದರ ಫಲವಾಗಿ ಅಶ್ವಘೋಷನ ಸಂಸ್ಕೃತ ಕಾವ್ಯವನ್ನು ಹಾಡಿ, ಅದರ ಮಾಧುರ್ಯವನ್ನು ಪರಿಚಯಿಸಿದ್ದಾರೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಹರಿಕಥೆಯನ್ನು ಪಸರಿಸುತ್ತಿರುವ ಇವರಿಂದ ಹರಿಕಥೆ, ಬುದ್ಧಚರಿತೆಗಳ ವಿಡಿಯೋ ಮಾಡಿ ಎಂಬ ಲೇಖಕರ ಮನವಿಗೆ ಪುರಸ್ಕಾರ ಸಿಗಲಿ. ಈ ಮೂಲಕ ಹರಿಕಥೆ ಅನಂತವಾಗಲಿ. ಅನಂತರೂ ಅನಂತರಾಗಲಿ. ಇವರ ಸಾಧನೆಯನ್ನು ಪರಿಚಯಿಸಿದ ಜಿ.ವಿ.ಅರುಣ ಅವರಿಗೆ ಧನ್ಯವಾದಗಳು.

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 239 ನಡೆದ ದಿನಾಂಕ: 12 ಜುಲೈ 2025
ಸಂಚಿಕೆಯ ಬಿಡುಗಡೆ ದಿನಾಂಕ: 31 ಆಗಸ್ಟ್ 2025

(ವಿವಿಧ ಲೇಖನಗಳಲ್ಲಿ ಬಳಸಿರುವ ಚಿತ್ರಗಳು – ಕೃಪೆ ಆಯಾ ಲೇಖಕರು ಮತ್ತು ಅಂತರ್ಜಾಲ)